ಪುಸ್ತಕ ಪ್ರಪಂಚ

ಫೆಬ್ರವರಿ-೧೯೯೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ ೫

ಫೆಬ್ರವರಿ ೧೯೯೭

ಮುಖಪುಟ: ನಾ. ಕಸ್ತೂರಿ
(ಕೃಪೆ: ಕಸ್ತೂರಿಶತಕಂ)

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

ನೂರು ತುಂಬಿದ ಕಸ್ತೂರಿ

ಮನೆ ಮಾತು ಕೊಂಕಣಿಯೊ ಮರಾಠಿಯೊ ತೆಲುಗೊ ತಮಿಳೊ ಆಗಿದ್ದರೂ ಕನ್ನಡವನ್ನೇ ಮಾತೃಭಾಷೆ ಎಂದು ಸ್ವೀಕರಿಸಿ, ಅದನ್ನೇ ತಮ್ಮ ಬದುಕುಮಾಡಿ ಕೊಂಡು, ಅದರಲ್ಲಿಯೇ ಸಾಹಿತ್ಯ ಕೃಷಿಮಾಡಿ, ಅಗ್ರಮಾನ್ಯರಾಗಿರುವ ಕವಿಶ್ರೇಷ್ಠರು ಹಲವರಿದ್ದಾರೆ. ಮಂಜೇಶ್ವರ ಗೋವಿಂದಪೈ, ಪಂಜೆ ಮಂಗೇಶರಾವ್, ಪಡುಕೋಣೆ ರಮಾನಂದರಾವ್, ಬೇಂದ್ರೆ, ಡಿವಿಜಿ, ಮಾಸ್ತಿ, ರಾಜರತ್ನಂ ಮೊದಲಾದವರು ಕನ್ನಡ ನಾಡುನುಡಿಗಳಿಗೆ ಸಲ್ಲಿಸಿರುವ ಸೇವೆ ಅಗಾಧವಾದದ್ದು. ಅವರ ಪೂರ್ವಜರು ಇಲ್ಲಿಯವರೇ ಆಗಿರಬಹುದು; ಅಥವಾ ಎರಡು ಮೂರು ತಲೆಮಾರಿನ ಹಿರಿಯರು ಹೊರಗಿನಿಂದ ಇಲ್ಲಿಗೆ ಬಂದು ನೆಲಸಿದವರಿರಬಹುದು. ಇಲ್ಲಿಯೇ ಹುಟ್ಟಿ ಬೆಳೆದವರಾದ್ದರಿಂದ ಅವರ ಮಾತೃಭಾಷೆ ಕನ್ನಡವೆಂದೇ ತಿಳಿಯ ಬಹುದಾಗಿದೆ.

ಕನ್ನಡದ ಗಂಧವೇ ಇಲ್ಲದ ವಾತಾವರಣದಲ್ಲಿ ಹುಟ್ಟಿ ಬೆಳೆದು, ಅಲ್ಲಿಯ ಭಾಷೆಯಲ್ಲಿಯೇ ವಿದ್ಯೆಕಲಿತು, ಉದ್ಯೋಗಾನ್ವೇಷಣೆಗಾಗಿ ಕರ್ನಾಟಕಕ್ಕೆ ಬಂದು, ಕೇವಲ ಐದಾರು ತಿಂಗಳಲ್ಲಿ ಕನ್ನಡ ಕಲಿತು, ಬರೆದು, ಶ್ರೇಷ್ಠ ಲೇಖಕರೆಂದು ಪ್ರಸಿದ್ಧರಾಗುವುದೇ ಒಂದು ವಿಸ್ಮಯ. ಒಂದು ಭಾಷೆಯವರು ಮತ್ತೊಂದು ಪ್ರಾಂತ್ಯಕ್ಕೆ ಸಂಸಾರವೊಂದಿಗರಾಗಿ ಹೋದಾಗ ಅವರ ಮಕ್ಕಳು ಸ್ಥಳೀಯ ಮಕ್ಕಳೊಂದಿಗೆ ಬಹುಬೇಗ ಒಂದಾಗಿ ಅವರ ಭಾಷೆಯನ್ನು ಸುಶೀಘ್ರವಾಗಿ ಅಚ್ಚುಕಟ್ಟಾಗಿ ಕಲಿಯು ವುದು ಸಹಜ. ಆದರೆ ಹುಟ್ಟಾ ಬೆಳೆಯ ಅನ್ಯವಸ್ತುಸ್ಥಿತಿಗೆ ಒಗ್ಗಿ ಕೊಂಡಿದ್ದ ವಯಸ್ಕರು, ಅದರಲ್ಲಿಯೂ ಸಾಹಿತ್ಯ ವಿದ್ಯಾರ್ಥಿಯಲ್ಲದ ವರು, ಹೊಸದಾಗಿ ಹೊಸ ಭಾಷೆಯೊಂದನ್ನು ಕಲಿತು, ಅದರಲ್ಲಿ ಪಾಂಡಿತ್ಯವನ್ನು ಸಂಪಾದಿಸಿ, ಪ್ರತಿಭಾಭಿವ್ಯಕ್ತಿಯ ಮಾಧ್ಯಮವನ್ನು ಕಂಡುಕೊಂಡು, ಶ್ರೇಷ್ಠ ಸಾಹಿತಿಯಾದದ್ದು ಸಾಮಾನ್ಯ ಸಂಗತಿಯೇ ನಲ್ಲ. ಯಾವ ದೇಶದಲ್ಲಾದರೂ ಅಂಥ ಅಪೂರ್ವ ಶಕ್ತಿಸಂಪನ್ನರು ವಿರಳ. ಆ ವಿರಳದಲ್ಲಿ ನಾ. ಕಸ್ತೂರಿಯವರೊಬ್ಬರು.

ನಾನು ೧೯೩೩ರಲ್ಲಿ ಕನ್ನಡ ಆನರ್ಸ್ ತರಗತಿಗೆ ಬಂದಾಗ, ಕನ್ನಡ ಅಧ್ಯಾಪಕರು ಹೊರತಾಗಿ, ಮೊದಲು ಪರಿಚಯಮಾಡಿಕೊಂಡ ಇತರ ಅಧ್ಯಾಪಕರೇ ನಾ. ಕಸ್ತೂರಿಯವರು. ಶ್ರೀರಾಮಕೃಷ್ಣಾಶ್ರಮದ ಭಕ್ತ ರಾಗಿ, ಆಗಾಗ್ಗೆ ಅವರು ಆಶ್ರಮಕ್ಕೆ ಬರುತ್ತಿದ್ದುದರಿಂದ, ನಾನು

ಆಶ್ರಮ ನಡಸುತ್ತಿದ್ದ ವಿದ್ಯಾರ್ಥಿನಿಲಯದ ನಿವಾಸಿಯಾದುದರಿಂದ ಅವರ ಪರಿಚಯ ಸುಲಭವಾಗಿ ನನಗೆ ಲಭಿಸುತ್ತದೆ. ಅವರು ಮಹಾರಾಜಾ ಕಾಲೇಜಿನಲ್ಲಿ ಕಲಿಸುತ್ತಿದ್ದುದು ಇತಿಹಾಸ, ಬರೆಯುತ್ತಿದ್ದುದು ಕನ್ನಡ ಸಾಹಿತ್ಯ, ಇಟ್ಟುಕೊಂಡಿದ್ದ ಹವ್ಯಾಸ ಸಮಾಜಸೇವೆ, ಗ್ರಾಮಸೇವೆ, ಸಾಕ್ಷರತಾ ಪ್ರಚಾರ ಅವರು ಆಶ್ರಮದ ಹೆಸರಿನಲ್ಲಿ, ಸ್ವಾಮಿಗಳ ಸಹಕಾರದೊಡನೆ ಹಮ್ಮಿಕೊಂಡಿದ್ದ ಸೇವಾಯೋಜನೆಗಳು. ವಿದ್ಯಾರ್ಥಿನಿಲಯದ ಆಯ್ದ ಸ್ವಯಂಸೇವಕರನ್ನವರು ಆ ಯೋಜನೆಗಳಿಗೆ ಬಳಸಿಕೊಳ್ಳುತ್ತಾರೆ. ಪಡುವಾರಹಳ್ಳಿ, ಕೂರ್ಗಳ್ಳಿ ಮೊದಲಾದ ಮೂರ್ನಾಲ್ಕು ಗ್ರಾಮಗಳಲ್ಲಿ ಯೋಜನೆಗಳನ್ನವರು ಕಾರ್ಯಗತಗೊಳಿಸುತ್ತಾರೆ. ಅವರ ನೇತೃತ್ವದಲ್ಲಿ ಸ್ವಯಂಸೇವಕರು ಹಾರೆ ಗುದ್ದಲಿ ಮಂಕರಿ ಪೊರಕೆ ಕುಡುಗೋಲುಗಳನ್ನು ಹಿಡಿಯಬೇಕಾಗುತ್ತದೆ. ಕಸ್ತೂರಿಯವರು ಆಶುಭಾಷಣ ಆಶುನಾಟಕಗಳ ಮೂಲಕ ಗ್ರಾಮಸ್ಥರ ಹೃದಯವನ್ನಾಕರ್ಷಿಸುತ್ತಾರೆ. ಪುರಾಣ ಪುಣ್ಯಕಥೆಗಳ ಮೂಲಕ ಹಳ್ಳಿಗರಿಗೆ ಆಧುನಿಕ ವಿಚಾರಗಳನ್ನು ತಿಳಿಸುತ್ತಾರೆ. ಪಾಂಡವರ ಏಕಚಕ್ರ ನಗರದ ವಾಸ್ತವ್ಯ ಸಂದರ್ಭದ, ಭರತನ ನಂದಿಗ್ರಾಮದ ಬಿಡಾರಾವಧಿಯ ವಸ್ತುವನ್ನಾಧರಿಸಿ, ನಿಂತಲ್ಲಿಯೇ ನಾಟಕವನ್ನು ರಚಿಸಿ, ವಿದ್ಯಾರ್ಥಿಗಳಿಗೆ ಕಲಿಸಿ, ಆಡಿಸುತ್ತಾರೆ. ಸೇವಾ ಯೋಜನೆಯೆಂದರೆ ಕೇವಲ ರಸ್ತೆ ನಿರ್ಮಾಣ ಮತ್ತು ಪಾಕೀಜ ಕಾರ್ಯವಲ್ಲ; ಜತೆಗೆ ಗ್ರಾಮಸ್ಥರ ಒಳ್ಳೆಯ ಬದುಕಿಗೆ ಬೇಕಾದ ತಿಳಿವಳಿಕೆಯನ್ನು ಕಲಾಮಾಧ್ಯಮಗಳ ಮೂಲಕ ನೀಡುತ್ತಾರೆ. ಅವರು ಬಳಸುತ್ತಿದ್ದುದು ಹಳ್ಳಿಗರ ಹೃದಯವನ್ನು ಮುಟ್ಟುವ ಶಟ್ಟು ಭಾಷೆಯಾದ್ದರಿಂದ, ತಮ್ಮ ಊರಿಗೆ ಕಸ್ತೂರಿಯವರು ಬರುವುದನ್ನೇ ಜನ ಕಾಯುತ್ತಾರೆ. ಕಸ್ತೂರಿಯವರ ತಿಳಿಯಾದ ಹಾಸ್ಯ, ರುಚಿಯಾದ ಭಾಷೆ ಜನರ ಮನ ಹೃದಯಗಳನ್ನು ಸೆರೆ ಹಿಡಿಯುತ್ತವೆ. ಕೇರಳದಲ್ಲಿ ಹುಟ್ಟಿಬೆಳೆದ ಈ ವ್ಯಕ್ತಿ ತಾನು ನಿಂತಲ್ಲಿಯ ಜನರ ಬದುಕಿನಲ್ಲಿ ಆಳವಾಗಿ ಬೇರು ಬಿಟ್ಟದ್ದೇ ವಿಸ್ಮಯಕರ ಸಂಗತಿ. ಅವರು ನಿಜವಾದ ಭಾರತೀಯರಾದ್ದರಿಂದ, ಭಾರತೀಯರ ಕಷ್ಟಕಾರ್ಪಣ್ಯ ಸಮಸ್ಯೆಗಳನ್ನು ಬಲ್ಲವರಾದ್ದರಿಂದ, ಇಂಡಿಯಾದ ಯಾವ ಭಾಗಕ್ಕೆ ಹೋದರೂ ಅಲ್ಲಿಯ ಜನಜೀವನದಲ್ಲಿ ವಿಲೀನಗೊಳ್ಳುವ ಅದ್ಭುತ ಸಾಮರ್ಥ್ಯ ಅವರದು.

ಪ್ರತಿವರ್ಷವೂ ಹೊರಗಿನಿಂದ ಕರ್ನಾಟಕಕ್ಕೆ ಉದ್ಯೋಗಾನ್ವೇಷಿಗಳು, ವಲಸಿಗರು, ಅಧಿಕಾರಿಗಳು, ವಿದ್ವಾಂಸರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇಪ್ಪತ್ತು ಮೂವತ್ತು ವರ್ಷಗಳು ಇಲ್ಲಿ ನೆಲಸಿ, ಇಲ್ಲಿ

ಸೌಕರ್ಯಗಳನ್ನೆಲ್ಲ ಬಳಸಿಕೊಂಡು ಸುಖಲೋಲುಪರಾಗಿ ಮೆರೆದವರು, ಮೆರೆಯುತ್ತಿರುವವರು ಇಲ್ಲಿಯ ಬದುಕಿನಲ್ಲಿ ಒಂದಾಗಿಲ್ಲ, ಇಲ್ಲಿಯ ಭಾಷೆಯನ್ನು ಕಲಿತಿಲ್ಲ, ಇಲ್ಲಿಯ ಜನರ ಕಷ್ಟನಿಷ್ಠುರಗಳನ್ನರಿತುಕೊಂಡಿಲ್ಲ. ತಾವಾಯ್ತು, ತಮ್ಮ ಕುಟುಂಬವಾಯ್ತು, ತಮ್ಮ ಭೋಗ ಜೀವನವಾಯ್ತು. ಅವರು ಸಮಾಜ ವಿದ್ರೋಹಿಗಳೆಂದರೂ ಸಲ್ಲುತ್ತದೆ, ದೇಶದ್ರೋಹಿಗಳೆಂದರೂ ಒಪ್ಪುತ್ತದೆ. ಕಸ್ತೂರಿಯವರು ಅಂಥ ನೀಚ ಸಂತಾನಕ್ಕೆ ಸೇರಿದವರಲ್ಲ.

ಅವರು ಮೈಸೂರಿಗೆ ಬಂದದ್ದು ೧೯೩೫ರ ಸರಿಸುಮಾರಿನಲ್ಲಿ ಬನುಮಯ್ಯ ಹೈಸ್ಕೂಲಿನ ಉಪಾಧ್ಯಾಯರಾಗಿ. ಯಾರನ್ನಾದರೂ ಪ್ರಪ್ರಥಮತಃ ಭೇಟಿಯಾದಾಗ, ಅವರನ್ನು ಹೇಗೆ ಸಂಬೋಧಿಸಬೇಕೆಂದು ಅವರು ರೈಲಿನಲ್ಲಿ ಸಹಪ್ರಯಾಣಿಕರೊಬ್ಬರನ್ನು ಕೇಳಿದರಂತೆ. ಸಹಪ್ರಯಾಣಿಕ ನಡತೆಗೆಟ್ಟವನೆಂದು ತೋರುತ್ತದೆ. 'ಬೋ....ಸೂ....ಮಗ' ಎಂಬ ಮಾತುಗಳನ್ನವನು ಕಸ್ತೂರಿಯವರಿಗೆ ಬಾಯಿಪಾಠಮಾಡಿಸುತ್ತಾನೆ. ಕಸ್ತೂರಿಯವರು ತಾವು ಕಲಿತ ಪಾಠವನ್ನು ಶಾಲೆಯ ಮುಖ್ಯೋಪಾಧ್ಯಾಯರ ಮೇಲೆ ಪ್ರಯೋಗಿಸುತ್ತಾರೆ. ಮುಖ್ಯೋಪಾಧ್ಯಾಯರು ವಿಸ್ಮಯಗೊಳ್ಳುತ್ತಾರೆ, ಯಾರೋ ಖದೀಮ ಅವರಿಗೆ ಮೋಸಮಾಡಿದ್ದಾನೆಂದು ಊಹಿಸುತ್ತಾರೆ. ಅವರು ಗೊಳ್ಳನೆ ನಕ್ಕು ಕಸ್ತೂರಿಯವರ ತಪ್ಪನ್ನು ತೋರಿಸಿಕೊಡುತ್ತಾರೆ. ಅಂದೇ ಕಸ್ತೂರಿಯವರ ಕನ್ನಡ ಕಲಿಕೆ ಪ್ರಾರಂಭವಾಗುತ್ತದೆ. ಕೇರಳದವರಾದ ಅವರ ಮನೆಮಾತು ತಮಿಳು, ಕಲಿತದ್ದು ಮಲೆಯಾಳಿ ಇಂಗ್ಲಿಷ್ ಸಂಸ್ಕೃತ.

ಸುಮಾರು ಅದೇ ಸಮಯದಲ್ಲಿ ಶ್ರೀರಾಮಕೃಷ್ಣಾಶ್ರಮದ ಒಂದು ಶಾಖೆ ಮೈಸೂರಲ್ಲಿ ಪ್ರಾರಂಭವಾಗಿತ್ತು. ಸನ್ಯಾಸ ಸ್ವೀಕರಿಸಿದ್ದ ಕೊಚ್ಚಿಯ ರಾಜಮನೆತನದ ಪ್ರತಿಭಾವಂತ ಯುವಕರೊಬ್ಬರು ಆ ಮಠದ ಅಧ್ಯಕ್ಷರಾಗಿದ್ದರು. ಸಹಜವಾಗಿಯೇ ಕಸ್ತೂರಿಯವರು ಸ್ವಾಮಿ ಸಿದ್ಧೇಶ್ವರಾನಂದರ ಆಕರ್ಷಣೆಗೊಳಗಾಗಿ, ಮಠದ ಬೆಳವಣಿಗೆಯಲ್ಲಿ ಆಸಕ್ತರಾಗುತ್ತಾರೆ. ಅದೇ ಕಾಲದಲ್ಲಿ ಕುವೆಂಪು ಮಠದ ಪ್ರಭಾವಕ್ಕೊಳಗಾಗಿದ್ದರು. ಸ್ವಾಮಿಜೀಯವರಿಗೆ ನಿಕಟವಾಗಿದ್ದರು. ಅಲ್ಲಿ ಕಸ್ತೂರಿಯವರಿಗೆ ಕುವೆಂಪು ಅವರ ಸ್ನೇಹ ದೊರೆಯುತ್ತದೆ. ಅವರ ಸಂಪರ್ಕದಿಂದಾಗಿ ಕಸ್ತೂರಿಯವರ ಕನ್ನಡಕ್ಕೆ ವಜ್ರದ ಸಾಣೆ ಒದಗಿದಂತಾಗುತ್ತದೆ. ಅಲ್ಲಿಂದಾಚೆಗೆ ಅವರ ಪ್ರಖರಧೀಶಕ್ತಿಗೆ, ಅನುಭವ ಸಂಪನ್ನತೆಗೆ ಮೇಲಿಂದ ಮೇಲೆ ಹೊರಬಿದ್ದ ಗ್ರಂಥಗಳೆ ಸಾಕ್ಷಿಗಳಾಗಿವೆ. ಕೆಲವರ

ದೃಷ್ಟಿಯಲ್ಲಿ ಶೃಂಗಾರವೆ ರಸರಾಣಿಯಾದರೆ, ಕಸ್ತೂರಿಯವರ ಅಭಿಪ್ರಾಯದಲ್ಲಿ ಹಾಸ್ಯವೆ ರಸರಾಜ. ಮಾತಿನಲ್ಲಿ ವಿನೋದ, ಸಾಹಿತ್ಯದಲ್ಲಿ ಹಾಸ್ಯ, ಬದುಕಿನಲ್ಲಿ ಸದಾನಗೆ, ಆದ್ದರಿಂದ ಅವರು ಹಾಸ್ಯಚಕ್ರವರ್ತಿ ಎಂದೇ ಕನ್ನಡಿಗರಿಗೆ ಪ್ರಿಯರಾಗಿದ್ದಾರೆ.

ಕಸ್ತೂರಿಯವರಿಗೆ ಯಾವುದು ಹೆಚ್ಚು ಇಷ್ಟ? ಇತಿಹಾಸವೊ, ಸಾಹಿತ್ಯವೊ, ಸಮಾಜಸೇವೆಯೊ ಎಂದು ಯಾರಾದರೂ ಪ್ರಶ್ನಿಸಬಹುದು. ಬಹುಮುಖ ಪ್ರತಿಭೆಯ ದಾಶರಥ ಸಾಮರ್ಥ್ಯದ, ಅಕ್ಷಯ ಬುದ್ಧಿಯ ಆ ಸಾಹಸಿಗೆ ಇಷ್ಟವಲ್ಲದ್ದು ಯಾವುದೂ ಇಲ್ಲ. ಜಗತ್ತಿಗೆ ಲೇಸಾಗುವುದಾದರೆ ಎಂಥ ತ್ಯಾಗಕ್ಕಾದರೂ ಅವರು ಸಿದ್ಧ. ಅವರ ಸಂಪರ್ಕದಿಂದಾಗಿ ನನಗೂ ಗ್ರಾಮಸೇವೆಯ ಹುಚ್ಚು ಹೆಚ್ಚುತ್ತದೆ. ದೇಶಾಭ್ಯುದಯಕ್ಕೆ ಗ್ರಾಮಸೇವೆಯೇ ಮೂಲಮಾನವೆನಿಸುತ್ತದೆ. ಆ ಅನಿಸಿಕೆಯ ಫಲವಾಗಿ ನನ್ನೂರಿನಲ್ಲಿ ಜ್ಞಾನೋದಯ ಸಂಘ ತಲೆಯೆತ್ತುತ್ತದೆ. ೧೯೩೯ರಲ್ಲಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಪ್ರಣವೇಶಾನಂದರೂ ಶ್ರೀ ನಾ. ಕಸ್ತೂರಿಯವರೂ ನಾಗರಿಕತೆಯ ಸಂಪರ್ಕವಿಲ್ಲದ ಆ ಹಳ್ಳಿಗೆ ಸಂಘದ ಉದ್ಘಾಟನೆಗಾಗಿ ಬರುತ್ತಾರೆ. ಪ್ರಯಾಣ ಮೂರನೆ ದರ್ಜೆಯ ರೈಲಿನಲ್ಲಿ ಮತ್ತು ಎತ್ತಿನ ಗಾಡಿಯಲ್ಲಿ; ಬಿಡಾರ ಹೂಡಿದ್ದು ಯಾವ ನಾಗರಿಕ ಸೌಕರ್ಯಗಳೂ ಇಲ್ಲದ ಸೆಗಣಿ ನೆಲದ ಕೋಣೆಯಲ್ಲಿ. ಅವರಲ್ಲಿ ಸುಮಾರು ೨೪ ಗಂಟೆಗಳ ಕಾಲ ತಂಗುತ್ತಾರೆ. ಚೌಡೇಶ್ವರಿ ದೇವಾಲಯದ ಮುಂದೆ ಸುತ್ತಮುತ್ತಣ ಹಳ್ಳಿಗಳ ಜನ ಸೇರಿದ್ದ ಸಭೆಯಲ್ಲಿ ವಿದ್ಯೆಯ ಮಹತ್ವವನ್ನೂ ಆರೋಗ್ಯ ಪಾಲನೆಯ ಅಗತ್ಯವನ್ನೂ, ವಿವೇಕಾನಂದರ ಸಂದೇಶವನ್ನೂ ಕುರಿತು ಅವರಿಬ್ಬರೂ ಮಾತಾಡುತ್ತಾರೆ, ಅನಂತರ ಊರಿನ ಮುಖಂಡರ ಸಭೆ ಸೇರಿಸಿ, ಅವರ ಕರ್ತವ್ಯವನ್ನು ವಿವರಿಸುತ್ತಾರೆ. ಸಮಾಜಸೇವೆ ಎಂದರೆ ಮುಗಿಯಿತು, ಅವರು ಎಂಥ ತೊಂದರೆಯನ್ನಾದರೂ ಅನುಭವಿಸಲು ಸಿದ್ಧರಾಗಿದ್ದರು.

ಮಹಾರಾಜ–ಯುವರಾಜ ಕಾಲೇಜುಗಳ ವಿದ್ಯಾರ್ಥಿಸಂಘದ ವಾರ್ಷಿಕೋತ್ಸವ ಸಮಯದಲ್ಲಿ ಅವರಿಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳು ಪೂರ್ಣಗೊಳ್ಳುವಂತಿರಲಿಲ್ಲ. ತಮಗೆ ಗೊತ್ತಿದ್ದ ವಿದ್ಯಾರ್ಥಿಗಳನ್ನು ಕಲೆಹಾಕಿ, ಕೂತೇಟಿನಲ್ಲಿಯೇ ನಾಟಕವನ್ನು ಹೇಳಿಬರೆಸಿ ಆಡಿಸುತ್ತಾರೆ. ಪದವಿದಾನಸಮಾರಂಭ ಸಮಯದಲ್ಲಿ ಪದವೀಧರರ ಪ್ರೀತ್ಯರ್ಥವಾಗಿ 'ಗಗ್ಗಯ್ಯನ ಗಡಿಬಿಡಿ' ನಾಟಕವನ್ನು ಸ್ಥಳದಲ್ಲಿಯೇ ಸಿದ್ಧ

ಗೊಳಿಸಿ, ಪ್ರದರ್ಶಿಸಿದ ಸಂಗತಿಯು ನೆನಪು ನನ್ನ ಮನಸ್ಸಿನಲ್ಲಿನ್ನೂ ಹಸು ರಾಗಿದೆ.

'ಏಕಚಕ್ರ' ಅವರ ಅಂಥದೇ ಒಂದು ನಾಟಕ. ಆಗ ವಿಶ್ವವಿದ್ಯಾ ನಿಲಯದ ಮನೋವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಡಾ|| ಎಂ. ವಿ. ಗೋಪಾಲಸ್ವಾಮಿಯವರು ವಾಣಿವಿಲಾಸ ಮೊಹಲ್ಲಾದಲ್ಲಿ ಕೃಷ್ಣರಾಜ ಸಾಗರ ರಸ್ತೆಯಲ್ಲೊಂದು ಮನೆಯನ್ನು ಬಾಡಿಗೆಗೆ ಪಡೆದು, ಖಾಸಗಿ ಯಾಗಿ ರೇಡಿಯೋ ಪ್ರಸಾರ ಕೇಂದ್ರವನ್ನು ನಡಸುತ್ತಿದ್ದರು. ಕಸ್ತೂರಿ ಯವರು ಅಲ್ಲಿಯ ಕಾರ್ಯಚಟುವಟಿಕೆಗಳಿಗೆ ಚಾಲಕಶಕ್ತಿಯಾಗಿದ್ದರು. ಕಾರ್ಯಕ್ರಮ ಸಂಯೋಜನೆಯ ಜವಾಬ್ದಾರಿಯೂ ಅವರದೇ. ನಾನೂ ಸೇರಿದಂತೆ ಆಶ್ರಮದ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಒಂದೆರಡುಸಲ ನಾಟಕಗಳನ್ನು ಅವರೇ ಪ್ರಸಾರಮಾಡಿದ್ದುಂಟು. ಅವುಗಳಲ್ಲಿ ಏಕಚಕ್ರವೂ ಒಂದು. ಅವರ ನಾಟಕಗಳೆಲ್ಲ ಹೆಚ್ಚುಕಡಮೆ ಆಶುನಾಟಕಗಳೆಂದೇ ಹೇಳ ಬಹುದು.

೧೯೪೩ ಅಥವಾ ೧೯೪೪ನೆಯ ಇಸವಿಯೆಂದು ತೋರುತ್ತದೆ. ಆ ಹೊತ್ತಿಗೆ ಸರ್ಕಾರ ಗೋಪಾಲಸ್ವಾಮಿಯವರ ರೇಡಿಯೋ ಕೇಂದ್ರವನ್ನು ವಹಿಸಿಕೊಂಡು, ಗೋಪಾಲಸ್ವಾಮಿಯವರನ್ನು ಗೌರವ ನಿರ್ದೇಶಕರನ್ನಾ ಗುಳಿಸಿಕೊಂಡು, ಕಸ್ತೂರಿಯವರ ಸೇವೆಯನ್ನು ವಿಶ್ವವಿದ್ಯಾನಿಲಯ ದಿಂದ ಎರವಲು ಪಡೆದು, ಸಹಾಯಕ ನಿರ್ದೇಶಕರನ್ನಾಗಿ ನೇಮಿಸಿ ಕೊಳ್ಳುತ್ತದೆ. ನಾನು ಕಾರ್ಯನಿರ್ವಾಹಕ ಸಹಾಯಾಧಿಕಾರಿಯಾಗ ಬೇಕೆಂಬುದು ಕಸ್ತೂರಿಯವರ ಆಸೆ. ಗೋಪಾಲಸ್ವಾಮಿಯವರು ನನ್ನನ್ನು ಕರೆಸಿ, ಸಂದರ್ಶಿಸಿ, ಶಿಫಾರಸುಮಾಡಿದ್ದೂ ಆಯಿತು. ಶೀನಂಶ್ರೀ ಯವರು ಒತ್ತಾಯಿಸಿದರೂ, ನನಗೇಕೋ ಆ ಹುದ್ದೆ ಹಿಡಿಸಲಿಲ್ಲ. ಆ ಸಂಸ್ಥೆಗೆ ಆಕಾಶವಾಣಿ ಎಂದು ಹೆಸರಿಟ್ಟು, ಅದರ ತಳಹದಿಯನ್ನು ಸುಭದ್ರವಾಗಿ ನಿರ್ಮಿಸಿದ ಕೀರ್ತಿ ನಾ. ಕಸ್ತೂರಿಯವರಿಗೆ ಸಲ್ಲುತ್ತದೆ.

ನಾನು ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕನಾದ ಹೊತ್ತಿನಲ್ಲಿ ನನಗೆ ಮಾರ್ಗದರ್ಶನ ನೀಡಿದ ಹಿರಿಯರವರು. 'ಅಂದಿನ ಪಾಠವನ್ನು ಓದದೆ, ಅಗತ್ಯವೆನಿಸಿದಾಗ ಟಿಪ್ಪಣಿ ಮಾಡಿಕೊಳ್ಳದೆ ತರಗತಿಗೆ ಹೋಗಬೇಡ. ತರಗತಿಯಲ್ಲಿ ಬುರುಡೆ ಬಿಡಬೇಡ, ನಿತ್ಯಾಭ್ಯಾಸಂಗ ನಿನ್ನ ಬದುಕಿನ ಒಂದು ಭಾಗವಾಗಬೇಕು. ಗೊತ್ತಿಲ್ಲದ್ದನ್ನು ಒಪ್ಪಿಕೊಳ್ಳುವ ನೈತಿಕ ಧೈರ್ಯವನ್ನು ಬೆಳೆಸಿಕೊ. ದಿನದಿನವೂ ಹೊಸ ಹೊಸ ವಿಷಯಗಳನು

ಸಂಗ್ರಹಿಸಿದರೆ ಮಾತ್ರ ನೀನು ಉತ್ತಮ ಬೋಧಕನಾಗ ಬಲ್ಲೆ. ಪದವಿ ತರಗತಿಯ ಹುಡುಗರು ಬೆಳೆದವರಾದ್ದರಿಂದ ಅವರೊಡನೆ ಸ್ನೇಹಿತನಂತೆ ವರ್ತಿಸು, ಒಂದು ಪಕ್ಷ ಅವರು ನಿನ್ನನ್ನು ಚುಡಾಯಿಸುವುದಾದರೆ ತಾಳ್ಮೆ ಕಳೆದುಕೊಳ್ಳಬೇಡ. ಬಯ್ಯಬೇಕಾದ ಸಂದರ್ಭವೊದಗಿದಾಗ ಕನ್ನಡ ಬಳಸಬೇಡ, ಇಂಗ್ಲಿಷನ್ನೆ ಬಳಸು. ವಿದ್ಯಾರ್ಥಿಗಳ ಗೌರವ ಸಂಪಾದನೆ ಗಿರುವ ಏಕೈಕ ಮಾರ್ಗವೆಂದರೆ ವಿದ್ವತ್ಸಂಪಾದನೆ.' ಅವರ ಆ ಉಪದೇಶವ ನ್ನೆಂದೂ ನಾನೂ ಮರೆತಿಲ್ಲ.

ಅವರು ನಿವೃತ್ತರಾಗಿ ಪುಟ್ಟಪರ್ತಿ ಸೇರಿದನಂತರ ಅವರನ್ನೊಂದು ಸಲವೊ ಎರಡು ಸಲವೊ ಭೇಟಿಮಾಡಿದ್ದುಂಟು. ಪುಟ್ಟಪರ್ತಿಯ ಕೀರ್ತಿ ಪ್ರಸಾರಕ್ಕೆ ಕಸ್ತೂರಿಯವರ ಕಾಣಿಕೆ ಸಾಕಷ್ಟಿದೆ. ಕಸ್ತೂರಿ ಎಲ್ಲಿದ್ದರೂ ಪರಿಮಳ ವಿಕೀರ್ಣವೆ ಅದರ ಧರ್ಮವಲ್ಲವೆ?

ದೇಜಗೌ



ನಾ. ಕಸ್ತೂರಿ ಮತ್ತು ವಯಸ್ಕರ ಶಿಕ್ಷಣ

ಚಂದ್ರಶೇಖರಾರಾಧ್ಯ
೧೪೫, 'ಇಂಚರ', ಎಂ. ಬ್ಲಾಕ್
೩ನೆಯ ಹಂತ, ಕುವೆಂಪುನಗರ, ಮೈಸೂರು-೨೩

ನಾ. ಕಸ್ತೂರಿ ಅವರು (೧೮೯೭–೧೯೮೭) ಹುಟ್ಟಿದ್ದು ಕೇರಳ. ಮನೆಮಾತು ತಮಿಳು, ಕಾರ್ಯಕ್ಷೇತ್ರ ಕನ್ನಡನಾಡು, ಕೊನೆಯುಸಿರೆಳೆದದ್ದು ಆಂಧ್ರ. ಹೀಗೆ ಕಸ್ತೂರಿ ಅವರ ಪರಿಮಳ ವ್ಯಾಪ್ತಿ ವಿಶಾಲ. ಕೈಲಾಸಂ ಕನ್ನಡ, ರಾಜರತ್ನಂ ಕನ್ನಡದಂತೆ ಕಸ್ತೂರಿ ಕನ್ನಡವೂ ವಿಶಿಷ್ಟ ಗಂಧಪೂರ್ಣ. ಅನರ್ಥದಲ್ಲಿ ಅರ್ಥಚಿಮ್ಮಿಸುವ ಕಲೆಗಾರಿಕೆ ಕಸ್ತೂರಿ ಅವರಿಗೆ ಕರಗತ. ಘನವಿದ್ವಾಂಸ, ಶ್ರೇಷ್ಠ ಪ್ರಾಧ್ಯಾಪಕ, ದಕ್ಷ ಆಡಳಿತಗಾರ, ಸೃಜನಶೀಲ ಲೇಖಕ, ವಿಡಂಬನ ಸಾಹಿತಿ, ಕಳಕಳಿಯ ಸಮಾಜ ಸೇವಾಕರ್ತ, ಕ್ರಿಯಾಶೀಲ ವಯಸ್ಕರ ಶಿಕ್ಷಣ ಕಾರ್ಯಕರ್ತ ಇವೆಲ್ಲವೂ ಆಗಿದ್ದರು ಕಸ್ತೂರಿ. ಬಹುಮುಖ ವ್ಯಕ್ತಿತ್ವದ ಈ ಕ್ರಿಯಾಶೀಲ ಚಿಂತಕ ವಯಸ್ಕರ ಶಿಕ್ಷಣಕ್ಕೆ ಸಲ್ಲಿಸಿದ ಸೇವೆಯ ಒಂದು ಮುಖವನ್ನು ಮಾತ್ರ ಈ ಲೇಖನದಲ್ಲಿ ಪರಿಚಯಿಸಿದೆ.

ನಲವತ್ತರ ದಶಕದಲ್ಲಿ ಮೈಸೂರು ನಗರದಲ್ಲಿ ಆರಂಭವಾದ ವಯಸ್ಕರ ಶಿಕ್ಷಣ ಚಳುವಳಿಯ ನೆಲೆ ಮೈಸೂರು ಯೂನಿವರ್ಸಿಟಿ ಯೂನಿಯನ್. ಇದರ ಚಾಲಕ ಮತ್ತು ಪ್ರೇರಕ ಶಕ್ತಿ ನಾ. ಕಸ್ತೂರಿ. ವಿಶ್ವವಿದ್ಯಾನಿಲಯದ ಅಧ್ಯಾಪಕರು ಹಾಗೂ ವಿದ್ಯಾರ್ಥಿ ಸ್ವಯಂಸೇವಕರನ್ನು ಕಲೆಹಾಕಿ, ಹುರಿದುಂಬಿಸಿ, ಮೈಸೂರು ಸಮೀಪದ ಹಳ್ಳಿಗಳಿಗೆ ಕರೆದೊಯ್ದು ಸಮಾಜಸೇವೆ ಹಾಗೂ ಶಿಕ್ಷಣ ಪ್ರಸಾರದ ಮಹತ್ಕಾರ್ಯದಲ್ಲಿ ತೊಡಗಿದ ಮುಂಚೂಣಿಯ ಸೇನಾನಿ.

ಕಲಿಯುವವರ ಅನಾಸಕ್ತಿ, ಕಲಿಸುವವರ ನಿರಾಸಕ್ತಿಗೆ ಮದ್ದರೆದು ಈ ವರ್ಗದವರೂ ಸ್ವಪ್ರೇರಣೆಯಿಂದ ಪಾಲ್ಗೊಳ್ಳುವಂತೆ ಮಾಡುವ ಮಾಂತ್ರಿಕ ಕಲೆ ಇವರಿಗೆ ಕರಗತವಾಗಿತ್ತು. ಅನಕ್ಷರಸ್ಥರ ಬಗ್ಗೆ ಇವರಿಗಿದ್ದ ಪ್ರಾಮಾಣಿಕ ಕಳಕಳಿ ಹಾಗೂ ವಯಸ್ಕರ ಶಿಕ್ಷಣದ ಬಗ್ಗೆ ಇದ್ದ ದೃಢವಿಶ್ವಾಸ ಇದಕ್ಕೆ ಕಾರಣವಾಗಿತ್ತು. ವಯಸ್ಕರ ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸಿ, ಕಲಿಯದವರ ಹೊಣೆ ಕಲಿತವರದು ಎಂಬ ಜವಾಬ್ದಾರಿಯನ್ನು ದೀಕ್ಷೆಯಾಗಿ ಕೈಗೊಂಡು ನಾನಾ ಪ್ರಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಆದ್ದರಿಂದಲೇ ಅಕ್ಷರ ಕಲಿಕೆಯಂತಹ ನೀರಸ ಅನುತ್ತೇಜಕ ಪರಿಸರವೂ ಇವರ ಸಹವಾಸದಿಂದ ನಿರಂತರ ಚಟುವಟಿಕೆಯ ತಾಣವಾಯಿತು.

ಅನಕ್ಷರತೆಯ ಶಾಪ, ಸಾಕ್ಷರತೆಯ ಪ್ರಯೋಜನಗಳನ್ನು ಜನತೆಗೆ ಪರಿಚಯಿಸಲು ಕಸ್ತೂರಿ ಅವರು ಆಯ್ದುಕೊಂಡ

ಮಾಧ್ಯಮ ವಿಶಿಷ್ಟವಾದುದು. ಪುರಾಣ, ಪುಣ್ಯಕತೆ, ರಾಮಾಯಣ, ಮಹಾಭಾರತದಿಂದ ಸನ್ನಿವೇಶಗಳನ್ನು ಆಯ್ದುಕೊಂಡು ಹರಿಕತೆ, ಹರಟೆ, ನಾಟಕ, ಲಾವಣಿ ಮುಂತಾದವುಗಳ ಮೂಲಕ ನವುರಾದ ಹಾಸ್ಯ ರಸಾಯನದಲ್ಲಿ ಅದ್ದಿ ತೆಗೆದು, ಕೇಳುಗರಿಗೆ ಮನಂಬುಗುವಂತೆ ನಿರೂಪಿಸುತ್ತಿದ್ದರು. ಆದರೆ ಹಾಸ್ಯದ ಮೆರುಗಿನ ಹಿಂದೆ ಕಟು ವಾಸ್ತವತೆಯೂ ಅಡಗಿರುತ್ತಿತ್ತು. ನಿಜವಾದ ವಯಸ್ಕರ ಶಿಕ್ಷಣ ಕಾರ್ಯಕರ್ತನಾಗಿ ಜನರ ಹತ್ತಿರಹೋಗಿ, ಅವರನ್ನು ಪ್ರೀತಿಸಿ, ಅವರಲ್ಲಿ ಕಲೆತು ಬೆರೆತು, ಅವರಿಂದ ಕಲಿತು, ಅನಂತರ ಅವರಿಗೆ ಕಲಿಸುವ ಕಾಯಕದಲ್ಲಿ ತೃಪ್ತಿಕಂಡವರು ಕಸ್ತೂರಿ.

ವಯಸ್ಕರ ಶಿಕ್ಷಣ ಸಮಿತಿಯ ಬೆಳಕು ನವಸಾಕ್ಷರರ ವಾರಪತ್ರಿಕೆ ಹಾಗೂ ಪುಸ್ತಕ ಪ್ರಪಂಚ ಮಾಸಿಕಕ್ಕೆ ಲೇಖನ ಬರೆಯುತ್ತಿದ್ದ ಕಸ್ತೂರಿ ಅವರು ಸಮಿತಿಯ ನವಸಾಕ್ಷರ ಮಾಲೆಗೆ 'ಏಕಚಕ್ರ' (ಕಿರುನಾಟಕ), 'ಹಾಸ್ಯದ ಚಟಾಕಿಗಳು', 'ಶ್ರೀ ಕೃಷ್ಣ ರಾಜೇಂದ್ರ ಒಡೆಯರವರು' ಹಾಗೂ 'ನವರಾತ್ರಿ ಕೆಂಪ ಮೈಸೂರಿಗೆ ಹೋದದ್ದು' ಎಂಬ ಕಿರುಕೃತಿಗಳನ್ನು ರಚಿಸಿಕೊಟ್ಟಿದ್ದಾರೆ.

ನವರಾತ್ರಿ ಕೆಂಪ ಮೈಸೂರಿಗೆ ಹೋದದ್ದು ಕೃತಿಯು ಹಳ್ಳಿಯ ಅನಕ್ಷರಸ್ಥನೊಬ್ಬ ಮೈಸೂರು ದಸರಾ ನೋಡಿ ಬಂದ ಪ್ರವಾಸ ಕಥನವಾಗಿದೆ. ತನಗೆ ತಿಳಿಯದ ಭಾಷೆಯಲ್ಲಿ ವ್ಯವಹರಿಸುವಾಗ ಅಕ್ಷರಸ್ಥ ಹಾಗೂ ಅನಕ್ಷರಸ್ಥನ ಬವಣೆಗಳು ಸಾಧಾರಣವಾಗಿ ಏಕರೂಪವಾಗಿರುತ್ತವೆ. ನಾ. ಕಸ್ತೂರಿ ಅವರು ತಮ್ಮ ಸೇವೆಯ ಆರಂಭದ ದಿನಗಳಲ್ಲಿ ತಮಗೆ ತಿಳಿಯದಿದ್ದ ಕನ್ನಡದಲ್ಲಿ ವ್ಯವಹರಿಸುವಾಗ ಅವರೊಬ್ಬ ವಯಸ್ಕರ ಶಿಕ್ಷಣಾರ್ಥಿಯಂತೆ ಭಾಷಾ ಕಲಿಕೆಯಲ್ಲಿ ತೊಡಗಿಸಿಕೊಂಡರು. ಆ ಅನುಭವವೆ ನವರಾತ್ರಿ ಕೆಂಪ ಮೈಸೂರಿಗೆ ಹೋದದ್ದು ಕೃತಿ ರಚನೆಗೆ ಪ್ರೇರಣೆಯಾಗಿರಬಹುದು. ನಿರಕ್ಷರತೆಯ ಪರಿಣಾಮವನ್ನು ಈ ಕೃತಿ ನಿರೂಪಿಸುತ್ತದೆಯೇ ಹೊರತು, ಸಾಕ್ಷರತೆ ಕುರಿತು ಪ್ರಚಾರ, ಉಪದೇಶಗಳನ್ನು ಪ್ರತಿಪಾದಿಸುವುದಿಲ್ಲ. ಈ ಮುನ್ನೆಲೆಯಲ್ಲಿ ಓದು ಬರಹದ ತೀವ್ರ ಅಗತ್ಯವನ್ನು ಪರಿಣಾಮಕಾರಿಯಾಗಿ ಚಿತ್ರಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಸರಳಶೈಲಿಯಲ್ಲಿ ನವುರಾದ ಹಾಸ್ಯದೊಂದಿಗೆ ಒಂದೊಂದೇ ದೃಶ್ಯಗಳು ಸಾಗುತ್ತವೆ. ಉದಾಹರಣೆಗಾಗಿ ಕೃತಿಯಲ್ಲಿನ ಕೆಲವು ಸನ್ನಿವೇಶಗಳನ್ನು ಮೆಲುಕು ಹಾಕಬಹುದು.

ದಾರಿಯಲ್ಲಿ ಎದುರಾದ ಒಬ್ಬರನ್ನು ಕುರಿತು ಕೆಂಪ "ಸ್ವಾಮಿ ಈ ರಸ್ತೆ ಎಲ್ಲಿಗೆ ಹೋಗುತ್ತೆ?" ಅಂತ ಕೇಳಿದ. ಅವರು "ಇದು ಎಲ್ಲಿಗೂ ಹೋಗೋದಿಲ್ಲಪ್ಪ ಇಲ್ಲೇ ಬಿದ್ದಿರುತ್ತದೆ" ಅಂದರು. "ಹಾಸ್ಯ ಮಾಡಬೇಡಿ ದೇವರು, ನಾನು ಈ ಕಡೆ ಹೋದರೆ ಯಾವ ಊರು ಸಿಕ್ಕುತ್ತದೆ?" ಅಂತ ಕೆಂಪ ಕೇಳಿದ. ಅದಕ್ಕೆ ಅವರು, "ಸಿಕ್ಕಿದ ಊರಿಗೆ ಹೋದರೆ ಸಾಕೆ? ಹೋಗಬೇಕಾದ ಊರು ಸಿಗಬೇಕೆ?" ಅಂದರು.

* ಕಲಿತವರು ತೋರಿದ ದಿಕ್ಕಿಗೆ ಹೋಗಬೇಕಾದ ಸ್ಥಿತಿಯಿಂದ ಅನಕ್ಷರಸ್ಥರು ಪಾರಾಗಲು ಸಾಕ್ಷರತೆಯು ಸಾಧನ ಎಂಬ ನಿಷ್ಠುರ ಸತ್ಯವನ್ನು ಲೇಖಕರು ಪ್ರತಿಪಾದಿಸಿದ್ದಾರೆ.

ಕೆಂಪ ಐದಾರು ಮೈಲಿ ಹೋಗುತ್ತಲೂ ದಾರಿ ಕವಲೊಡೆಯಿತು. ಅಲ್ಲೊಂದು ಕೈ ಮರವಿತ್ತು. ಅದಕ್ಕೆ ಮೂರು ಕೈಗಳು ಮೂರೂ ಗಾಳಿಗೆ ತೂರಾಡುತ್ತಿದ್ದವು. ಅದರೆದುರು ಹೋಗಿ ನಿಂತು "ಸ್ವಾಮಿ! ರೈಲು ಟೇಷನ್ ಯಾವ ದಾರಿಯಲ್ಲಿದೆ?" ಅಂತ ಕೆಂಪ ಕೇಳಿದ. ಆಗ ಎಲ್ಲಿಂದಲೋ ಗಾಳಿ ಬೀಸಿತು. ಒಂದು ಕೈ ಕೊಂಚ ಮೇಲಕ್ಕೆದ್ದು ಕೆಳಕ್ಕೆ ಬಿತ್ತು. ಕೆಂಪ ಆ ದಾರಿಯನ್ನೆ ಹಿಡಿದ. ಬಿಸಿಲಿನ ತಾಪ ಹೆಚ್ಚುತ್ತಿತ್ತು. ಆದರೂ ರೈಲು ಟೇಷನ್ ಸಿಗಲೇ ಇಲ್ಲ. ಯಾರೋ ಪುಣ್ಯಾತ್ಮರು ಅವನನ್ನು ಅದೇ ಕೈಮರದ ಹತ್ತಿರ ಹಿಂದಕ್ಕೆ ಕರೆದುಕೊಂಡು ಬಂದು ಇನ್ನೊಂದು ದಾರಿ ತೋರಿಸಿದರು. ಅಂತೂ ಸೂರ್ಯ ನೆತ್ತಿಗೆ ಬರೋ ಹೊತ್ತಿಗೆ ಕೆಂಪನಿಗೆ ರೈಲು ಟೇಷನ್ ಸಿಕ್ಕಿತು.

* ಅನಕ್ಷರಸ್ಥನ ಗೊತ್ತು ಗುರಿಯಿಲ್ಲದ ಅತಂತ್ರ ಬದುಕಿನ ಬವಣೆಯನ್ನು ಈ ಮೇಲಿನ ಚಿತ್ರ ಮಾರ್ಮಿಕವಾಗಿ ನಿರೂಪಿಸಿದೆ.

ಕೆಂಪ ರೈಲು ಸ್ಟೇಷನ್‌ನಲ್ಲಿ ಮೈಸೂರಿಗೆ ಟಿಕೆಟ್ ಕೇಳಿದಾಗ ಟಿಕೆಟ್ ಕೊಡುವವರು "ಈ ರೈಲು ಬೆಂಗಳೂರಿಗೆ ಹೋಗುತ್ತೆ; ಮೈಸೂರಿಗಲ್ಲ" ಅಂದರು....ರೈಲು ಭುಕ್ ಭುಕ್ ಭುಕ್ ಅಂತ ರೇಗಾಡಿತು; ಥೂ ಥೂ ಥೂ ಅಂತ ಹೊಗೆ ಉಗುಳಿತು. ಬೇಗ ಬೇಗ ಹೊರಟೇ ಹೋಯಿತು. ಕೆಂಪ ತನ್ನ ಹೊಸ ಕೆಂಪು ವಸ್ತ್ರದಿಂದ ಬೆವರೊರೆಸಿ ಕೊಂಡ. ವಸ್ತ್ರದ ಬಣ್ಣ ಮುಖಕ್ಕೆಲ್ಲಾ ಹರಡಿದ ವಿಷಯ ಕೆಂಪನಿಗೆ ಗೊತ್ತಾಗಲೇ ಇಲ್ಲ. ಗೌಡರೊಬ್ಬರು ಅವನ ಮುಖ ನೋಡಿ ಕೊಂಚ ನೀರು ಕೊಟ್ಟರು.

ಮೈಸೂರು ರೈಲಿಗೆ ಟಿಕೇಟು ಕೊಂಡ ಕೆಂಪ ರೈಲು ಡಬ್ಬಿ ಹತ್ತಿರ ನಿಂತು 'ಒಳಗೆ ಬರಲೇ ಬುದ್ಧೀ?' 'ಒಳಗೆ ಬರಬಹುದೇ ಸ್ವಾಮಿ?' ಅಂತ ಅಲ್ಲಲ್ಲಿ ನಿಂತು ಕೇಳಿದ. ಯಾರೂ ಅವನನ್ನು ಮಾತನಾಡಿಸಲಿಲ್ಲ. ದಮ್ಮಯ್ಯ, ಅಂದ. ದತ್ತಯ್ಯ, ಅಂದ. ಒಬ್ಬರೂ ಅವನನ್ನು ಒಳಕ್ಕೆ ಕರೆಯಲಿಲ್ಲ. ಆಗ ಹಸುರು ಬಾವುಟ ಹಿಡಿದು ನಿಂತಿದ್ದ ಒಬ್ಬರು ದಫೇದಾರನೆ ಬಂದು ಗಾಡಿಯ ಬಾಗಿಲು ತೆರೆದರು. ಕೆಂಪನನ್ನು ಹಿಡಿದು ಅದರೊಳಕ್ಕೆ ನೂಕಿದರು. ರೈಲು ದಡಬಡನೆ ಮೈಸೂರು ಕಡೆಗೆ ಹೊರಟಿತು.

* ಅನಕ್ಷರಸ್ಥ ಪರಾವಲಂಬಿಯಾಗಿ ಹೇಗೆ ಅಸಡ್ಡೆ ಕನಿಕರಕ್ಕೆ ಗುರಿಯಾಗುತ್ತಾನೆ ಎಂಬುದನ್ನು ಈ ಮೇಲಿನ ಘಟನೆಯು ಪ್ರತಿಪಾದಿಸುತ್ತದೆ.

ಮೈಸೂರು ತಲಪಿದ ಕೆಂಪ ರೈಲಿನಿಂದಿಳಿದು ರೈಲಾಫೀಸ್, ಎಕ್ಸಿಬಿಷನ್ ಎಲ್ಲವನ್ನೂ ಅರಮನೆ ಎಂದೇ ಭ್ರಮಿಸಿ, ಕೊನೆಗೆ ನಿಜವಾದ ಅರಮನೆ ನೋಡಿ ಮೂಕವಿಸ್ಮಿತನಾಗಿ, ರಾಜರ ದರ್ಬಾರು, ಸಿಂಹಾಸನ, ಆಯುಧ ಪೂಜೆ, ಜಂಬೂಸವಾರಿ, ಜೂ, ಚಾಮುಂಡಿಬೆಟ್ಟ ಮುಂತಾದವನ್ನು ನೋಡಿ, ಎಲ್ಲವನ್ನೂ ಕಣ್ಣಿಗೆ ಕಟ್ಟಿಕೊಂಡು ಊರು ಸೇರಿದಾಗ, ಮನೆಬಾಗಿಲಲ್ಲೇ ಕೆಂಪಿ ನಿಂತಿದ್ದಳು. ಕೆಂಡದಂತಹ ಕಣ್ಣು, ಮುಖವೋ ಕಿಡಿ ಕಿಡಿ! ಕೆಂಪ ದೂರದಲ್ಲೇ ನಿಂತ. ಕೈಯಲ್ಲಿದ್ದ ಗಂಟು ಬಿಚ್ಚಿದ. ಚಾಮುಂಡಮ್ಮನ ಗುಡಿಯಿಂದ ತಂದ ಕುಂಕುಮದ ಪೊಟ್ಟಣವನ್ನು ಬೀಟೆಬಟ್ಟೆ ಮೇಲಿಟ್ಟು, ನೆಲದ ಮೇಲಿರಿಸಿ, ಕೈಮುಗಿದ!

ಕೆಂಪಿಯ ಕಣ್ಣುಗಳು ಅರಳಿದುವು. ಅವಳು ಶಾಂತವಾದಳು. ಮುಂದಿನ ವರ್ಷ ನಾನೂ ನೀನೂ ಒಟ್ಟಿಗೆ ಹೋಗೋಣ ಅಂತ ಹೇಳಿ ಕೆಂಪ ಮನೆಗೆ ನುಗ್ಗಿದ.

* ಕೃತಿಯಲ್ಲಿ ಬರುವ ರೈಲು, ಗಾರ್ಡ್‌ನ ಹಸುರು ಬಾವುಟ, ಕೈಮರ ಮುಂತಾದವು ಚಲನಶೀಲ ಬದುಕಿನ ಸಂಕೇತಗಳಾಗಿದ್ದು, ಇವುಗಳ ಮೂಲಕ ಕೆಂಪ ಚಲಿಸುವುದು ಪ್ರಗತಿ ಸೂಚಕವಾಗಿದೆ.

* ಪೋಲೀಸರು ಹಾಗೂ ಸಾರ್ವಜನಿಕರ ನಡುವಿನ ಸಂಬಂಧಗಳ ಬಗ್ಗೆ ಅಪಸ್ವರವೇ ಹೆಚ್ಚು. ಆದರೆ ಪೋಲೀಸರು ಇರುವುದು ಸಾರ್ವಜನಿಕರ ಹಿತಕ್ಕಾಗಿ ಎನ್ನುವ ಆಶಯ ಪೇದೆಯೊಬ್ಬನ ಪಾತ್ರದಿಂದ ಇಲ್ಲಿ ಪ್ರತಿಪಾದನೆಯಾಗಿರುವುದು ಲೇಖಕರ ಆಶಯವೂ ಹೌದು.

* ವಸ್ತುಪ್ರದರ್ಶನದಲ್ಲಿ ಮಾದರಿ ವೀಕ್ಷಣೆ, ಅಕ್ಷರ ಕಲಿಕೆಯ ಅನಿವಾರ್ಯತೆ, ಅಭಿವೃದ್ಧಿ ಕಾರ್ಯಗಳ ಪರಿಚಯ ಮುಂತಾದವು ಸರ್ವರಿಗೂ ಶಿಕ್ಷಣ ಎಂಬ ಧ್ಯೇಯವನ್ನು ನಿರೂಪಿಸುತ್ತವೆ.

* ಕೃತಿಯ ಓದುಗರೂ ಕೆಂಪನೊಂದಿಗೆ ಮೈಸೂರು ಪ್ರವಾಸ ಮಾಡಿಬಂದ ಅನುಭವ ಪಡೆಯುತ್ತಾರೆ. ಇದೇ ಒಂದು ಕೃತಿಯ ನಿಜವಾದ ಒರೆಗಲ್ಲಲ್ಲವೇ ?

ಕನ್ನಡನಾಡಿಗೆ ಬಂದು ವಯಸ್ಕರ ಶಿಕ್ಷಣದ ಒಬ್ಬ ಫಲಾನುಭವಿಯಾಗಿ ಕನ್ನಡ ಕಲಿತು, ಅನರ್ಥಕೋಶದಂತಹ ವಿಶಿಷ್ಟ ಕನ್ನಡವನ್ನು ನೀಡಿದ ನಾ. ಕಸ್ತೂರಿ ಅವರ ನಾಡು ನುಡಿಯ ಸೇವೆ ಅನನ್ಯವಾದುದು. ಕನ್ನಡನಾಡಿನಲ್ಲಿ ನೆಲೆ ನಿಂತಿರುವ ಇತರ ಭಾಷಾಬಾಂಧವರಿಗೆ ಕಸ್ತೂರಿ ಅವರ ಬದುಕು-ಬರಹಗಳು ಆದರ್ಶ.

ನಾ. ಕಸ್ತೂರಿ

(ಸಂಕ್ಷಿಪ್ತ ಜೀವನ ಚಿತ್ರ)

ಜನನ : ೨೫ ಡಿಸೆಂಬರ್ ೧೮೯೭, ಕೇರಳದ ತ್ರಿಪುನಿತ್ತೂರ್ ಗ್ರಾಮ

ವಿದ್ಯಾಭ್ಯಾಸ : ಎರ್ನಾಕುಲಂ, ತಿರುವನಂತಪುರದಲ್ಲಿ ಹೈಸ್ಕೂಲ್, ಬಿ.ಎ.ಆನರ್ಸ್, ಬಿ.ಎಲ್.

ಉದ್ಯೋಗ : ತಿರುವನಂತಪುರದಲ್ಲಿ ಹೈಸ್ಕೂಲು ಅಧ್ಯಾಪಕ. ಮೈಸೂರಿನ ಬನುಮಯ್ಯಾ ಕೊಲಿಜಿಯೇಟ್ ಹೈಸ್ಕೂಲು, ಇಂಟರ್ ಮೀಡಿಯೇಟ್ ಕಾಲೇಜು, ಮಹಾರಾಜ ಕಾಲೇಜು, ಬೆಂಗಳೂರಿನ ಇಂಟರ್ ಮೀಡಿಯೇಟ್ ಕಾಲೇಜುಗಳಲ್ಲಿ ಇತಿಹಾಸ ಉಪನ್ಯಾಸಕರು. ದಾವಣಗೆರೆ ಇಂಟರ್ ಮೀಡಿಯೇಟ್ ಕಾಲೇಜುಗಳ ಸೂಪರಿಂಟೆಂಡೆಂಟ್ ಆಗಿ ಐದುವರ್ಷಗಳ ಸೇವೆಯನಂತರ ನಿವೃತ್ತಿ

ವಿಶೇಷ ಸೇವೆ : ಮೈಸೂರು ರಾಮಕೃಷ್ಣಾಶ್ರಮದ ಕಾರ್ಯದರ್ಶಿಗಳು. ಮೈಸೂರು ರೋವರ್ಸ್ ಚಟುವಟಿಕೆಗಳು, ವಯಸ್ಕರ ಶಿಕ್ಷಣ, ಹರಿಜನ ಸೇವೆ, ಮೈಸೂರು ಆಕಾಶವಾಣಿಯ ಅಸಿಸ್ಟೆಂಟ್ ಡೈರೆಕ್ಟರ್, ಬೆಂಗಳೂರು ಆಕಾಶವಾಣಿಯ ಗ್ರಾಮಸ್ಥರ ಕಾರ್ಯಕ್ರಮ, ಇತ್ಯಾದಿ ವಿಭಾಗಗಳ ನಿರ್ವಾಹಕರು. ದೆಹಲಿ ಸಾಹಿತ್ಯ ಸಮಾರೋಪದಲ್ಲಿ ಕನ್ನಡದ ಪ್ರತಿನಿಧಿ.

ಪ್ರಶಾಂತಿ ನಿಲಯ : ೧೯೫೬ ರಿಂದ ಶ್ರೀ ಸತ್ಯಸಾಯಿಬಾಬರವರ ಸಾನ್ನಿಧ್ಯದಲ್ಲಿ ಪ್ರಶಾಂತಿ ನಿಲಯ ವಾಸ.

ಮುಕ್ತಿ : ೧೪–೮–೧೯೮೭

ಕಸ್ತೂರಿ ಸಾಹಿತ್ಯ ಮಾಲೆ

ನಾಟಕ

ಷಹಜಹಾನ್ (ಮಲೆಯಾಳಂ)
ಹೆಡ್‌ಮಾಸ್ಟರ್ಸ್ ಡಾಟರ್ (ಇಂಗ್ಲಿಷ್)
ಗಗ್ಗಯ್ಯನ ಗಡಿಬಿಡಿ
ವರ ಪರೀಕ್ಷೆ
ತಾಪತ್ರಯ ತಪ್ಪಿತು
ಬ್ಯಾಂಕಿನ ದಿವಾಳಿ
ರಾಮಕೃಷ್ಣಯ್ಯನ ದರ್ಬಾರು
ಚಿತ್ರವಿಚಿತ್ರ

ಕಾದಂಬರಿ

ಗಾಳಿಗೋಪುರ
ಶಂಖವಾದ್ಯ
ಗೃಹದಾರಣ್ಯಕ
ರಂಗನಾಯಕಿ
ಚೆಂಗೂಲಿ ಚೆಲುವ
ಚಕ್ರದೃಷ್ಟಿ

ಕವನ

ಅಣಕು–ವಿಣಾಕು

ವಿಡಂಬನ ಪ್ರಬಂಧ ಸಂಕಲನ

ಯದ್ಭಾವತದ್ಭಾವ
ಅಲ್ಲೋಲ
ಕಲ್ಲೋಲ
ಉಪಾಯ ವೇದಾಂತ
ಡೊಂಕುಬಾಲ

ವಯಸ್ಕರ ಶಿಕ್ಷಣ ಮಾಲೆ

ನವರಾತ್ರಿ ಕೆಂಪ ಮೈಸೂರಿಗೆ ಹೋದದ್ದು
ಶ್ರೀ ಕೃಷ್ಣರಾಜೇಂದ್ರ ಒಡೆಯರವರು
ಹಾಸ್ಯದ ಚಟಾಕಿಗಳು
ಏಕಚಕ್ರ (ನಾಟಕ)

ಸಂಶೋಧನಾ ಪ್ರಬಂಧ (ಇಂಗ್ಲಿಷ್)

ಕೇರಳ ಇನ್ ಕರ್ನಾಟಕ
ದಿ ಲಾಸ್ಟ್ ರಾಜಾಸ್ ಆಫ್ ಕೂರ್ಗ್

ಜೀವನ ಚರಿತ್ರೆ

ದಿ ಲಿವಿಂಗ್ ಗಾಡ್ (ಇಂಗ್ಲಿಷ್)
ಸತ್ಯಂ ಶಿವಂ ಸುಂದರಂ

ಫಿಕ್ಷನರಿ (ಡಿಕ್ಷನರಿ)
ಅನರ್ಥಕೋಶ

ಇತರೆ

ಅಶೋಕ
ಮದುವೆ

ಅನುವಾದ-ರೂಪಾಂತರ

ದಿಲ್ಲೀಶ್ವರನ ದಿನಚರಿ
ಬಾಬರನ ದಿನಚರಿ (ಸಂಗ್ರಹಾನುವಾದ)
ಚೇರ್‌ಮನ್ ಪೆರುಮಾಳ್ (ಕಾದಂಬರಿ) ಮೂಲ—ಕೃಷ್ಣಮೆನೋನ್
ಚೈನಾ ಜಪಾನ್ ಕಥೆಗಳು (ಎಂಟು ಸಣ್ಣ ಕಥೆಗಳು—ವಿವಿಧ ಲೇಖಕರು)
ನೊಂದ ಜೀವಿ (ವಿಕ್ಟರ್ ಹ್ಯೂಗೊವ ಲೇ ಮಿಸರಬಲೆ ಕಾದಂಬರಿ—ಸಂಗ್ರಹಾನುವಾದ)
ಪಾತಾಳದಲ್ಲಿ ಪಾಪಚ್ಚಿ (ಚಾರ್ಲ್ಸ್ ಲುಡ್ವಿಗೆ ಡಾಡ್ಜ್‌ಸನ್ ಅವರ ಆಲಿಸ್ ಇನ್ ವಂಡರ್‌ಲ್ಯಾಂಡ್ ರೂಪಾಂತರ)
ಕಾಡಾನೆ (ಪಿ. ಜಿ. ವೋಡ್‌ಹೌಸ್‌ನ ಆಂಗ್ಲ ನಾಟಕದ ರೂಪಾಂತರ)

ಕೋಽಹಂ ಸೋಽಹಂ (ಮೂಲ: ಡಾ|| ಸ್ಯಾಮ್ಯುಯಲ್ ಸ್ಯಾಂಡ್‌ವೀಸ್) (ನಂದನಾರ್, ತಿರುಪ್ಪಾಣಾಳ್ವಾರ್, ಮಂಕಾಸುರ ವಧೆ, ಶಂಭು ಮುಂತಾದ ಹಲವಾರು ನಾಟಕಗಳು, ಕಾಲೇಜು ಯೂನಿಯನ್ ಸಮಾರಂಭಗಳಲ್ಲಿ ನಿಂತ ನಿಲುವಲ್ಲೇ ರಚಿಸು ತ್ತಿದ್ದ ಗುಂಡೂರಾಯನಗುಳಿಗೆ ಮುಂತಾದ ಅಶುನಾಟಕಗಳು, ಆಕಾಶವಾಣಿ ಕಾರ್ಯ ಕ್ರಮಗಳಿಗಾಗಿ ರಚಿಸಿದ ಹಲವಾರು ರೂಪಕಗಳು ಅಪ್ರಕಟಿತವಾಗಿಯೇ ಉಳಿದಿವೆ ಅಥವಾ ಕಳೆದಿವೆ.)

ಕೃಪೆ: ಕಸ್ತೂರಿ ಶತಕಂ

ಉಳಿತಾಯ: ನಮಗೆ ಸಾಲ ಕೊಡಬೇಕಾದವರು ಮಾಡಬೇಕಾದ ಕರ್ತವ್ಯ.

ಋಣ: ತುಪ್ಪ ಕುಡಿಯಲು ಹಿರಿಯರು ನಮಗೆ ಹೇಳಿ ಕೊಟ್ಟಿರುವ ಒಂದೇ ಸುಲಭ ಮಾರ್ಗ.

ಅಗಸ: ನಮ್ಮ ಬಟ್ಟೆಗಳಿಂದ ಕಲ್ಲುಬಂಡೆಗಳನ್ನು ಒಡೆಯಲು ಹಗಲೆಲ್ಲ ಪ್ರಯತ್ನಿಸುವ ಧೀರ. ಅರಿವೆಯನ್ನು ಹರಿವೆ ಎಂತಲೇ ಅವನು ಹೇಳುವನು.

ನಾ. ಕ. ಅವರ ಅನರ್ಥಕೋಶ ದಿಂದ

ಭಾರತದಲ್ಲಿ ಪಂಚಾಯತ್ ರಾಜ್

ಬಿ. ಆರ್. ಪರಿಣೀತ

೫೬೧, ೪ನೇ ಮುಖ್ಯ ರಸ್ತೆ, 'ಎ' ಬ್ಲಾಕ್
೨ನೇ ಹಂತ, ರಾಜಾಜಿನಗರ
ಬೆಂಗಳೂರು-೫೬೦೦೧೦.

ಭಾರತದಲ್ಲಿ ಪಂಚಾತ್‌ರಾಜ್ ಸುಮಾರು ನಾಲ್ಕು ದಶಕಗಳಿಂದ ಕಾರ್ಯಾಚರಣೆಯಲ್ಲಿದೆ. ಆದರೆ ದುರದೃಷ್ಟವಶಾತ್ ಇದು ಬಯಸಿದಷ್ಟು ಯಶಸ್ವಿಯೇನೂ ಆಗಿಲ್ಲ. ಜನರನ್ನು ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು ಮತ್ತು ರಾಜ್ಯ ಸರ್ಕಾರದ ಹೊರೆ ಕಡಿಮೆಮಾಡುವುದು ಪಂಚಾಯತ್ ರಾಜ್‌ನ ಮುಖ್ಯ ಧ್ಯೇಯ. ಬಲವಂತ್ ರಾಯ್ ಮೆಹ್ತಾ ಸಮಿತಿಯ ಸಲಹೆ, ಪಂಚಾಯತ್ ರಾಜ್ ಅನ್ನು 'ಪ್ರಜಾತಂತ್ರದ ವಿಕೇಂದ್ರೀಕರಣ' ಧ್ಯೇಯೋದ್ದೇಶದ ಪೂರೈಕೆಗಾಗಿ ಸೃಷ್ಟಿಸಬೇಕೆಂಬುದಾಗಿತ್ತು. ಅತಿ ಕೆಳಮಟ್ಟದಲ್ಲೂ ಜನರ ಚುನಾಯಿತ ಪ್ರತಿನಿಧಿಗಳು ಅಧಿಕಾರ ಚಲಾಯಿಸುವಂಥ ಪ್ರಜಾಸತ್ತಾತ್ಮಕ ವ್ಯವಸ್ಥೆ ಸ್ಥಾಪಿಸಬೇಕೆಂಬುದು ಪಂಚಾಯತ್‌ರಾಜ್‌ನ ಗುರಿ. ಅದಲ್ಲದೆ ಅಭಿವೃದ್ಧಿ ಚಟುವಟಿಕೆಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ರೂಪಿಸಲಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ, ಗ್ರಾಮೀಣ ಜನರು ಸಕ್ರಿಯವಾಗಿ ಭಾಗವಹಿಸಬೇಕೆಂಬುದನ್ನು ಕುರಿತು ಹೆಚ್ಚು ಗಮನ ಹರಿಸಲಾಗಿದೆ.

ಇಂದು ಪಂಚಾಯತ್‌ರಾಜ್ ಎಲ್ಲಾ ರಾಜ್ಯಗಳಲ್ಲೂ ಕಾರ್ಯಾಚರಣೆಯಲ್ಲಿದೆ. ಭಾರತದ ಗ್ರಾಮಗಳಲ್ಲಿ ಪ್ರಜಾಪ್ರಭುತ್ವದ ತಳಹದಿ ನಿಜವಾದ ಅರ್ಥದಲ್ಲಿ ಇಲ್ಲವಾದ್ದರಿಂದ, ಸುಮಾರು ನಾಲ್ಕು ದಶಕಗಳಿಂದ ಪಂಚಾಯತ್‌ರಾಜ್ ಯಶಸ್ವಿಯಾಗುವಂತೆ ಶ್ರಮಿಸದೆ, ನಿರ್ಲಕ್ಷ್ಯತೋರಿರುವುದು ಸ್ಪಷ್ಟವಾಗುತ್ತದೆ. ಪಂಚಾಯತ್ ಚುನಾವಣೆಗಳು ಸುವ್ಯವಸ್ಥಿತವಾಗಿದ್ದಿದ್ದರೆ, ಇಂದು ಸಮಾಜದಲ್ಲಿ ಉಪೇಕ್ಷೆಗೆ ಗುರಿಯಾಗಿರುವ ಗ್ರಾಮೀಣ ವರ್ಗದ ಜನರು, ಚುನಾಯಿತ ಸಂಸ್ಥೆಗಳ ಜವಾಬ್ದಾರಿಯನ್ನು ಕುರಿತು ಪ್ರಶ್ನಿಸಬಹುದಾಗಿತ್ತು. ಗ್ರಾಮೀಣ ಶಕ್ತಿ ವ್ಯವಸ್ಥೆ ಅಭಿವೃದ್ಧಿ ಯೋಜನೆಗಳ ಮೇಲೆ ಅಪಾರವಾಗಿ ಪ್ರಭಾವ ಬೀರಿದೆ. ೧೯೬೦ರ ಕಾಲದಲ್ಲಿ, ಸಹಕಾರಿ ಸಾಲ ಪದ್ಧತಿ, ಆರ್ಥಿಕ ಪ್ರಜಾತಂತ್ರದ ತಳಹದಿಯಾಗಿತ್ತು. ಆದರೆ ಸಾಲಗಳನ್ನು ಪಡೆದುಕೊಂಡವರು, ಅವುಗಳನ್ನು ಉದ್ದೇಶಪೂರ್ವಕವಾಗಿ ತೀರಿಸದಿದ್ದ ಕಾರಣದಿಂದಾಗಿ, ಈ ಯೋಜನೆ ನಾಶವಾಯಿತು.

ಬ್ಯಾಂಕ್‌ಗಳ ರಾಷ್ಟ್ರೀಕರಣದ ಮೂಲಕ ೧೯೬೯ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರಿಗೆ ಪುನಃ ಸಾಲ

ನೀಡುವ ಪ್ರಯತ್ನ ನಡೆಸಲಾಯಿತು. ನಿಸ್ಸಂಶಯವಾಗಿ ಸಾಮಾಜಿಕ ಬ್ಯಾಂಕ್ ವ್ಯವಸ್ಥೆಯನ್ನು ವಿಸ್ತರಿಸಲಾಯಿತು, ಆದರೆ ಅದರಿಂದ ಅನುಕೂಲ ಪಡೆದವರು ಹೆಚ್ಚಾಗಿ ಸಾಲ ಪಡೆದುಕೊಳ್ಳಲು ಅರ್ಹತೆ ಹೊಂದಿದಂಥ ಜನರು. ಅಂಥವರು ಭೂಮಿಯ ಒಡೆಯರಾದ ಆಸ್ತಿವಂತರಾಗಿದ್ದರು ಮತ್ತು ಈ ಯೋಜನೆಯಿಂದ ಪೂರ್ಣಪ್ರಮಾಣದಲ್ಲಿ ಲಾಭಗಳಿಸಿದರು. ಅನಂತರ ಪ್ರಾರಂಭಿಸಲಾದ ಹಸಿರುಕ್ರಾಂತಿಯ ತಂತ್ರವಿದ್ಯೆಯೂ ಪುನಃ ಬರೀ ಜಮೀನ್ದಾರ್ ವರ್ಗಕ್ಕೆ ಸೇರಿದ ಜನರಿಗೆ ಮಾತ್ರ ಹೆಚ್ಚು ಅನುಕೂಲ ಉಂಟುಮಾಡಿತು. ರಾಜ್ಯ ಸರ್ಕಾರ ಬೀಜಗಳನ್ನು ವಿತರಣೆಮಾಡುವುದರಲ್ಲಿ, ಗೊಬ್ಬರವನ್ನು ಒದಗಿಸುವುದರಲ್ಲಿ ಮತ್ತು ವಿದ್ಯುಚ್ಛಕ್ತಿಯನ್ನು ನೀಡುವುದರಲ್ಲಿ ಪಂಚಾಯತ್ ಸಂಸ್ಥೆಗಳ ಪ್ರಾಮುಖ್ಯವನ್ನು ಕಡೆಗಣಿಸಿತು.

ಪಂಚಾಯತ್‌ರಾಜ್ ಯಶಸ್ವಿಯಾಗಬೇಕಾದರೆ ಸಾಂಸ್ಥಿಕ ಸಂದರ್ಭಗಳಲ್ಲಿ ಬದಲಾವಣೆಗಳನ್ನು ತರಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಪಂಚಾಯತ್‌ರಾಜ್ ಪದ್ಧತಿ ಯಶಸ್ವಿಗೊಳಿಸಲು ಒಗಟ್ಟಿನಿಂದ ನಾಯಕತ್ವವನ್ನು ವಹಿಸಿಕೊಳ್ಳಬೇಕು. ಯೋಜನಾ ಆಯೋಗ ವಿಕೇಂದ್ರೀಕೃತ ಸಂಸ್ಥೆಗಳು ಏನನ್ನು ಸಾಧಿಸಬಹುದೆಂದು ಚಿಂತನೆಮಾಡುವುದನ್ನು ಬಿಟ್ಟು, ಅವುಗಳಿಗೆ ಬೆಂಬಲ ನೀಡುವ ಕ್ರಮಗಳನ್ನು ರೂಪಿಸಲು ಪ್ರಯತ್ನಿಸಬೇಕು. ಬರೀ ಯೋಜನೆಗಳನ್ನು ರೂಪಿಸುವುದರಿಂದ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಹಣ ವರ್ಗಾಯಿಸುವುದರಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ರಾಷ್ಟ್ರೀಯ ಧ್ಯೇಯೋದ್ದೇಶಗಳನ್ನು ಪ್ರೋತ್ಸಾಹಿಸುವಂಥ ರಾಜ್ಯಗಳಿಗೆ, ಕೇಂದ್ರದಿಂದ ಪ್ರಾಯೋಜಿತವಾದ ಯೋಜನೆಗಳನ್ನು ವರ್ಗಾಯಿಸುವುದರಿಂದ ಮಾತ್ರ, ಜಿಲ್ಲಾ ಪರಿಷದ್ ಮತ್ತು ಗ್ರಾಮ ಪಂಚಾಯತ್‌ಗಳು ಮಹತ್ವಪೂರ್ಣವಾದ ಸ್ಥಾನ ಪಡೆದುಕೊಳ್ಳುತ್ತವೆ.

ಪೂರ್ಣ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಬಳಸಲು, ಅಪಾರವಾಗಿ ಶ್ರಮ ವಹಿಸದಿದ್ದರೆ ಗ್ರಾಮೀಣಾಭಿವೃದ್ಧಿ ಅಸಾಧ್ಯವಾಗುತ್ತದೆ. ರಾಜ್ಯ ಸರ್ಕಾರಗಳು ಹೊಸ ಸಂಪನ್ಮೂಲಗಳನ್ನು ಶೋಧಿಸಬೇಕು ಮತ್ತು ಇರುವ ಸಂಪನ್ಮೂಲಗಳನ್ನು ಯಾವ ಸ್ಥಳಗಳಲ್ಲಿ ತೀರ ಕಡಿಮೆ ಅಭಿವೃದ್ಧಿಯುಂಟಾಗಿರುವುದೋ, ಅಂಥ ಸ್ಥಳಗಳಲ್ಲಿ ಬಳಸಬೇಕು. ಉದಾ: ಉತ್ತರಪ್ರದೇಶದಲ್ಲಿ ಉತ್ತರಖಂಡ. ಇತ್ತೀಚಿನ ದಿನಗಳಲ್ಲಿ ಉತ್ತರಖಂಡದಲ್ಲಿ ಸ್ವಾಯತ್ತತೆಗಾಗಿ ಬೇಡಿಕೆ ಹೆಚ್ಚಾಗುತ್ತಿದೆ ಎಂಬುದರಿಂದ ಭಾರತದಲ್ಲಿ ಪಂಚಾಯತ್ ರಾಜ್‌ನ ಶೋಚನೀಯ ಪರಿಸ್ಥಿತಿ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ವಿಶಾಲವಾದ ದೇಶದ ವಿವಿಧ ಭಾಗಗಳನ್ನು ಕುರಿತು ವಿಶೇಷ ಗಮನವನ್ನು ಹರಿಸದೆ, ಪಂಚಾಯತ್‌ರಾಜ್‌ನಿಂದ ಮಾತ್ರವೇ ಹೆಚ್ಚು ಪ್ರಯೋಜನ ಉಂಟಾಗುವುದಿಲ್ಲ. ದೊಡ್ಡ ರಾಜ್ಯವಾದ ಮಧ್ಯಪ್ರದೇಶ ಮತ್ತು ಬಡರಾಜ್ಯವಾದ ಬಿಹಾರದಲ್ಲಿ ಹೆಚ್ಚೇನೂ ಸಾಧಿಸಲು ಸಾಧ್ಯವಾಗಿಲ್ಲ.

ಹಿಂದೆ ಹಣದ ಕೊರತೆಯಿಂದ, ಅಧಿಕಾರವಿಲ್ಲದ ಜವಾಬ್ದಾರಿಯಿಂದ ಮತ್ತು ಕಾಯ

ರೂಪಕ್ಕೆ ತರಲು ಅವಶ್ಯಕವಾದ ಸಾಧನಗಳಿಲ್ಲದ ಕರ್ತವ್ಯಗಳನ್ನು ಹೊತ್ತುಕೊಂಡೇ ಪಂಚಾಯತ್‌ರಾಜ್‌ನ ಕಾರ್ಯಗಳು ಸಾಗುತ್ತಲ್ಲಿದ್ದುವು. ಜನರ ಆಸೆ ಆಕಾಂಕ್ಷೆಗಳನ್ನು, ಅರಿತು ಮತ್ತು ಅವರ ಆವಶ್ಯಕತೆಗಳನ್ನು ಪರಿಗಣಿಸಿ, ಅವನ್ನು ಪೂರೈಸಲು ಗ್ರಾಮಪಂಚಾಯತ್, ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪಂಚಾಯತ್‌ಗಳನ್ನು ರೂಪಿಸಲಾಗಿತ್ತು. ಪ್ರತಿಯೊಂದು ಪ್ರದೇಶದಲ್ಲೂ ಜನರು ತಮ್ಮ ಅಭ್ಯರ್ಥಿಗಳನ್ನು ಚುನಾಯಿಸುವ ಅವಕಾಶವನ್ನು ಪಂಚಾಯತ್‌ರಾಜ್ ಪದ್ಧತಿ ಕಲ್ಪಿಸಿದೆ. ಅದಲ್ಲದೆ ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆಗಳು ನಡೆಯಬೇಕೆಂದು ತೀರ್ಮಾನಿಸಲಾಗಿದೆ. ಚುನಾವಣೆಗಳು ಪ್ರಜಾತಂತ್ರದ ಜೀವಾಳವೆಂಬುದು ಸಾಮಾನ್ಯವಾಗಿ ತಿಳಿದಿರುವ ವಿಷಯುವೇ ಆಗಿದೆ, ಆದರೆ ಇಂದಿನವರೆಗೆ ಚುನಾವಣೆಗಳು ಸಕಾಲಕ್ಕೆ ನಡೆಯುತ್ತವೆಯೇ ಎಂಬ ಶಂಕೆಯು ಜನರನ್ನು ಕಾಡುತ್ತಿದೆ ಮತ್ತು ಚುನಾವಣೆಗಳು ತೀರಾ ಶೋಚನೀಯವಾಗಿವೆ. ಪಂಚಾಯತ್‌ರಾಜ್ ಎಂಬುದು, ಮನಸ್ವೀಯಾಗಿ ವರ್ತಿಸುವ ಕಾರ್ಯಾಂಗಾಧಿಕಾರಿಗಳ ಕೈಗೊಂಬೆಯಾಗಬಾರದೆಂಬುದು ಸರ್ಕಾರದ ಮುಖ್ಯ ಗುರಿ. ಲೋಕಸಭಾ ಮತ್ತು ರಾಜ್ಯಸಭೆಗಳಂತೆಯೇ ಪಂಚಾಯತ್‌ರಾಜ್ ಸಂಸ್ಥೆಗಳಿಗೂ ಪ್ರಜಾಸತ್ತಾತ್ಮಕ ಸ್ವರೂಪವನ್ನು ನೀಡಲು ಸರ್ವ ಪ್ರಯತ್ನ ನಡೆದಿದೆ.

೧೯೯೨ರ ಸಂವಿಧಾನದ ೭೩ನೆಯ ತಿದ್ದುಪಡಿ ಕಾಯಿದೆ ಪಂಚಾಯತ್‌ಗಳ ಚುನಾವಣೆಗಳನ್ನು ನಡೆಸುವ ಹೊಣೆಗಾರಿಕೆಯನ್ನು ಚುನಾವಣಾ ಆಯೋಗ ವಹಿಸಿಕೊಳ್ಳಬೇಕು ಎಂದು ತೀರ್ಮಾನಿಸಿತು. ಮತ್ತೊಂದು ಅತಿ ಮುಖ್ಯ ಬದಲಾವಣೆ ಎಂದರೆ ಲೋಕಸಭಾ ಮತ್ತು ರಾಜ್ಯದ ಆಡಳಿತ ಸದನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸ್ಥಾನಗಳನ್ನು ಮೀಸಲಾಗಿರಿಸಿರುವ ಆಧಾರದ ಮೇಲೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲೂ ಮೀಸಲಾತಿ ಪದ್ಧತಿಯನ್ನು ಅನುಸರಿಸಬೇಕೆಂಬುದಾಗಿದೆ. ಆದರೆ ಇಂಥ ಮೀಸಲಾತಿ ಸ್ಥಾನಗಳನ್ನು ಕುರಿತು ಸ್ಪಷ್ಟ ವಿವರಣೆ ನೀಡುವ ಯಾವ ಕಾಯಿದೆಯನ್ನು ಪಂಚಾಯತ್‌ರಾಜ್ ಶಾಸನದಲ್ಲಿ ಸೇರಿಸಲಾಗಿಲ್ಲ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರನ್ನು ಸರಿಯಾಗಿ ಪ್ರತಿನಿಧಿಸಲಾಗದಿದ್ದಲ್ಲಿ, ಪಂಚಾಯತ್‌ರಾಜ್ ಎಂಬುದು ಗ್ರಾಮೀಣ ಮೇಲ್ವರ್ಗದ ಜನರ ಕೈಗಳಲ್ಲಿ ದಬ್ಬಾಳಿಕೆಯ ಯಂತ್ರವಾಗಿ ಪರಿವರ್ತನೆ ಹೊಂದಬಹುದು.

ಮತ್ತೊಂದು ಉತ್ತಮ ಬದಲಾವಣೆ ಎಂದರೆ, ಪಂಚಾಯತ್ ಮಟ್ಟದಲ್ಲಿ ನೇರ ಚುನಾವಣೆಗಳ ಮೂಲಕ ಆಯ್ಕೆ ಮಾಡಲಾಗುವ ಸ್ಥಾನಗಳಲ್ಲಿ ಶೇ. ೩೦ರಷ್ಟನ್ನು ಮಹಿಳೆಯರಿಗೆ ಮೀಸಲಾಗಿರಿಸಬೇಕೆಂಬುದಾಗಿದೆ. ಮಹಿಳೆಯರಿಗೆ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಿ, ಅವರನ್ನು ಬಂಧಮುಕ್ತರಾಗಿ ಮಾಡಿದಾಗಲೇ, ಪಂಚಾಯತ್‌ರಾಜ್ ಪದ್ಧತಿ ಭಾರತದಲ್ಲಿ ಅರ್ಥಪೂರ್ಣವಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ, ಸುಮಾರು ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಮಹಿಳೆಯರನ್ನು ಇನ್ನು ಹೆಚ್ಚು ಕಾಲ ನಿರ್ಲಕ್ಷಿಸಲು ಸಾಧ್ಯವಿಲ್ಲ. ಮಹಿಳೆಯರಿಗೆ ಆಡಳಿತ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಅವಕಾಶವನ್ನು

ಕಲ್ಪಿಸಿದಾಗ ಮಾತ್ರ, ಪಂಚಾಯತ್ ಸಂಸ್ಥೆಗಳು ನೈಜಿಕ ಸ್ವರೂಪವನ್ನು ಪಡೆದುಕೊಳ್ಳುತ್ತವೆ.

ಕೇಂದ್ರದಿಂದ ಜಿಲ್ಲಾ ಮಟ್ಟದಲ್ಲಿ ಹಸ್ತಕ್ಷೇಪ ನಡೆಸುವುದನ್ನು ತಡೆಹಿಡಿಯಲು ಶ್ರಮಿಸುವುದು ಅವಶ್ಯಕವಾಗಿದೆ. ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯ ನಿವಾಸಿಗಳೇ ಉತ್ತಮವಾಗಿ ಬಗೆಹರಿಸಬಹುದು. ಪಂಚಾಯತ್ ಸಂಸ್ಥೆಗಳಿಗೆ ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯವನ್ನು ಸಾಧಿಸಲು ಯೋಜನೆಗಳನ್ನು ರೂಪಿಸುವ ಹಕ್ಕನ್ನು ನೀಡಲಾಗಿದೆ. ಇಂಥ ಸದವಕಾಶವಿರುವಾಗ, ಗ್ರಾಮೀಣ ಜನರು ತಪ್ಪು ಮಾರ್ಗದರ್ಶನದಿಂದ ಸಮಾಜದ ಪ್ರತಿಷ್ಠಿತ ವರ್ಗಕ್ಕೆ ಮಾತ್ರ ಅನುಕೂಲವಾಗುವಂತೆ ನಡೆಯುವುದನ್ನು ತಡೆಹಿಡಿಯಬೇಕು.

ಭಾರತದಲ್ಲಿ ಹಣವನ್ನು ಹಾಗೂ ಆದಾಯವನ್ನು ಒದಗಿಸುವುದರಿಂದಾಗಿ ಪಂಚಾಯತ್‌ರಾಜ್‌ಅನ್ನು ಬಲಪಡಿಸುವ ಪ್ರಯತ್ನ ನಡೆದಿದೆ. ಸರ್ವಜನರ ಕಲ್ಯಾಣಕ್ಕಾಗಿ ಹಾಗೂ ಸರಿಯಾದ ಉದ್ದೇಶಕ್ಕಾಗಿ ಹಣವನ್ನು ಬಳಸುವಂತೆ ಚುನಾಯಿತ ಅಭ್ಯರ್ಥಿಗಳಲ್ಲಿ ಜಾಗೃತಿಯುಂಟಾಗಬೇಕಾಗಿದೆ. ಸ್ವಯಂ ಸರ್ಕಾರಗಳಂತೆ ಕಾರ್ಯ ನಿರ್ವಹಿಸಲು, ಹೆಚ್ಚಿನ ಅಧಿಕಾರವನ್ನು ಪಂಚಾಯತ್ ಸಂಸ್ಥೆಗಳಿಗೆ ನೀಡಬೇಕೆಂಬ ಘೋಷಣೆಗಳಿಂದ ಮಾತ್ರವೇ ಭಾರತದಲ್ಲಿ ಪಂಚಾಯತ್‌ರಾಜ್‌ನ ಬೇರುಗಳು ಬಲಿಯುವುದಿಲ್ಲ.

ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಮುಖ್ಯ ನ್ಯೂನತೆ ಎಂದರೆ ಪಂಚಾಯತ್‌ರಾಜ್ ಪದ್ಧತಿಯ ಮೂರು ಮಟ್ಟಗಳ ಅಧಿಕಾರವನ್ನು ಸರಿಯಾಗಿ ವಿವರಿಸಲಾಗಿಲ್ಲ. ಇತ್ತೀಚೆಗೆ, ಎರಡು ಹಂ... ಗಳಲ್ಲಿ ಮಾತ್ರ ಅಧಿಕಾರದ ವಿಕೇಂದ್ರಿ... ಕರಣವನ್ನು ಕುರಿತು ಚರ್ಚೆ ನಡೆಸಲಾಗ... ತ್ತಿದೆ. ಜಿಲ್ಲಾ ಪರಿಷದ್‌ಗಳು ಪ್ರತಿಯೊಂದ... ಚಟುವಟಿಕೆಯಲ್ಲಿಯೂ ಹಸ್ತಕ್ಷೇಪ ನಡೆಸ... ತ್ತಿವೆ. ಗ್ರಾಮಮಟ್ಟದಲ್ಲಿ, ಜಿಲ್ಲಾ ಮಟ್ಟ... ದಲ್ಲಿ ಮತ್ತು ಅವೆರಡರ ಅಂತರದ ಮಟ್ಟ... ದಲ್ಲಿ ಯಾವ ಚಟುವಟಿಕೆಗಳನ್ನು ಪ್ರತ್ಯೇ... ವಾಗಿ ನಿರ್ವಹಿಸಬೇಕೆಂಬುದನ್ನು ಗುರುತಿ... ದಾಗಲೇ ಪಂಚಾಯತ್ ಆಡಳಿ... ವ್ಯವಸ್ಥೆಯು ಅರ್ಥಪೂರ್ಣವಾಗುತ್ತದೆ... ಖಂಡಿತಾ ಇದು ಕಷ್ಟಸಾಧ್ಯವಾದ ವಿಷಯ... ವಾಗಿದ್ದು ಪರಿಣತರ ಸಮಿತಿಯೊಂದನ... ರೂಪಿಸಬೇಕಾಗುತ್ತದೆ. ಕೃಷಿ, ಮೀನ... ಗಾರಿಕೆ, ಶಿಕ್ಷಣ ಮತ್ತು ಕುಟುಂಬ ಕಲ್ಯಾ... ಕ್ಷೇತ್ರಗಳನ್ನು ಗ್ರಾಮ ಪಂಚಾಯತ್‌ಗಳ... ವಹಿಸಬಹುದು. ಆದರೆ ಗ್ರಾಮಗಳ... ವಿದ್ಯುಚ್ಛಕ್ತಿ ಪೂರೈಕೆ, ಸಾರ್ವಜನಿ... ವಿತರಣಾಪದ್ಧತಿ, ಸಾರಿಗೆ ಮತ್ತು ಸಂಪ... ವನ್ನು ಜಿಲ್ಲಾ ಪರಿಷದ್‌ಗಳಿಗೆ ವಹಿಸಿಕೊ... ಬಹುದು. ಅದಲ್ಲದೆ, ಗ್ರಾಮದ ಸಮ... ಹಿರಿಯರನ್ನೂ ಒಳಗೊಂಡ ಗ್ರಾಮಸಭೆ... ಪಾತ್ರ ಮತ್ತು ಕರ್ತವ್ಯಗಳನ್ನು ಕುರಿ... ಸರಿಯಾಗಿ ವಿವರಣೆ ನೀಡಬೇಕು.

ಬಯಸಿದ ಮಟ್ಟಿಗೆ ಗ್ರಾಮೀಣ ಜ... ಸಹಕಾರ ಒದಗಿದಾಗ ಮಾತ್... ಪಂಚಾಯತ್‌ರಾಜ್ ಯಶಸ್ವಿಯಾಗಿ ಕೆ... ಮಾಡಲು ಸಾಧ್ಯ. ಈ ಸಂಸ್ಥೆಗಳ... ಸಮಾಜಕಲ್ಯಾಣಕ್ಕಾಗಿ ಬಳಸಿಕೊಳ್ಳುವ... ಜನರಲ್ಲಿ ಜಾಗೃತಿಯುಂಟುಮಾಡಬೇ... ಪಂಚಾಯತ್‌ರಾಜ್‌ನ ಫಲಗಳು ಸಾಮಾ... ಜನರಿಗೆ ತಲುಪಿಲ್ಲ ಏಕೆಂದರೆ ಪಂಚಾಯ... ರಾಜ್ ಸ್ಥಳೀಯ ಒತ್ತಡಗಳಿಗೆ ... ಯಾಗಿದೆ. ಅನೇಕಬಾರಿ ಚುನಾವಣೆ...

ಮೇಲ್ವರ್ಗದ ಜನರು ಹಾಗೂ ಜಮೀನ್ದಾರರು ಪ್ರಮುಖ ಪಾತ್ರ ವಹಿಸಿದ್ದಾರೆ. ಇದಕ್ಕೆ ಸ್ಥಳೀಯ ನಿವಾಸಿಗಳೇ ಕಾರಣ. ಮಾನಸಿಕ ಪರಿವರ್ತನೆಯೊಂದೇ ಜನರ ಹೊರನೋಟದಲ್ಲಿ ಆವಶ್ಯಕವಾದ ಬದಲಾವಣೆಯನ್ನು ತರಲು ಸಾಧ್ಯ. ಗ್ರಾಮೀಣ ಜನರು ವ್ಯಕ್ತಿ—ಆರಾಧನೆಯ ಭ್ರಮೆಯಿಂದ ಹೊರಬರಬೇಕು ಮತ್ತು ಈಗಾಗಲೇ ಆಳವಾಗಿ ಬೇರೂರಿರುವ ಪ್ರತಿಷ್ಠಿತ ವರ್ಗದ ಜನರನ್ನು ಕುರಿತಂಥ ಅಂಥ ಆರಾಧನೆಯನ್ನು ಮರೆಯಬೇಕು.

ಚುನಾವಣೆಗಳಲ್ಲಿ ಹಣವು ಅತಿ ಮುಖ್ಯವಾದ ನಿರ್ಣಾಯಕ ಅಂಶವಾಗಿದೆ. ಜನರನ್ನು ಹಣದ ಮೋಡಿಗೆ ಸಿಲುಕಿಸಿ, ಅವರ ಅಮೂಲ್ಯವಾದ ಮತಗಳನ್ನು ಖರೀದಿಸಲಾಗುತ್ತಿದೆ. ಗ್ರಾಮಸ್ಥರು ಇಂದಾದರೂ ತಮ್ಮ ದೀರ್ಘಕಾಲದ ಅನುಕೂಲತೆಗಳನ್ನು ತಾತ್ಕಾಲಿಕ ಆಸೆಗಳಿಗೆ ಬಲಿ ನೀಡುತ್ತಿದ್ದೇವೆ ಎಂದು ಅರಿತುಕೊಳ್ಳಬೇಡವೆ? ಸ್ಥಳೀಯ ಸಂಸ್ಥೆಗಳಿಗೆ ಒದಗುವ ಅಭಿವೃದ್ಧಿ ಸಂಪನ್ಮೂಲಗಳಿಂದಾಗಿ ಚುನಾವಣೆಗಳು ಒಂದು ಗಂಭೀರ ವ್ಯಾಪಾರವಾಗಿ ಪರಿವರ್ತಿಸಿವೆ. ಜನಾಭಿವೃದ್ಧಿ ಕಾರ್ಯಕ್ರಮಗಳ ಫಲಗಳು ಗ್ರಾಮಗಳಲ್ಲಿ ವಾಸಿಸುತ್ತಿರುವ ಸಾಮಾನ್ಯ ಜನರಿಗೆ ಒದಗುತ್ತಿಲ್ಲ. ಚುನಾವಣೆಗಳಲ್ಲಿನ ಸ್ಪರ್ಧೆಗಳು ಜಾತಿ ವಿವಾದ ಮತ್ತು ಕೋಮುಗಲಭೆಗೆ ಕಾರಣವಾಗಿವೆ. ಪಂಚಾಯತ್‌ಗಳ ಆರ್ಥಿಕ ಪರಿಸ್ಥಿತಿಯು ತೀರಾ ಶೋಚನೀಯವಾಗಿರುವುದರಿಂದ, ಚುನಾವಣೆಗಳಲ್ಲಿ ಭಾಗವಹಿಸುವುದು ಬರೀ ಶ್ರೀಮಂತ ವರ್ಗದ ಜನರ ಗೌರವ ಪ್ರತಿಷ್ಠೆಯ ವಿಷಯವಾಗಿದೆ. ಇದರ ಪರಿಣಾಮವಾಗಿ ಪ್ರಾಚೀನ ಕಾಲದ ಊಳಿಗಮಾನ್ಯ ಪದ್ಧತಿಯು ಮುಂದುವರೆಯುತ್ತಿದೆ. ಇಂಥಹ ವಾತಾವರಣದಲ್ಲಿ ಪ್ರಾಮಾಣಿಕತೆ ಮತ್ತು ಉನ್ನತ ಧ್ಯೇಯಗಳಿರುವ ಜನರು ನಾಯಕತ್ವವನ್ನು ವಹಿಸಿಕೊಳ್ಳಲು ಮುಂದಾಗುವುದು ತೀರಾ ವಿರಳವಾಗುತ್ತದೆ. ಪಂಚಾಯತ್‌ರಾಜ್ ಯಶಸ್ವಿಯಾಗದಿರಲು ಮತ್ತು ಅಡಚಣೆ ಎಂದರೆ ಅನಕ್ಷರತೆಯ ಸಮಸ್ಯೆ. ಸಾಕ್ಷರತಾ ಆಂದೋಲನಗಳು ಮೆರವಣಿಗೆಗಳಲ್ಲಿ ಮಾತ್ರವೇ ಕೊನೆಗೊಳ್ಳಬಾರದು. ಜನರಿಗೆ ತಮ್ಮ ಹಕ್ಕುಗಳನ್ನು ಹಾಗೂ ಕರ್ತವ್ಯಗಳನ್ನು ಕುರಿತು ಶಿಕ್ಷಣ ಮಾತ್ರಾ ಜಾಗೃತಿ ಉಂಟುಮಾಡಲು ಸಾಧ್ಯ. ಸಮಾಜವು ತಮಗೇನುಮಾಡಿದೆ ಎಂದು ಪ್ರಶ್ನಿಸುವುದಕ್ಕಿಂತಾ ಸಮಾಜಕ್ಕೆ ತಾವೇನು ಕೊಡುಗೆ ನೀಡಿದ್ದೇವೆ ಎಂಬ ಆತ್ಮವಿಮರ್ಶೆಯು ಖಂಡಿತಾ ಜನರಲ್ಲಿ ಬೆಳೆಯುತ್ತದೆ. ಸಮಾಜದಲ್ಲಿ ಒಂದು ಕಾಯಿದೆ ಅಥವಾ ಪದ್ಧತಿಯು ಯಶಸ್ಸು ಅಥವಾ ವೈಫಲ್ಯಕ್ಕೆ ಜನರೇ ಕಾರಣ ಎಂಬುದು ಸ್ಪಷ್ಟವಾಗಿದೆ. ಯೋಜನೆಯನ್ನು ರೂಪಿಸುವವರ ಭವ್ಯವಾದ ರಾಮರಾಜ್ಯದ ಕನಸು, ನೀತಿನಿಯಮಗಳನ್ನು ಉಲ್ಲಂಘಿಸುವ ಜನರಿಂದಲೇ ನಾಶವಾಗುತ್ತದೆ. ಭಾರತದಲ್ಲಿರುವ ವಿಚಿತ್ರವಾದ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಯು ಪಂಚಾಯತ್‌ರಾಜ್‌ನ ದುಃಸ್ಥಿತಿಗೆ ಕಾರಣವಾಗಿದೆ. ವ್ಯಯಕ್ತಿಕ ಲಾಭವನ್ನು ಗಳಿಸಲು, ಸಮಾಜದ ಕಲ್ಯಾಣಕ್ಕಾಗಿ ರೂಪಿಸಲಾದ ಸಂಸ್ಥೆಗಳನ್ನೇ ಮುರಿಯುತ್ತಿದ್ದೇವೆ ಎಂದು ಜನರು ಅರಿಯಬೇಡವೆ?

ಭಾರತೀಯ ಸಂಸ್ಕೃತಿಯ ಮೊದಲ ಮುಸ್ಲಿಂ ವಿದ್ವಾಂಸ—ಅಲ್‌ಬೆರೂನಿ

ಡಾ. ತಿಪ್ಪೇಸ್ವಾಮಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರ
ಹಿಂದಿ ವಿಭಾಗ, ಮಾನಸಗಂಗೋತ್ರಿ
ಮೈಸೂರು-೫೭೦೦೦೬

ಹನ್ನೊಂದನೆಯ ಶತಮಾನದ ಮೊದಲ ಹಂತದಲ್ಲಿ ಮಹಮೂದ್ ಗಜನವಿಯ ಸೈನ್ಯ ಉತ್ತರ ಮತ್ತು ಪಶ್ಚಿಮ ಭಾರತದ ಮೇಲೆ ಆಕ್ರಮಣ ಮಾಡಿ ಸ್ಥಾನೇಶ್ವರ, ಮಥುರಾ, ಕನೌಜ್ ಮತ್ತು ಪ್ರಭಾಸ್ ಪಾಟನ್ (ಸೋಮನಾಥ) ದಂಥ ಸಮೃದ್ಧ ನಗರಗಳನ್ನು ಧ್ವಂಸ ಮಾಡುತ್ತಿದ್ದಾಗ ಹಾಗೂ ಪ್ರಸಿದ್ಧ ದೇವಾಲಯಗಳಲ್ಲಿ ಶತಶತಮಾನಗಳಿಂದ ಸಂಚಿತವಾಗಿದ್ದ ಬಹುಮೂಲ್ಯವಾದ ಸಂಪತ್ತನ್ನು ಲೂಟಿ ಮಾಡಲು ದೇವರ ವಿಗ್ರಹಗಳನ್ನು ಭಗ್ನಗೊಳಿಸುತ್ತಿದ್ದಾಗ, ಓರ್ವ ಮುಸ್ಲಿಂ ಚಿಂತಕ ಕಾಫಿರ್ ಎಂದು ಭಾವಿಸಲಾಗುತ್ತಿದ್ದ ಹಿಂದೂಗಳ ಸಂಸ್ಕೃತಿ ಮತ್ತು ನಾಗರೀಕತೆಯ ಅಧ್ಯಯನದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ.

ಇಸ್ಲಾಂನ ಇತಿಹಾಸದಲ್ಲಿ ಬಹುಶಃ ಈತ ಭಗವದ್ಗೀತೆ, ಸಾಂಖ್ಯ, ಯೋಗ ಮತ್ತು ಪುರಾಣಗಳನ್ನು ಸಂಸ್ಕೃತ ಮೂಲದಲ್ಲಿ ಓದುವ ಪ್ರಯತ್ನ ಮಾಡಿದ ಮೊದಲ ವ್ಯಕ್ತಿ. ಅಷ್ಟೇ ಅಲ್ಲ ಈತ ಸಂಸ್ಕೃತ ಗ್ರಂಥಗಳನ್ನು ಅರಬ್ಬೀ ಭಾಷೆಗೆ ಮತ್ತು ಅರಬ್ಬಿ ಭಾಷೆಯ ಗ್ರಂಥಗಳನ್ನು ಸಂಸ್ಕೃತಕ್ಕೆ ಅನ ವಾದಿಸಿದ. ಈತ ಭಾರತ, ಭಾರತೀಯ ಸಂಸ್ಕೃತಿ ಮತ್ತು ಪ್ರಾಚ್ಯವಿದ್ಯೆಯನ್ನು ಕುರಿತಂತೆ ಒಂದು ಪ್ರಾಮಾಣಿಕ ಗ್ರಂ ವನ್ನು ರಚಿಸಿದ. ವಿಧ್ವಂಸಕ ತಾಂಡ ನೃತ್ಯದ ಮಧ್ಯೆ ಅದ್ಭುತವಾದ ಸತ್ಯನಿ ಯಿಂದ ಅಪೂರ್ವ ಸಾಹಿತ್ಯ ರಚನೆ ಮಾಡಿ ಈ ವಿದ್ವಾಂಸನ ಹೆಸರು ಅಬ್ರಹಾಂ ಮು ಮದ್ ಇಬ್ನ್ ಅಹಮದ್ ಅಲ್ ಬೆರೂನಿ.

ಅಲ್ ಬೆರೂನಿ ರಷ್ಯದ ಉಜ್‌ಬೆ ಸ್ತಾನ್‌ದ ಸುಪ್ರಸಿದ್ಧ ನಗರವಾ ಖ್ವಾರಿಜ್ಮ್ ಅಥವಾ ಖೀವಾದ ಸಮಿ ವಿರುವ ಕೈಥ್ ಎಂಬ ಪುಟ್ಟ ಗ್ರಾಮದಲ್ಲಿ ಈರಾನಿ ಕುಟುಂಬದಲ್ಲಿ ಕ್ರಿ. ಶ. ೯೭೩ ಜನಿಸಿದ. ಬಾಲ್ಯದಲ್ಲಿ ಇವನಿಗೆ ಸುಪ್ರಸಿ ಜ್ಯೋತಿಷಿ ಮತ್ತು ಗಣಿತಶಾಸ್ತ್ರ ಪಂ ರಾದ ಬಂದಾದುಲ್ ಸರ್‌ಹಸನೀ ಮತ್ತು ಅಬೂನಸ್ರ್‌ ಮನ್ಸೂರ್ ಅವರ ಸಾನ್ನಿ ದಲ್ಲಿ ಕುಳಿತು ವಿದ್ಯಾರ್ಜನೆ ಮಾಡ ಅವಕಾಶ ದೊರೆಯಿತು.

೧೯೬೩ರ ‘ನವನೀತ್’ ಡೈಜೆಸ್ಟ್‌ನಲ್ಲಿ ಪ್ರಕಟವಾಗಿರುವ ಹರಿದತ್ ವೇದಾಲಂಕಾರ್ ಅ
ಲೇಖನದ ಅನುವಾದ.

ಅಲ್‌ಬೆರೂನಿಯ ಗ್ರಂಥಗಳಲ್ಲಿ ಅಲ್ಲಲ್ಲಿ ದೊರೆಯುವ ಅಂತಸ್ಸಾಕ್ಷ್ಯಗಳನ್ನು ಬಿಟ್ಟರೆ ಈತನ ಬದುಕಿನ ಬಗೆಗೆ ಪ್ರಾಮಾಣಿಕ ಮಾಹಿತಿ ಬಹಳ ಕಡಿಮೆ ಲಭ್ಯವಿದೆ. ಈತ ಖ್ವಾರಿಜ್ಮ್‌ನಿಂದ ಹೊರಗೆ(ಬೆರೂ) ಕೈಥ್‌ನ ನಿವಾಸಿಯಾದ ಕಾರಣ 'ಅಲ್‌ಬೆರೂಸಿ' ಅಥವಾ ಹೊರಗಿನವ ಎಂದಾದರು. ತನ್ನ ಅಸಾಧಾರಣ ಪ್ರತಿಭೆಯಿಂದಾಗಿ ಶೀಘ್ರವಾಗಿ ಗಣಿತ, ಜೋತಿಷ್ಯ ಮುಂತಾದ ನಾನಾ ಶಾಸ್ತ್ರಗಳಲ್ಲಿ ಪ್ರಾವೀಣ್ಯತೆಯನ್ನು ಸಾಧಿಸಿದ. ಮತ್ತು ಯೂನಾನಿ, ಇಬ್ರಾನಿ, ಈರಾನಿ, ಮಾನಿ ಮುಂತಾದ ನಾನಾ ಧರ್ಮ ಸಂಪ್ರದಾಯಗಳ ಮತ್ತು ದಾರ್ಶನಿಕ ಸಿದ್ಧಾಂತಗಳನ್ನು ಆತ್ಮೀಕರಿಸಿಕೊಂಡ.

ಕ್ರಿ. ಶ. ೯೯೫ರಲ್ಲಿ ನೆರೆಯ ಜುರ್ಜಾನ್ ರಾಜ್ಯ ಈತನ ಮಾತೃಭೂಮಿ ಖೀವಾದ ಮೇಲೆ ಆಕ್ರಮಣ ಮಾಡಿದಾಗ, ಈತ ಅಲ್ಲಿಂದ ನಿರ್ವಾಸಿತಗೊಂಡು ರೈ ಎಂಬ ನಗರಕ್ಕೆ ಬರಬೇಕಾಯಿತು. ಮುಂದೆ ಅಲ್ಲಿಂದ ಎರಡು ವರ್ಷಗಳ ನಂತರ ಈತ ತನ್ನ ತಾಯ್ನಾಡಾದ ಕೈಥ್‌ಗೆ ಬಂದ. ಕೈಥ್ ನಗರದಲ್ಲೇ ಈತ ಕ್ರಿ. ಶ. ೯೯೭ರಲ್ಲಿ ಒಂದು ಚಂದ್ರಗ್ರಹಣವನ್ನು ವೀಕ್ಷಿಸಿದ. ಇದೇ ಚಂದ್ರಗ್ರಹಣವನ್ನು ಬಾಗ್ದಾದಿನಲ್ಲಿ ಅಬುಲ್‌ವಫಾ ಎಂಬ ಜ್ಯೋತಿಷಿಯೂ ವೀಕ್ಷಿಸಿದ್ದ. ಎರಡೂ ಸ್ಥಾನಗಳಲ್ಲಿ ಗ್ರಹಣ ಹಿಡಿದ ಕಾಲದ ಅಂತರದ ಆಧಾರದ ಮೇಲೆ ಈತ ಆ ಸ್ಥಾನಗಳ ದೇಶಾಂತರ ರೇಖೆಯನ್ನು ನಿರ್ಧರಿಸಿದ. ಇದು ಈ ನಿಟ್ಟಿನಲ್ಲಿ ಮಾಡಿದ ಒಂದು ವಿನೂತನ ಪ್ರಯೋಗವಾಗಿತ್ತು.

ಇದಾದ ಮೇಲೆ ಈತ ವಿಭಿನ್ನ ರಾಜ್ಯಗಳ ಪಂಚಾಂಗಗಳ, ವರ್ಷ (ಸಂವತ್)ಗಳ ಮತ್ತು ತಿಥಿಗಳ ಬಗೆಗೆ ಬಹುಮೂಲ್ಯವಾದ ಸಾಮಗ್ರಿಗಳನ್ನು ಒಟ್ಟುಗೂಡಿಸಲಾರಂಭಿಸಿದ. ಕ್ರಿ. ಶ. ೧೦೦೦ದಲ್ಲಿ ಈತ ಈ ವಿಷಯಕ್ಕೆ ಸಂಬಂಧಿಸಿದಂತೆ 'ಅಸಾರ್ ಅಲಬಾಕಿಯಾ' (ಪ್ರಾಚೀನ ರಾಜ್ಯಗಳ ಕಾಲನಿರ್ಣಯ) ಎಂಬ ಒಂದು ಪುಸ್ತಕವನ್ನು ಬರೆದು ಜುರ್ಜಾನ್‌ನ ರಾಜಕುಮಾರನಿಗೆ ಅರ್ಪಿಸಿದ. ಈ ಪುಸ್ತಕದಲ್ಲಿ ಈರಾನ್ ಪಂಚಾಂಗಗಳ, ವರ್ಷ (ಸಂವತ್)ಗಳ ಮತ್ತು ಮಧ್ಯ ಏಷ್ಯಾದ ಇತಿಹಾಸಕ್ಕೆ ಸಂಬಂಧಿಸಿದ ಮಹತ್ವಪೂರ್ಣ ಮಾಹಿತಿಗಳ ಕಣಜವಾಗಿದೆ. ಈ ಪುಸ್ತಕದಿಂದಾಗಿಯೇ ಈತನಿಗೆ ಜುರ್ಜಾನ್‌ನ ರಾಜಾಸ್ಥಾನದಲ್ಲಿ ತುಂಬ ಗೌರವ ದೊರೆಯಿತು. ಕೆಲಕಾಲದ ನಂತರ ಈತ ತನ್ನ ತಾಯ್ನಾಡಾದ ಖೀವಾಗೆ ವಾಪಸಾದ. ಇಲ್ಲಿನ ರಾಜಾಸ್ಥಾನದಲ್ಲೂ ಇವನಿಗೆ ಉಚ್ಚಪದವಿ ದೊರೆಯಿತು.

ಕ್ರಿ. ಶ. ೧೦೧೭ರಲ್ಲಿ ಖೀವಾ ಮಹಮೂದ್ ಗಜನವಿಯ ಆಕ್ರಮಣಕ್ಕೆ ಬಲಿಯಾಯಿತು. ಅಲ್‌ಬೆರೂನಿ ಖೀವಾವನ್ನು ಈ ಆಕ್ರಮಣದಿಂದ ಪಾರುಮಾಡಲು ಪ್ರಯತ್ನಿಸದ್ದರಿಂದ ಮಹಮೂದ್ ಮತ್ತು ಅವನ ಪ್ರಧಾನಮಂತ್ರಿ ಅಹಮದ್ ಹಸನ್ ಮೈಮದಿ ಇವರನ್ನು ತನ್ನ ಕಟ್ಟಾವಿರೋಧಿ ಎಂಬುದಾಗಿ ಭಾವಿಸಿದರು. ಮಹಮೂದ್ ಖೀವಾದ ಪರಾಜಿತರಾದ ಎಲ್ಲ ಪ್ರಮುಖ ರಾಜನೀತಿಜ್ಞರನ್ನು ಹಾಗೂ ಸೈನಿಕರನ್ನು ಬಂದಿಗಳನ್ನಾಗಿ ಮಾಡಿ ಭಾರತಕ್ಕೆ ಕಳುಹಿಸಿದ. ಇವರಾರೂ ತನ್ನ ವಿರುದ್ಧ ಪಿತೂರಿ ಮಾಡಬಾರದು ಎಂಬುದೇ ಹೀಗೆ ಮಾಡಲು ಕಾರಣವಾಗಿತ್ತು. ಈ ರೀತಿ ಅಲ್‌ಬೆರೂನಿ ತನ್ನ ತಾಯ್ನಾಡಿನಿಂದ ಗಡೀಪಾರು ಮಾಡಲ್ಪಡಲಾಗಿ ಭಾರತಕ್ಕೆ ಆಗಮಿಸಿದ.

ಭಾರತಕ್ಕೆ ಆಗಮಿಸುವುದಕ್ಕಿಂತ ಮೊದಲೇ ಸಂಸ್ಕೃತ ಗ್ರಂಥಗಳ ಅರಬ್ಬೀ ಅನುವಾದಗಳಿಂದ ಈತ ಭಾರತೀಯ ಗಣಿತ ಶಾಸ್ತ್ರ, ಜ್ಯೋತಿಷ್ಯ ಮತ್ತು ತಿಥಿ ಗಣನೆಯ ಬಗೆಗೆ ಬಹುಶಃ ಹೆಚ್ಚು ತಿಳುವಳಿಕೆ ಹೊಂದಿದ್ದನೆಂದು ಕಾಣುತ್ತದೆ. ಈ ಅನುವಾದಗಳನ್ನು ಬಗ್ದಾದ್‌ನ ಅಬ್ಬಾಸಿ ಖಲೀಫಾಗಳ ಮೂಲಕ ಕ್ರಿ. ಶ. ೮ನೇ ಶತಮಾನದಲ್ಲೇ ಮಾಡಿಸಲಾಗಿತ್ತು. ಇವುಗಳಲ್ಲಿ ಬ್ರಹ್ಮಗುಪ್ತನಿಂದ ರಚಿತವಾದ ಮತ್ತು ಅಲ್‌ಫಜಾರಿ ಅವರಿಂದ ಅನುವಾದಗೊಂಡ 'ಬ್ರಹ್ಮಸಿದ್ಧಾಂತ' ಅಥವಾ ಸಿದ್‌ಹಿದ್, ಯಾಕುಬ್ ಇಬ್ನ ತಾರೀಫ್ ಅವರಿಂದ ಅನುವಾದಗೊಂಡ 'ಖಂಡಖಾಧ್ಯಕ್' ಅಥವಾ 'ಅರಕಂದ್', ಅಲೀ ಇಬ್ನ್ ಜೈನ್ ಅವರಿಂದ ಅನುವಾದಗೊಂಡ ಚರಕನ ಕೃತಿ ಮತ್ತು ವಿಶ್ವೇಶ್ವರನ 'ಕರಣಸಾರ' ಎಂಬ ಗ್ರಂಥಗಳಿದ್ದುವು. ಈತ ಭಾರತಕ್ಕೆ ಬಂದು ಮೂಲ ಸಂಸ್ಕೃತ ಗ್ರಂಥಗಳಿಂದ ಭಾರತೀಯ ಜ್ಯೋತಿಷ್ಯವನ್ನು ಅಧ್ಯಯನ ಮಾಡಲಾರಂಭಿಸಿದ.

ಈ ಸಂದರ್ಭದಲ್ಲಿ ಉಲ್ಲೇಖಿಸಬೇಕಾದ ಒಂದು ಅಂಶವೆಂದರೆ ಕ್ರಿ. ಶ. ೭೭೦ರ ಸರಿಸುಮಾರಿನಲ್ಲಿ ಬಗ್ದಾದ್‌ನಲ್ಲಿ ಅನುವಾದಗೊಂಡ ಗ್ರಂಥಗಳೇ ಜ್ಯೋತಿಷ್ಯದ ಕ್ಷೇತ್ರದಲ್ಲಿ ಕ್ರಿ. ಶ. ೧೦೩೦ರಲ್ಲಿ ಭಾರತದಲ್ಲೂ ಸರ್ವಶ್ರೇಷ್ಠ ಗ್ರಂಥಗಳೆಂದು ಮಾನ್ಯವಾಗಿದ್ದುವು. ಈ ಎಲ್ಲವನ್ನು ಬರೆದವನು ಬ್ರಹ್ಮಗುಪ್ತ. ಅಲ್‌ಬೆರೂನಿ ಸಂಸ್ಕೃತ ವಿದ್ವಾಂಸರ ನೆರವಿನಿಂದ ಈ ಗ್ರಂಥಗಳ ಹಾಗೂ 'ಪುಲಿಶ ಸಿದ್ಧಾಂತ' (ಪೌಲಸ್ತ್ಯ ಸಿದ್ಧಾಂತ)ದ ಅನುವಾದ ಮಾಡಲು ಪ್ರಯತ್ನಿಸಿದ. ಈತ ಭಾರತಕ್ಕೆ ಸಂಬಂಧಿಸಿದ ಪುಸ್ತಕ ಬರೆದಾಗ ಇವನ ಬಳಿ ಭಾರತೀಯ ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದ ಇನ್ನೂ ಏಳು ಪುಸ್ತಕಗಳಿದ್ದುವು. ಸಂಸ್ಕೃತದಲ್ಲಿದ್ದ ಜ್ಯೋತಿಷ್ಯ ಗ್ರಂಥಗಳ ಅನುವಾದವನ್ನು ಈತ ಮಾಡಿದನಷ್ಟೇ. ಇವು ಆ ಮೊದಲೇ ಅರಬ್ಬೀ ಭಾಷೆಗೆ ಅನುವಾದವಾಗಿದ್ದುವು. ಈತ ಈ ಹಳೆಯ ಅನುವಾದದಲ್ಲಿದ್ದ ದೋಷಗಳನ್ನು ಸುಧಾರಿಸಿ ಅವಕ್ಕಿಂತಲೂ ಹೆಚ್ಚು ಶುದ್ಧವಾದ ಹಾಗೂ ಪ್ರಾಮಾಣಿಕವಾದ ಅನುವಾದಗಳನ್ನು ನೀಡಿದ್ದಷ್ಟೇ ಅಲ್ಲ, ತುಂಬಾ ಪರಿಶ್ರಮವಹಿಸಿ ಭಾರತೀಯ ಜ್ಯೋತಿಷಿಗಳ ಗಣಿಕೆಗಳನ್ನು ಇನ್ನೊಮ್ಮೆ ಪುನರ್ಪರಿಶೀಲನೆಗೆ ಒಳಪಡಿಸಿದ.

ಮುಸ್ಲಿಂ ದೇಶಗಳಲ್ಲಿರುವ ತಮ್ಮ ಧರ್ಮಾವಲಂಬಿ ಸೋದರರು ಫಲಿತ ಜ್ಯೋತಿಷ್ಯದ ಹಿಂದೂ ಪದ್ಧತಿಯ ಗಣಿಕೆಯೊಂದಿಗೆ ಪರಿಚಿತರಾಗಿಲ್ಲ ಹಾಗೂ ಈ ವಿಷಯಕ್ಕೆ ಸಂಬಂಧಿಸಿದ ಭಾರತೀಯ ಗ್ರಂಥಗಳನ್ನು ಅಭ್ಯಸಿಸುವ ಅವಕಾಶ ಪಡೆದಿಲ್ಲ ಎಂದು ಅಲ್‌ಬೆರೂನಿ ಬರೆದಿದ್ದಾನೆ. ಈ ಕೊರತೆಯನ್ನು ನಿವಾರಿಸಲು ಈತ ವರಾಹಮಿಹಿರನ 'ಬೃಹತ್ಸಂಹಿತೆ' ಮತ್ತು 'ಲಘುಜಾತಕ'ವನ್ನು ಅರಬ್ಬೀ ಭಾಷೆಗೆ ಅನುವಾದಿಸಿದ. ಹಾಗೆ ನೋಡಿದರೆ ಈತನ ಈ ಹೇಳಿಕೆ ನೂರಕ್ಕೆ ನೂರರಷ್ಟು ನಿಜವೆಂದು ಅನ್ನಿಸುವುದಿಲ್ಲ. ಏಕೆಂದರೆ ಅಬ್ಬಾಸೀ ಖಲೀಫಾಗಳ ಕಾಲದಲ್ಲೂ ಭಾರತೀಯ ಫಲಿತ ಜ್ಯೋತಿಷ್ಯದ ಕೆಲವು ಗ್ರಂಥಗಳು ಅರಬ್ಬೀ ಭಾಷೆಗೆ ಅನುವಾದವಾಗಿದ್ದುವು.

ಚಿಕಿತ್ಸಾಶಾಸ್ತ್ರದಲ್ಲಿ ಅಲ್‌ಬೆರೂನಿ ಅಂಥ ವಿಶೇಷವಾದ ಆಸಕ್ತಿಯೇನೂ

ಲಿಲ್ಲ. 'ಚರಕ ಸಂಹಿತೆ'ಯ ಅರಬ್ಬೀ ಅನುವಾದ ಈ ಮೊದಲೇ ಆಗಿತ್ತು. ಆದರೆ ಆ ಅನುವಾದ ಸರಿಯಾಗಿಲ್ಲನೆಂದು ಅಲ್‌ಬೆರೂನಿ ಅನೇಕ ಪ್ರಸಂಗಗಳಲ್ಲಿ ಹೇಳಿದ್ದಾನೆ. ಭಯಂಕರ ರೋಗಗಳಿಗೆ ಸಂಬಂಧಿಸಿದ ಸಂಸ್ಕೃತ ಗ್ರಂಥವೊಂದನ್ನು ಈತನೇ ಅನುವಾದಿಸಿದ. ಪಂಚತಂತ್ರದ ಹೊಸ ಅನುವಾದದ ಸಂಸ್ಕರಣವನ್ನು ಅರಬ್ಬಿಯಲ್ಲಿ ತರಬೇಕೆಂಬ ತೀವ್ರ ಅಭಿಲಾಷೆ ಇವನಿಗಿತ್ತು. ಏಕೆಂದರೆ ಆಗ ಅರಬ್ಬಿಯಲ್ಲಿದ್ದ ಪಂಚತಂತ್ರದ ಅನುವಾದ ಫಾರಸಿ ಅನುವಾದ 'ಕಲೀಲಾ–ದಿಮನಾ' (ಕರಟಕ–ದಮನಕ)ವನ್ನು ಆಧರಿಸಿ ಮಾಡಲಾಗಿದ್ದಿತು. ಇದನ್ನು ಅಲ್‌ಬೆರೂನಿ ಪ್ರಾಮಾಣಿಕವೆಂದು ಭಾವಿಸಿರಲಿಲ್ಲ.

ಭಾರತೀಯ ದರ್ಶನಶಾಸ್ತ್ರ ಅಲ್‌ಬೆರೂನಿಗೆ ಪ್ರಿಯ ವಿಷಯವಾಗಿತ್ತು. ಮೂಲ ಸಂಸ್ಕೃತದಲ್ಲಿ ಈ ಶಾಸ್ತ್ರವನ್ನು ಗಂಭೀರವಾಗಿ ಅಧ್ಯಯನ ಮಾಡಿದ ಮೊಟ್ಟ ಮೊದಲ ಮುಸ್ಲಿಂ ವಿದ್ವಾಂಸ ಅಲ್‌ಬೆರೂನಿ. ಈತನಿಗಿಂತ ಮುಂಚೆ ಅಲ್ ಈರಾನ್ ಶಹರಿ ಎಂಬಾತ ಜುರ್‌ಕಾನ್ ಎಂಬ ಲೇಖಕನ ಪುಸ್ತಕವನ್ನು ಆಧರಿಸಿ ಈ ಶಾಸ್ತ್ರ ಕುರಿತಂತೆ ವಿಶ್ಲೇಷಣೆ ಮಾಡಿದ್ದ. ಅರಬ್ಬಿಯಲ್ಲಿ ಅಲ್‌ಬೆರೂನಿಗಿಂತ ಮುಂಚೆ ಬರೆದವರೆಂದರೆ ಈತನೇ. ಅಲ್‌ಬೆರೂನಿಯು ಅಲ್ ಈರಾನ್‌ಶಹರಿಯ ವಿಶ್ಲೇಷಣೆಯನ್ನು ವಿಮರ್ಶಿಸಿದ್ದಲ್ಲದೆ ಕಪಿಲನ 'ಸಾಂಖ್ಯ' ಹಾಗೂ ಪತಂಜಲಿಯ 'ಯೋಗದರ್ಶನ'ದ ಸುಂದರ ಅನುವಾದವನ್ನು ಮೊಟ್ಟ ಮೊದಲ ಬಾರಿಗೆ ಅರಬ್ಬಿಯಲ್ಲಿ ಪ್ರಸ್ತುತಪಡಿಸಿದ. (ಅವರು ಸಾಂಖ್ಯಕ್ಕೆ ಕೊಟ್ಟಿರುವ ವಿವರಣೆ ಸಾಂಖ್ಯ ಸೂತ್ರಗಳಿಗಿಂತಲೂ ಹೆಚ್ಚಾಗಿ ಸಾಂಖ್ಯಕಾರಿಕಾದೊಂದಿಗೆ ಹೆಚ್ಚು ಹೋಲುತ್ತದೆ) ಈ ಕೆಲಸವನ್ನು ತನ್ನ ಸುಪ್ರಸಿದ್ಧ 'ತಾರೀಖುಲ್ ಹಿಂದ್' ಎಂಬ ಭಾರತಕ್ಕೆ ಸಂಬಂಧಿಸಿದಂಥ ಗ್ರಂಥವನ್ನು ರಚಿಸುವುದಕ್ಕೆ ಬಹು ಮುಂಚೆಯೇ ಮಾಡಿದ್ದ. ಇದರಿಂದಾಗಿ ಈ ಪುಸ್ತಕದ ದರ್ಶನಶಾಸ್ತ್ರ ಸಂಬಂಧದ ಪ್ರಕರಣಗಳನ್ನು ಬರೆಯಲು ತುಂಬ ಸಹಾಯ ಒದಗಿತು.

ಭಗವದ್ಗೀತೆಯ ಉದಾತ್ತ ವಿಚಾರಗಳೂ ಇವನನ್ನು ತುಂಬ ಪ್ರಭಾವಗೊಳಿಸಿದ್ದುವು. ಈ ಕುರಿತ ವಿಶ್ಲೇಷಣೆಯನ್ನು ಈತ 'ತಾರೀಖುಲ್ ಹಿಂದ್' ಗ್ರಂಥದಲ್ಲಿ ಮತ್ತೆ-ಮತ್ತೆ ಮಾಡಿದ್ದಾನೆ. ನಿಜ ಹೇಳಬೇಕೆಂದರೆ ಭಗವದ್ಗೀತೆಯ ವಿಚಾರಗಳನ್ನು ಮೊಟ್ಟಮೊದಲ ಬಾರಿಗೆ ಮುಸ್ಲಿಂ ಬಾಂಧವರಿಗೆ ಪರಿಚಯಿಸುವ ಕೆಲಸ ಮಾಡಿದ ಶ್ರೇಯಸ್ಸು ಅಲ್‌ಬೆರೂನಿಗೆ ಸಲ್ಲಬೇಕು. ಇದೇ ರೀತಿ ಪುರಾಣಗಳನ್ನು ಅರಬ್ಬೀ ವಿದ್ವಾಂಸರಿಗೆ ಮೊಟ್ಟ ಮೊದಲ ಬಾರಿಗೆ ಪರಿಚಯಿಸಿದ್ದು ಈತನೇ. 'ತಾರೀಖುಲ್ ಹಿಂದ್' ಗ್ರಂಥದಲ್ಲಿ ಈತ 'ವಾಯುಪುರಾಣ', 'ಆದಿತ್ಯ ಪುರಾಣ', 'ಮತ್ಸ್ಯ ಪುರಾಣ' ಹಾಗೂ 'ವಿಷ್ಣು ಧರ್ಮ ಪುರಾಣ'ದಿಂದ ಅನೇಕ ಆಧಾರಗಳನ್ನೂ ಮತ್ತು ಅವರ ಭಾಗಗಳನ್ನೂ ಉದಹರಿಸಿದ್ದಾನೆ.

ಇವೇ ಅಲ್ಲದೆ ಈತ ಗಣಿತ ಮತ್ತು ಫಲಿತ ಜ್ಯೋತಿಷ್ಯ, ತಿಥಿಕ್ರಮ ಮತ್ತು ಭೂಗೋಳಕ್ಕೆ ಸಂಬಂಧಪಟ್ಟಂತೆ ಬಹುಶಃ ಈ ಕೆಳಕಂಡ ಗ್ರಂಥಗಳನ್ನು ಪರಿಶೀಲಿಸಿದ್ದ—ಬ್ರಹ್ಮಗುಪ್ತನ 'ಪುಲಿಶ ಸಿದ್ಧಾಂತ'

(ಪೌಲಾಸ್ತ್ಯ ಸಿದ್ಧಾಂತ), ಬ್ರಹ್ಮ ಸಿದ್ಧಾಂತ, ಖಂಡಖಾದ್ಯಕ, ಉತ್ತರ ಖಂಡ ಖಾದ್ಯಕ, ಬಲಭದ್ರರ 'ಖಂಡ ಖಾದ್ಯಕ'ದ ಟೀಕೆ, ವರಾಹ ಮಿಹಿರನ ಬೃಹತ್ಸಂಹಿತಾ, ಪಂಚ ಸಿದ್ಧಾಂತಿಕಾ, ಬೃಹಜ್ಜಾತಕ, ಲಘು ಜಾತಕ, ಬೃಹತ್ಸಂಹಿತಾದ ಒಂದು ಟೀಕೆ, ವಿಶ್ವೇಶ್ವರನ ಕರಣಸಾರ, ವಿಜಯಾನಂದಿಯ ಕರಣ ತಿಲಕ ಮತ್ತು ಮುಲ್ತಾನ್‌ವಾಸಿ ದುರ್ಲಭ್ ಬರೆದ ಒಂದು ಪುಸ್ತಕ. ಹಾಗೆ ನೋಡಿದರೆ ಈತ ತನ್ನ ಪುಸ್ತಕದಲ್ಲಿ ರಾಮಾಯಣ ಮತ್ತು ಮಹಾಭಾರತದಿಂದಲೂ ಕೆಲವಾರು ಅಂಶಗಳನ್ನು ಉಲ್ಲೇಖಿಸಿದ್ದಾನೆಯಾದರೂ ಉಲ್ಲೇಖ ಮಾಡಿರುವ ರೀತಿಯನ್ನು ಗಮನಿಸಿದರೆ ಅವನ ಬಳಿ ಈ ಗ್ರಂಥಗಳ ಮೂಲ ಪ್ರತಿಗಳು ಇದ್ದುವೆಂದು ಅನ್ನಿಸುವುದಿಲ್ಲ.

ಈ ಎಲ್ಲ ಆಧಾರ ಗ್ರಂಥಗಳ ಸ್ವಂತ ಅಧ್ಯಯನದಿಂದಾಗಿ ಈತ ಪ್ರಸ್ತುತ ಪಡಿಸಿರುವ ಹಿಂದೂ ದರ್ಶನದ ವಿವರಣೆ ಆ ಕಾಲದ ದೃಷ್ಟಿಯಿಂದ ಅದ್ವಿತೀಯವಾದುದಾಗಿದೆ. ಹಿಂದೂ ಪದ್ಧತಿಗನುಸಾರವಾಗಿ ಈತ ಪರಿಚಯಿಸಿದ ಜ್ಯೋತಿಷ್ಯ ಶಾಸ್ತ್ರ, ಆ ಹಿಂದಿನ ಎಲ್ಲ ವಿವರಣೆಗಿಂತಲೂ ಹೆಚ್ಚು ಶುದ್ಧವೂ ಸಮಗ್ರವೂ ಆಗಿತ್ತು.

ಅಲ್‌ಬೆರೂನಿ ೧೩ ವರ್ಷಗಳವರೆಗೆ ಭಾರತದಲ್ಲಿ ನಿರ್ವಾಸಿತನಾಗಿದ್ದ. ಬಹುಶಃ ಈತ ಈ ಅವಧಿಯನ್ನು ಮುಲ್ತಾನ್ ಮತ್ತು ಪೇಶಾವರ್‌ನಲ್ಲಿ ಕಳೆದ. ಇಲ್ಲಿದ್ದುಕೊಂಡು ಈತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಂಸ್ಕೃತ ಗ್ರಂಥಗಳನ್ನು ಸಂಗ್ರಹಿಸಿದ. ಸಾಧ್ಯವಾದಷ್ಟು ಹೆಚ್ಚು ಮಂದಿ ವಿದ್ವಾಂಸರ ಸಂಪರ್ಕಕ್ಕೆ ಬರಲು ಪ್ರಯತ್ನಿಸಿದ. ಸಂಸ್ಕೃತ ಮತ್ತು ಇತರೆ ಭಾರತೀಯ ಭಾಷೆಗಳನ್ನು ಬಲ್ಲ ಜನರ ಹತ್ತಿರ ಬರಲು ಯತ್ನಿಸಿದ. ಈತನು ಹೇಳಿರುವಂತೆ—'ಈ ವಿಷಯದಲ್ಲಿ ನನಗೆ ತುಂಬ ಪ್ರೀತಿಯುಂಟು. ಈ ದೃಷ್ಟಿಯಿಂದ ನನ್ನ ಕಾಲಕ್ಕೆ ನಾನೊಬ್ಬನೇ ಹೀ... ದ್ದವನು. ಯಾವ ಯಾವ ಸ್ಥಳದಲ್ಲಿ ಸಂಸ್ಕೃ... ಪುಸ್ತಕಗಳು ಲಭ್ಯವಾಗುವ ಸಾಧ್ಯ... ಯಿತ್ತೋ ಅಲ್ಲಿಗೆಲ್ಲ ಹೋಗಿ ಆ ಪುಸ್ತ... ಗಳನ್ನು ಸಂಗ್ರಹಿಸುವ, ಆ ಪುಸ್ತಕಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ಹೀಗೆ ಅರ್ಥ ಮಾಡಿಕೊಳ್ಳುವ ದಿಕ್ಕಿನಲ್ಲಿ ಅರ್ಥ ಮಾ... ಸುವ ವಿದ್ವಾಂಸರು ಅದೆಷ್ಟೇ ದೂರದಲ್ಲಿರ... ಅವರಲ್ಲಿಗೆ ಹೋಗಲು ಹಣ ವ್ಯಯಿಸುವ... ರಲ್ಲಿ ಹಾಗೂ ಈ ಸಂಬಂಧ ಅದೆಷ್ಟೇ ಕ... ಬಂದರೂ ಸಹಿಸಿಕೊಳ್ಳುವುದರಲ್ಲಿ ನಾ... ಹಿಂದೂ–ಮುಂದೂ ನೋಡಲಿಲ್ಲ. ಇವ... ದರೂ ಈ ವಿಷಯವನ್ನು ಸಂಪೂರ್ಣವ... ಅರ್ಥಮಾಡಿಕೊಳ್ಳುವುದು ಕಷ್ಟವೆಂ... ನನಗೆ ಅನ್ನಿಸುತ್ತಿದೆ.'

ಅಲ್‌ಬೆರೂನಿಗೆ ನೆರವು ನೀಡಿದ ಭಾ... ತೀಯ ಪಂಡಿತರಲ್ಲಿ ಶ್ರೀಪಾಲ್ ಮ... ಜೀವಶರ್ಮರ ಉಲ್ಲೇಖ ಯೋಗ್ಯವಾಗಿ... ಜೀವಶರ್ಮಾ ಎಂಬಾತ ಅಲ್‌ಬೆರೂ... ಕಾಶ್ಮೀರದಲ್ಲಿ ಆಚರಿಸಲಾಗುವ ಹಬ್ಬ... ಬಗೆಗೆ ಮಾಹಿತಿ ನೀಡಿದ್ದ.

ಸ್ವದೇಶದಿಂದ ನಿರ್ವಾಸಿತನಾಗಿ ಭಾರ... ಬಂದ ಅಲ್‌ಬೆರೂನಿ ಮಹಮೂದ್ ಗಜ... ಭಾರತದ ವಿಭಿನ್ನ ರಾಜ್ಯಗಳ ... ಆಕ್ರಮಣ ಮಾಡಿದ್ದನ್ನು ನೋ... ಹೀಗಾಗಿ ಸಹಜವಾಗಿಯೇ ಇವನಿಗೆ ಭಾ... ಯರ ಬಗೆಗೆ ಸಹಾನುಭೂತಿಯಿತ್ತು... ಮೊದಲೇ ಭಾರತೀಯ ಜ್ಯೋತಿಷ್ಯ ...

ದಿಂದ ಪ್ರಭಾವಿತನಾಗಿದ್ದ ಈತ ಭಾರತೀಯ ದರ್ಶನ ಶಾಸ್ತ್ರಕ್ಕೆ ಮಾರುಹೋಗಿದ್ದ. ಇವನ ಕಾಲದವರೆಗೆ ಭಾರತವನ್ನು ಕುರಿತಾದ ಯಾವ ಉತ್ತಮ ಪುಸ್ತಕವೂ ಅರಬ್ಬೀ ಭಾಷೆಯಲ್ಲಿರಲಿಲ್ಲ. ಇದ್ದ ಒಂದೆರಡು ಪುಸ್ತಕಗಳು ಸಂಕೀರ್ಣ ಸಾಂಪ್ರದಾಯಿಕ ದೃಷ್ಟಿಯಿಂದ ಬರೆದವಾಗಿದ್ದು, ಅವುಗಳ ಉದ್ದೇಶ ಇಸ್ಲಾಂನ ಪ್ರಶಂಸೆ ಹಾಗೂ ಹಿಂದೂ ಧರ್ಮದ ನಿಂದೆ ಮಾಡುವುದೇ ಆಗಿತ್ತು. ಆದ್ದರಿಂದಲೇ ಈತ ತನ್ನ ಗುರು ಅಬೂ ಸಹಲ್ ಅವರ ಆದೇಶದಂತೆ ಭಾರತದ ಧರ್ಮ, ದರ್ಶನ, ಸಂಸ್ಕೃತಿ, ಜ್ಞಾನ-ವಿಜ್ಞಾನ ಮತ್ತು ಆಚಾರ-ವಿಚಾರಗಳನ್ನು ನಿಷ್ಪಕ್ಷ ಭಾವದಿಂದ ಪರಿಶೀಲಿಸಿ ಒಂದು ಪುಸ್ತಕ ರಚಿಸಲು ತೀರ್ಮಾನಿಸಿದ. ಹದಿಮೂರು ವರ್ಷಗಳವರೆಗೆ ಈತ ಈ ಪುಸ್ತಕಕ್ಕಾಗಿ ವಿಷಯ ಸಂಗ್ರಹ ಮಾಡಿದ. ಕೊನೆಗೆ ಈತ ಮಹಮೂದ್ ಗಜನವಿಯ ಮರಣದ ಒಂದೂವರೆ ವರ್ಷಗಳು ಆದ ನಂತರ ೨೯ ಡಿಸೆಂಬರ್ ೧೦೩೧ರಂದು ತನ್ನ ಅಮರ ಕೃತಿ 'ಹಿಂದೂಗಳ ಎಲ್ಲ ಬಗೆಯ ಉದಾತ್ತ ಮತ್ತು ಹೇಯ ವಿಚಾರಗಳ ಯಥಾರ್ಥ ವರ್ಣನೆ'ಯನ್ನು ಪೂರ್ಣಗೊಳಿಸಿದ. ಈ ಕೃತಿ 'ತಾರೀಖುಲ್ ಹಿಂದ್' (ಭಾರತದ ಇತಿಹಾಸ) ಎಂಬ ಹೆಸರಿನಲ್ಲೂ ಪ್ರಸಿದ್ಧವಾಗಿದೆ.

'ತಾರೀಖುಲ್ ಹಿಂದ್' ಅಲ್‌ಬೆರೂನಿಯ ಸತ್ಯನಿಷ್ಠೆ, ವೈಜ್ಞಾನಿಕ ದೃಷ್ಟಿ, ಉದಾರತಾವಾದಿ ಮನೋಧರ್ಮ ಮತ್ತು ಸಹಿಷ್ಣುತಾ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ. ಗ್ರಂಥದ ಮೊದಲಲ್ಲಿಯೇ ಲೇಖಕ ಕುರಾನ್‌ನ "ಸತ್ಯ ಹೇಳು, ಈ ಸತ್ಯ ನಿನ್ನ ವಿರುದ್ಧವಾಗಿದ್ದರೂ ಸರಿಯೇ ಚಿಂತಿಸದೆ ಸತ್ಯವನ್ನೇ ಹೇಳು" ಎಂಬ ಮಾತನ್ನು ಉಲ್ಲೇಖಿಸಿರುವುದರ ಜತೆಗೆ ಏಸು ಏನ "ಸಾಮ್ರಾಟನ ಮುಂದೆ ಸತ್ಯ ಹೇಳುವಾಗ ಆತನು ಕೋಪ ಮಾಡಿಕೊಂಡಾನೆಂದು ಹೆದರದಿರು" ಎಂಬ ಮಾತುಗಳನ್ನು ಸಹ ಉಲ್ಲೇಖಿಸಿದ್ದಾನೆ. ಇಡೀ ಪುಸ್ತಕದ ತುಂಬ ತಥ್ಯಗಳ ಉಲ್ಲೇಖ, ವಿಶ್ಲೇಷಣೆ ಮತ್ತು ಪ್ರತಿಪಾದನೆಯನ್ನು ಸತ್ಯನಿಷ್ಠೆ ಮತ್ತು ವೈಜ್ಞಾನಿಕ ಮನೋವೃತ್ತಿಯಿಂದ ಮಾಡಲಾಗಿದೆ.

ಇಸ್ಲಾಮಿನ ದೃಷ್ಟಿಯಲ್ಲಿ ಹಿಂದೂಗಳು ಕಾಫಿರ್‌ಗಳು ಮತ್ತು ಮೂರ್ತಿ ಪೂಜಕರು. ಅವರ ಧರ್ಮದ ವಿವರಣೆಯನ್ನು ಕೊಡುವುದೆಂದರೆ ಮುಸ್ಲಿಂ ಲೇಖಕನಿಗೆ ಪ್ರಾಣ ಘಾತುಕವಾದಂಥ ವಿಚಾರವಾಗಿದ್ದಿತು. ಆದರೆ ಅಲ್‌ಬೆರೂನಿಯು ಹಿಂದೂಗಳ ವಿಚಾರಗಳನ್ನು, ಆಸ್ಥೆಗಳನ್ನು ಮತ್ತು ಮುಸಲ್ಮಾನರ ದೃಷ್ಟಿಯಲ್ಲಿ ಅತ್ಯಂತ ಹೀನಾಯವಾದ ಮೂರ್ತಿಪೂಜೆಯ ವ್ಯವಸ್ಥೆಯನ್ನು ವಿವರವಾಗಿ ಚರ್ಚಿಸಿದ್ದಾನೆ. ಅಲ್‌ಬೆರೂನಿಯ ಪ್ರಕಾರ ಅತ್ಯಂತ ಶ್ರದ್ಧಾಳುಗಳಾದ ವ್ಯಕ್ತಿಗಳ, ಅವತಾರಗಳ, ಋಷಿ-ಮುನಿಗಳ ಅನುಪಸ್ಥಿತಿಯಲ್ಲಿ ಅಥವಾ ಅವರ ದೇಹಾವಸಾನದ ನಂತರ ಅವರ ಸ್ಮೃತಿಗಳನ್ನು ಶಾಶ್ವತವಾಗಿಡುವ ಭಾವನೆಯೇ ಮೂರ್ತಿಪೂಜೆಯ ಮೂಲವಾಗಿದೆ. ಇದು ಅನಕ್ಷರತೆಯ ಫಲವಾಗಿದೆ. ಎಲ್ಲ ಧರ್ಮಗಳಲ್ಲೂ ಇದರ ಪ್ರಸಾರದ ಉದಾಹರಣೆಗಳನ್ನು ಕೊಡುತ್ತ ಈತ ಮುಸಲ್ಮಾನರಲ್ಲೂ ಈ ದೋಷವಿರುವುದನ್ನು ಧೈರ್ಯವಾಗಿ ಒಪ್ಪುತ್ತಾನೆ—ನೀವು ಮಹಮೂದ್

ಸಾಹೇಬರ, ಮೆಕ್ಕಾ ಮತ್ತು ಕಾಬಾದ ಚಿತ್ರ ತಯಾರಿಸಿ ಯಾವನೇ ಒಬ್ಬ ಅಶಿಕ್ಷಿತ ಸ್ತ್ರೀ ಅಥವಾ ಪುರುಷನಿಗೆ ತೋರಿಸಿದ್ದೇ ಆದರೆ ಆತ/ಆಕೆ ಅದನ್ನು ನೋಡಿ ಎಷ್ಟು ಸಂತೋಷಗೊಳ್ಳುತ್ತಾರೆಂದರೆ ಅದಕ್ಕೆ ಮುತ್ತಿಡಲು ತೊಡಗುತ್ತಾರೆ. ಗೋಮಾಂಸ ಸೇವನೆಯನ್ನು ನಿಷೇಧಿಸಿರುವ ಹಿಂದೂಗಳ ಸಮರ್ಥನೆಯನ್ನು ಈತ ಆರ್ಥಿಕ ಹಿನ್ನೆಲೆಯಲ್ಲಿ ಮಾಡಿದ್ದಾನೆ.

ಅಲ್ ಬೆರೂನಿ ಇತರೆ ವಿದ್ವಾಂಸರಿಂದಲೂ ಈ ತರಹದ ವೈಜ್ಞಾನಿಕ ಸತ್ಯನಿಷ್ಠೆಯನ್ನು ನಿರೀಕ್ಷಿಸುತ್ತಾನೆ. ಈ ದೃಷ್ಟಿಯಿಂದ ಈತ ಭಾರತೀಯ ಜ್ಯೋತಿಷಿಯಾದ ಬ್ರಹ್ಮಗುಪ್ತನನ್ನು ವಿಮರ್ಶಿಸಿರುವುದು ಇಲ್ಲಿ ಉಲ್ಲೇಖನೀಯವಾದುದಾಗಿದೆ. ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದ ವಿಷಯದಲ್ಲಿ ಪ್ರಾಚೀನ ಭಾರತೀಯ ಜ್ಯೋತಿಷಿಗಳಾದ ವರಾಹಮಿಹಿರ, ಆರ್ಯಭಟ ಮತ್ತು ವಿಷ್ಣುಚಂದ್ರರು ಹೇಳುವಂತೆ ಗ್ರಹಣಗಳು ಚಂದ್ರ ಮತ್ತು ಭೂಮಿಯ ನೆರಳಿನಿಂದಾಗಿ ಆಗುತ್ತವೆ. ಆದರೆ ಪೌರಾಣಿಕ ಮಾನ್ಯತೆಯಂತೆ ಸೂರ್ಯ ಮತ್ತು ಚಂದ್ರನನ್ನು ರಾಹು ಗ್ರಹಿಸುವುದೇ ಗ್ರಹಣಕ್ಕೆ ಕಾರಣವಾಗಿದೆ.

ಜ್ಯೋತಿಷಿ ಬ್ರಹ್ಮಗುಪ್ತ ಮೊದಲ ಕಾರಣವನ್ನೇ ಸರಿ ಎಂದು ನಂಬಿದ್ದ. ಏಕೆಂದರೆ ಆತನಲ್ಲಿ ಪೌರಾಣಿಕ ಮಾನ್ಯತೆಯನ್ನು ವಿರೋಧಿಸುವಷ್ಟು ನೈತಿಕ ಧೈರ್ಯವಿರಲಿಲ್ಲ. ಅಲ್ಲದೆ ಆತ ತನ್ನ 'ಬ್ರಹ್ಮಸಿದ್ಧಾಂತ'ದ ಮೊದಲ ಅಧ್ಯಾಯದಲ್ಲಿ ರಾಹುವಿನ ಶಿರಸ್ಸನ್ನು ಗ್ರಹಣದ ಮೂಲ ಕಾರಣ ಎಂದು ಒಪ್ಪಿ, ಅದರ ಸಮರ್ಥನೆಗೆ ವೇದ, ಮನುಸ್ಮೃತಿ ಮತ್ತು ಗರ್ಗಸಂಹಿತೆಯಿಂದ ಪ್ರಮಾಣವನ್ನು ನೀಡಿದ್ದಾನೆ. ಅಲ್ ಬೆರೂನಿ ಬ್ರಹ್ಮಗುಪ್ತನ ಈ ಬೌದ್ಧಿಕ ಅಪ್ರಮಾಣಿಕತೆಯನ್ನು ಕಟುವಾಗಿ ಟೀಕಿಸಿ, ತನ್ನ ಅಂತರಾತ್ಮದ ವಿರುದ್ಧವಾಗಿ ಈ ಪಾಪವನ್ನು ಆತ ಮಾಡಿರುವುದಾಗಿ ಹೇಳುತ್ತಾನೆ.

ಭಾರತೀಯ ನಾಗರೀಕತೆಯ ವರ್ಣನೆಯನ್ನು ಅಲ್ ಬೆರೂನಿ ರೇಖಾಗಣಿತದ ಪ್ರಮೇಯಗಳ ಆಧಾರದ ಮೇಲೆ ವೈಜ್ಞಾನಿಕ ಪದ್ಧತಿಯಿಂದ ಮಾಡಿದ್ದಾನೆ. ಪ್ರತಿ ಅಧ್ಯಾಯದ ಆರಂಭದಲ್ಲಿ ಪ್ರತಿಪಾದ್ಯ ವಿಷಯದ ಸಂಕ್ಷಿಪ್ತ ಪರಿಚಯ ನೀಡಿದ ನಂತರ, ಅದಕ್ಕೆ ಸಂಬಂಧಿಸಿದಂತೆ ಗೀತಾ, ಸಾಂಖ್ಯದರ್ಶನ, ಬೃಹತ್ಸಂಹಿತಾ ಮುಂತಾದ ಭಾರತೀಯ ಗ್ರಂಥಗಳಿಂದ ವಿವರವಾಗಿ ಉದ್ಧರಣೆಗಳನ್ನು ನೀಡುತ್ತಾನೆ ಮತ್ತು ಕೊನೆಯಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ನಿರ್ಣಯಗಳನ್ನು ನೀಡುತ್ತಾನೆ. ವಿಷಯ ಪ್ರತಿಪಾದನೆಯಲ್ಲಿ ಈತನ ಅಪೂರ್ವ ವಿದ್ವತ್ತಷ್ಟೇ ಅಲ್ಲ, ವಿನಮ್ರತೆಯೂ ನಮ್ಮ ಗಮನ ಸೆಳೆಯುತ್ತದೆ. ತನಗೆ ಗೊತ್ತಿರ ವಿಷಯವನ್ನು ಕುರಿತಂತೆ ತನ್ನ ಅನಭಿಜ್ಞ ಯನ್ನು ಒಪ್ಪಿಕೊಂಡು ಓದುಗರಲ್ಲಿ ಕ್ಷಮೆ ಯಾಚಿಸುತ್ತಾನೆ. ತನ್ನ ರ್ಚನೆಯ ವಿ ದಲ್ಲೂ ಈ ವಿಷಯವನ್ನು ಕುರಿತ ಸಂಶೋಧನೆಯನ್ನು ಮುಂದುವರಿಸು ನೆಂದೂ, ಸಂಶೋಧನೆಯಿಂದ ದೊರೆತ ಫ ವನ್ನು ಓದುಗರಿಗಾಗಿ ಪ್ರಕಟಿಸುವೆನೆಂದ ಹೇಳುತ್ತಾನೆ. ಯಾವುದೇ ವಿಷಯದ ಬ ಕೊಂಚ ತಿಳಿದಿದ್ದರೂ ಅದನ್ನು ಓದು ಮುಂದಿಡಲು ಈತ ಹಿಂದು-ಮುಂ ನೋಡುತ್ತಿರಲಿಲ್ಲ. ಸಂಸ್ಕೃತ ಭಾಷೆ ಬಗೆಗೆ ಇವನ ಜ್ಞಾನ ಸೀಮಿತವಾದು

ತ್ತು. ಅದನ್ನೇ ಸಂಕ್ಷೇಪವಾಗಿ ಓದುಗರ ಮುಂದಿಟ್ಟ.

ಭಾರತೀಯ ಸಿದ್ಧಾಂತಗಳನ್ನು ತೌಲನಿಕವಾಗಿ ವಿಮರ್ಶಿಸಿದ್ದು ಅಲ್‌ಬಿರೂನಿಯ ಮಹತ್ವದ ವಿಶೇಷತೆಯಾಗಿದೆ. ಇಂಗ್ಲಿಷ್ ಕವಿ-ಲೇಖಕ ಕಿಪ್ಲಿಂಗ್ 'ಕೇವಲ ಇಂಗ್ಲೆಂಡ್ ಅನ್ನು ನೋಡಿರುವವರು, ಇಂಗ್ಲೆಂಡ್ ಅನ್ನು ಖಂಡಿತ ತಿಳಿದಿರುವುದಿಲ್ಲ. ಬೇರೆ ದೇಶಗಳ ಇತಿಹಾಸಗಳೊಂದಿಗೆ ಈ ದೇಶವನ್ನು ತೌಲನಿಕವಾಗಿ ನೋಡಿದಾಗ ಮಾತ್ರ ಇಂಗ್ಲೆಂಡ್‌ನ ಯಥಾರ್ಥ ಜ್ಞಾನದ ಅರಿವು ನಮಗಾಗುತ್ತದೆ' ಎಂದು ಹೇಳುತ್ತಿದ್ದ. ಭಾರತದ ವಿಷಯದಲ್ಲೂ ಅಲ್‌ಬಿರೂನಿ ಹೀಗೆಯೇ ಭಾವಿಸಿದ್ದ. ಹೀಗಾಗಿ ಈತ ಭಾರತೀಯ ಸಿದ್ಧಾಂತಗಳ ವರ್ಣನೆಯ ಪ್ರಸಂಗ ಬಂದಾಗ, ಅವುಗಳನ್ನು ಸ್ಪಷ್ಟಪಡಿಸಲು ಗ್ರೀಕರ, ಯಹೂದಿಯರ, ಕ್ರೈಸ್ತರ, ಅಗ್ನಿ ಪೂಜಕ ಜರುತ್ಯುಷ್ಟರ ಹಾಗೂ ಸೂಫಿಗಳ ವಿಚಾರಣೆಗಳೊಂದಿಗೆ ತೌಲನಿಕವಾಗಿ ವಿಮರ್ಶಿಸುತ್ತಿದ್ದ. ಉದಾಹರಣೆಗೆ ಮೂರ್ತಿಪೂಜೆಗೆ ಸಂಬಂಧಿಸಿದಂತೆ ಹೇಳುವಾಗ ಹಿಂದೂಗಳ ಮೂರ್ತಿಪೂಜೆಗೆ ಸಂಬಂಧಿಸಿದಂತಷ್ಟೇ ಹೇಳದೆ ಇಬರಾನಿಯರ, ಕ್ರೈಸ್ತರ ಮತ್ತು ಯೂನಾನಿಗಳಲ್ಲಿ ಪ್ರಚಲಿತವಿರುವ ಮೂರ್ತಿಪೂಜೆಯನ್ನು ಕುರಿತಂತೆ ವಿವರಗಳನ್ನು ನೀಡುತ್ತಾನೆ. ಇದೇ ರೀತಿ ಆತ್ಮ, ಮೋಕ್ಷ ಹಾಗೂ ದೇವತೆಗಳ ವಿಷಯದಲ್ಲಿಯೂ ಅವನು ಭಾರತೀಯರ ನಂಬಿಕೆಗಳ ಜೊತೆ ಜಾಲೀನೂಸ್, ಪ್ಲೇಟೋ ಮತ್ತು ಮಾನಿ ಧರ್ಮಾನುಯಾಯಿಗಳ ವಿಚಾರಗಳನ್ನು ಮಂಡಿಸುತ್ತಿದ್ದ.

ಅಲ್‌ಬಿರೂನಿ 'ತಾರೀಖಲ್ ಹಿಂದ್' ಮಧ್ಯಕಾಲೀನ ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯದ ಸಂಕ್ಷಿಪ್ತ ವಿಶ್ವಕೋಶ. ಇದರ ೮೦ ಅಧ್ಯಾಯಗಳಲ್ಲಿ ಹಿಂದೂಗಳಿಗೆ ಸಂಬಂಧಿಸಿದ ಕೆಳಕಂಡ ಪ್ರಮುಖ ವಿಷಯಗಳು ಒಳಗೊಂಡಿವೆ.

ದೇವರ ಬಗೆಗಿನ ನಂಬಿಕೆಗಳು, ಆತ್ಮ ಮತ್ತು ಕರ್ಮದ ಸ್ವರೂಪ, ಪುನರ್ಜನ್ಮ, ಸ್ವರ್ಗ-ನರಕ, ಮೋಕ್ಷ. ಸೃಷ್ಟಿಗೆ ಸಂಬಂಧಿಸಿದ ವಿಭಿನ್ನ ಜಾತಿಗಳ ವರ್ಣನೆ, ಮೂರ್ತಿಪೂಜೆಯ ಆರಂಭ, ವಿಭಿನ್ನ ಬಗೆಯ ಮೂರ್ತಿಗಳ ವರ್ಣನೆ, ವೇದ, ಪುರಾಣ, ವ್ಯಾಕರಣ, ಛಂದಸ್ಸು, ಫಲಿತ ಜ್ಯೋತಿಷ್ಯ, ಗಣಿತಶಾಸ್ತ್ರ, ಭಾರತೀಯ ಭೂಗೋಳ, ಗ್ರಹ-ನಕ್ಷತ್ರಗಳು, ರಾಶಿಚಕ್ರ, ಬ್ರಹ್ಮಾಂಡ. ಏಳು ದ್ವೀಪಗಳ ಸ್ವರೂಪ, ಭಾರತದ ನದಿಗಳು, ಜ್ಯೋತಿಷ್ಯಕ್ಕೆ ಸಂಬಂಧಿಸಿದ ವಿಷಯಗಳು, ಸೂರ್ಯ-ಚಂದ್ರ ಗ್ರಹಣಗಳು, ಮುಹೂರ್ತ, ಯಜ್ಞ, ದಾನ, ವಿವಾಹ, ದಂಡ, ಪ್ರಾಯಶ್ಚಿತ್ತ, ಉಪವಾಸ, ಹಬ್ಬಗಳು, ಕರಣ, ಚತುರ್ಯುಗ. ಗ್ರಂಥದ ಕೊನೆಯಲ್ಲಿ ಮೂಲ ಗ್ರಂಥಗಳ ಆಧಾರದ ಮೇಲೆ ಭಾರತೀಯ ಫಲಿತ ಜ್ಯೋತಿಷ್ಯದ ಮೇಲೂ ಬೆಳಕು ಚೆಲ್ಲಲಾಗಿದೆ.

ಮುಸಲ್ಮಾನರಿಗೆ ಹಿಂದೂ ಸಂಸ್ಕೃತಿಯ ಪರಿಚಯ ಮಾಡಿಕೊಡಲು ಈ ಗ್ರಂಥ ಬರೆದು, ಈ ಮೂಲಕ ಸಂಸ್ಕೃತ ಗ್ರಂಥಗಳನ್ನು ಅರಬ್ಬೀ ಭಾಷೆಯಲ್ಲಿ ಅವರಿಗೆ ಪರಿಚಯಿಸಿದ. ಅಂತೆಯೇ ಯೂನಾನಿಗಳ ಮತ್ತು ಅರಬ್ಬರ ಉತ್ಕೃಷ್ಟ ಶಾಸ್ತ್ರೀಯ ವಾಙ್ಮಯವನ್ನು ಹಿಂದೂಗಳಿಗೆ ಪರಿಚಯಿಸಲು ಕೆಳಕಂಡ ಅರಬ್ಬೀ ಗ್ರಂಥಗಳನ್ನು ಸಂಸ್ಕೃತಕ್ಕೆ ಅನುವಾದಿಸಿದ ಹಾಗೂ ಮೌಲಿಕವಾಗಿ ಬರೆದ.

೧. ಯೂಕ್ಲಿಡ್‌ನ ರೇಖಾಗಣಿತಕ್ಕೆ ಸಂಬಂಧಿಸಿದ ಪುಸ್ತಕ.

೨. ಸಿಕಂದರಿಯಾದ ಯೂನಾನಿ ಜ್ಯೋತಿಷಿ ಟಾಲಮಿ ಅಥವಾ ಬತ್‌ಲೀಮೂಸ್(೧೨೬-೧೫೧ ಇ)ನ ಜ್ಯೋತಿಷ್ಯ ಗ್ರಂಥ 'ಅಲಮ್‌ಜಸ್ತ್'.

೩. ನಕ್ಷತ್ರಗಳ ನೆಲೆಯನ್ನು ಅಳೆಯುವ (ಅಸ್ತ್ರರ್‌ಲಾಬ್' ಎಂಬ ಯಂತ್ರ ನಿರ್ಮಾಣ ವಿಧಿ-ವಿಧಾನದ ವರ್ಣನೆ.

ಈ ಸಂಸ್ಕೃತ ಪುಸ್ತಕಗಳನ್ನು ಅವನು ಭಾರತೀಯ ಪರಂಪರೆಯಂತೆ ಕಾವ್ಯರೂಪದಲ್ಲಿ ಬರೆದ. ಇದಕ್ಕಾಗಿ ಅವನು ಶ್ಲೋಕ ಬರೆಯುವುದನ್ನು ಅಭ್ಯಾಸ ಮಾಡಿದ. ಸಂಸ್ಕೃತ ಛಂದಸ್ಸುಗಳನ್ನು ವರ್ಣಿಸುತ್ತ 'ತಾರೀಖ ಲ್ ಹಿಂದ್' ನಲ್ಲಿ ಹೀಗೆ ಬರೆದಿದ್ದಾನೆ. 'ಹಿಂದೂಗಳ ಪುಸ್ತಕಗಳು ಸಾಮಾನ್ಯವಾಗಿ ಶ್ಲೋಕಗಳಲ್ಲಿವೆ. ನಾನು ಸಹ ಈಗ ಶ್ಲೋಕಗಳನ್ನು ರಚಿಸುವುದನ್ನು ಅಭ್ಯಾಸ ಮಾಡುತ್ತಿದ್ದೇನೆ. ಏಕೆಂದರೆ ನಾನು ಹಿಂದೂಗಳಿಗೆ ಯೂಕ್ಲಿಡ್ ಮತ್ತು ಅಲ್ ಮಜಸ್ತ್‌ನ ಭಾಷಾಂತರ ಮಾಡುವುದರಲ್ಲಿ ಹಾಗೂ 'ಅಸ್ತ್ರರ್ ಲಾಬ್' ನಿರ್ಮಾಣದ ಬಗೆಗೆ ಒಂದು ಪ್ರಬಂಧ ಬರೆಯುವುದರಲ್ಲಿ ನಿರತನಾಗಿದ್ದೇನೆ.' ದೌರ್ಭಾಗ್ಯದಿಂದಾಗಿ ಈ ಅನುವಾದ ಇಂದು ಲಭ್ಯವಿಲ್ಲ.

ಮಹಮೂದ್ ಗಜನವಿಯ ಆಡಳಿತ ಕಾಲದಲ್ಲಿ ಅಲ್‌ಬೆರೂನಿಗೆ ಯಾವುದೇ ರಾಜಕೀಯ ಸನ್ಮಾನ ದೊರೆಯಲಿಲ್ಲ ಅನ್ನಿಸುತ್ತದೆ. ಈತ ಹದಿಮೂರು ವರ್ಷಗಳಷ್ಟು ದೀರ್ಘಾವಧಿ ಕಾಲವನ್ನು ಭಾರತದಲ್ಲಿ ನಿರ್ವಾಸಿತರಾದ ವ್ಯಕ್ತಿಯಂತೆ ಇದ್ದ. ಆದ ಮಹಮೂದ್‌ನ ಮರಣಾನಂತರ ಅವ ಉತ್ತರಾಧಿಕಾರಿ ಮಸ್‌ಊದ್‌ನ ಕಾಲದ ರಾಜಕೀಯ ಪರಿಸ್ಥಿತಿಗಳು ಬದಲಾದುವು ಅಲ್‌ಬೆರೂನಿಗೆ ಒಳ್ಳೆಯ ದಿನಗಳ ಬಂದುವು. ಮಸ್‌ಊದ್ ಹುಡುಗನಾಗಿದ್ದ ಮಹಮೂದ್ ತನ್ನ ಸೈನಿಕ ಪ್ರತಿಭೆಯಿಂ ಮೂವತ್ತುಮೂರು ವರ್ಷಗಳಲ್ಲಿ ವಿಶಾ ಸಾಮ್ರಾಜ್ಯವನ್ನು ನಿರ್ಮಿಸಿದ್ದ. ಅದನ್ ಇವನು ಹತ್ತೇ ವರುಷಗಳಲ್ಲಿ ಧ್ವಂ ಮಾಡಿದ. ಆದರೆ ಅವನು ಉದಾರ ಸ್ವಭಾ ದವನಾಗಿದ್ದ. ವಿದ್ವಾಂಸರಿಗೆ ನೆಲೆ ಕೊಡು ತ್ತಿದ್ದ. ಅಲ್‌ಬೆರೂನಿಯ ಬಗೆಗೆ ಈತನಿ ವಿಶೇಷವಾದ ಗೌರವವಿತ್ತು. ಅಲ್‌ಬೆರೂ ಜ್ಯೋತಿಷ್ಯಕ್ಕೆ ಸಂಬಂಧಿಸಿದ ತನ್ನ ಒಂದ ಪುಸ್ತಕಕ್ಕೆ ಆತನ ಹೆಸರನ್ನೇ ಶೀರ್ಷಿ ಯನ್ನಾಗಿ ನೀಡಿದ್ದಾನೆ—'ಕಾನೂನ್-ಅಲ್ ಮಸ್‌ಊದಿ' ಎಂದು. ಈ ಪುಸ್ತಕವನ್ ಈತ ಸುಲ್ತಾನ್ ಮಸ್‌ಊದಿಯವರ ಸಮರ್ಪಿಸಿದ್ದು, ಮುನ್ನುಡಿಯಲ್ಲಿ ಸುಲ್ ನನ್ನು ಕೊಂಡಾಡಿದ್ದಾನೆ.

ಅಲ್‌ಬೆರೂನಿಯ ಎಲ್ಲ ಸಮಯ ಜ್ಞಾ ಸಂಪಾದನೆಯಲ್ಲಿ ಹಾಗೂ ಗ್ರಂಥರಚ ಯಲ್ಲಿ ಕಳೆದುಹೋಗುತ್ತಿತ್ತು. ಒ ಮುಸ್ಲಿಂ ಲೇಖಕ ಶಹರ್‌ಜೂರಿಯ ಮಾತುಗಳಲ್ಲಿ—'ಅವರು ಸದಾ ಜ್ಞಾನ ಅನ್ವೇಷಣೆಯಲ್ಲಿ ಮಗ್ನರಾಗಿರುತ್ತಿದ್ದ ಪುಸ್ತಕ ಬರೆಯುವುದರಲ್ಲಿ ತಲ್ಲೀನರಾಗಿ ತ್ತಿದ್ದರು. ಲೇಖನಿ ಅವರ ಕೈಯಿಂದ ಎಂ ಬೇರೆಯಾಗಿರುತ್ತಿರಲಿಲ್ಲ. ಅವರ ಕಣ್ಣು ಗ ಸದಾ ಹೊಸತನ್ನು ಹುಡುಕುತ್ತಿರು ದ್ದುವು. ಮನಸ್ಸು ಚಿಂತನೆಯಿಂದ ಎಂ

ಮುಕ್ತವಾಗಿರುತ್ತಿರಲಿಲ್ಲ. ವರ್ಷದಲ್ಲಿ ಎರಡು ದಿನ—ಹೊಸ ವರ್ಷ ನೌರೋಜ್ ದಿನ ಮತ್ತು ಮಿಹರ್‌ಜಾನ್ ದಿನ—ಮಾತ್ರ ಅವರು ರಜೆ ಪಡೆಯುತ್ತಿದ್ದರು. ಈ ದಿನಗಳಂದು ಅವರು ತಮ್ಮ ತಿಂಡಿ-ಊಟದ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುತ್ತಿದ್ದರು.'

ಅಲ್‌ಬೆರೂನಿ ತನ್ನ ಕಾಲದ ಅದ್ಭುತ ಲೇಖಕರಾಗಿದ್ದ. ಈತ ೧೪೬ ಪುಸ್ತಕಗಳನ್ನು ಬರೆದಿದ್ದಾನೆ. ಅವುಗಳಲ್ಲಿ ೨೨ ಮಾತ್ರ ಈಗ ಸಿಕ್ಕಿವೆ. ಇವನ ಸಮಕಾಲೀನ ಅರಬ್ಬೀ ಇತಿಹಾಸ—ಲೇಖಕ ಬೆಹಕೀ ಬರೆದಿರುವಂತೆ—'ಅವರು ತಮ್ಮ ಪುಸ್ತಕಗಳನ್ನು ಸ್ವತಃ ತಮ್ಮ ಕೈಯಿಂದ ಬರೆಯುವುದನ್ನು ನಾನು ನೋಡಿದ್ದೇನೆ. ಒಂದು ಒಂಟೆ ಹೊರುವಷ್ಟು ಭಾರವಾಗಿದ್ದುವು ಅವರ ಪುಸ್ತಕಗಳು. ಈ ಪ್ರಶಂಸನೀಯ ಕಾರ್ಯಕ್ಕಾಗಿ ಭಗವಂತ ಅವರಿಗೆ ಸಾಮರ್ಥ್ಯವನ್ನು ಕೊಟ್ಟಿದ್ದಾನೆ.'

ಅಲ್‌ಬೆರೂನಿ ಎಷ್ಟೋ ವೈಜ್ಞಾನಿಕ ಸಂಶೋಧನಗಳನ್ನು ನಡೆಸಿದ್ದ. ಹದಿನೆಂಟು ಮಣಿಗಳ ಮತ್ತು ಬಹುಮೂಲ್ಯವಾದ ಧಾತುಗಳ ಭಾರವನ್ನು ಲೆಕ್ಕ ಹಾಕುವ ವಿಧಾನವನ್ನು ಕಂಡುಹಿಡಿದ ಹೆಗ್ಗಳಿಕೆ ಈತನಿಗೆ ಸಲ್ಲಬೇಕು. ಭೂಗೋಳದ ಕ್ಷೇತ್ರದಲ್ಲಿ, ಸಿಂಧೂ ಕಣಿವೆಯಲ್ಲಿ ಹಿಂದಿನ ಕಾಲದಲ್ಲಿಯೂ ಸಮುದ್ರವಿತ್ತೆಂಬುದನ್ನು ಆವಿಷ್ಕರಿಸಿದ್ದು ಇವನ ಮಹತ್ವದ ಸಂಶೋಧನೆ. ಈತ ಆರ್ಟೀಜಿಯನ್ ಬಾವಿಗಳಿಂದ ನೀರು ಬರುವುದನ್ನು ಕುರಿತಂತೆ ಕಾರಣಗಳನ್ನು ಪತ್ತೆ ಹಚ್ಚಿದ.

ನಿಸ್ಸಂಶಯವಾಗಿ ಅಲ್‌ಬೆರೂನಿ ತನ್ನ ಕಾಲದ ಸರ್ವತೋಮುಖಿ ಪ್ರತಿಭಾ ಸಂಪನ್ನನಾದ ಮಹಾನ್ ವಿದ್ವಾಂಸನಾಗಿದ್ದ. ಯೂನಾನ್‌ನಿಂದ ಹಿಡಿದು ಭಾರತದವರೆಗಿನ ವಿಚಾರಧಾರೆಗಳ ಅದ್ಭುತ ಸಂಗಮ ಮತ್ತು ಸಮನ್ವಯ ಇವನಲ್ಲಿತ್ತು. ವೈಜ್ಞಾನಿಕ ಅನ್ವೇಷಣೆ ಮತ್ತು ವಿಮರ್ಶಾತ್ಮಕ ಮೌಲ್ಯಮಾಪನ ಮಾಡುವ 'ಆಧುನಿಕ' ಪ್ರಜ್ಞೆ ಇವನಲ್ಲಿ ಸಂಪೂರ್ಣವಾಗಿತ್ತು. ಹೀಗಾಗಿಯೇ ಸುಪ್ರಸಿದ್ಧ ವಿಜ್ಞಾನ-ಇತಿಹಾಸಕಾರ ಜಾರ್ಜ್ ಸಾರ್ಟನ್‌ರು ಹನ್ನೊಂದನೆಯ ಶತಮಾನದ ಪೂರ್ವಾರ್ಧವನ್ನು 'ಅಲ್‌ಬೆರೂನಿ ಯುಗ' ಎಂದು ಹೆಸರಿಸಿದ್ದಾರೆ ಹಾಗೂ 'ಆತ ಇಸ್ಲಾಂನ ಶ್ರೇಷ್ಠ ಮಹಾನ್ ವಿಜ್ಞಾನಿ. ಆತನು ಸಾಧನೆಗೈದಿರು ಎಲ್ಲದರ ಬಗೆಗೆ ವಿಚಾರ-ವಿಮರ್ಶೆ ಮಾಡಿದ್ದೇ ಆದರೆ ಆತನನ್ನು ಇಲ್ಲಿಯವರೆಗೆ ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಕಾಲಗಳಲ್ಲಿ ಆಗಿಹೋಗಿರುವ ಮಹಾನ್ ವಿಜ್ಞಾನಿಗಳಲ್ಲಿ ಒಬ್ಬರೆಂದು ಪರಿಗಣಿಸಬಹುದು' ಎಂದು ಬರೆದಿದ್ದಾನೆ.

ಮನೋಬಲದಿಂದ ಕಾಯಿಲೆಯನ್ನು ದೂರಮಾಡಿ

ಟಿ. ವಿ. ಅನ್ನಪೂರ್ಣಮ್ಮ
ಎಂ.-೫, ಶ್ರೀಕರ, ಕುವೆಂಪುನಗರ
ಮೈಸೂರು-೫೭೦೦ ೨೩.

ಶರೀರ-ಮನಸ್ಸು ಅವಿನಾಸಂಬಂಧ ಇಂದಿನ ವಿಜ್ಞಾನ-ತಂತ್ರ ವಿದ್ಯಾ ಯುಗದಲ್ಲಿಯೂ 'ನಿಗೂಢ ಅಜ್ಞಾನ'ದಲ್ಲಿ ಮರೆಯಾಗಿದ್ದು ಈ ಕಾರಣದಿಂದ ವಾಮತಂತ್ರಿಗಳ ಇಲ್ಲವೇ ಪಲಾಯನ ವಾದಿಗಳ ಹುಲುಸು ಆಡುಂಬೊಲವಾಗಿರುವುದೊಂದು ವಿಪರ್ಯಾಸ. ಅಜ್ಞಾತವಾಗಿರುವುದನ್ನು ವೈಜ್ಞಾನಿಕ ವಿಧಾನದಿಂದ ಜ್ಞಾತವಾಗಿಸಿ ಶರೀರ-ಮನಸ್ಸು ಮಧುರ ಬಾಂಧವ್ಯ ಅರಿಯುವುದೇ ಸುಖೀ ಜೀವನದ ನಿಜ ರಹಸ್ಯ—ಇಲ್ಲಿ ರಹಸ್ಯವಾದುದು ಏನೂ ಇಲ್ಲವೆಂಬುದೇ ಚೋದ್ಯದ ಸಂಗತಿ.

ಸೂರ್ಯನ ಆ ಹಿತವಾದ ತಾಪವನ್ನು ಕ್ಷಣಕಾಲ ಅನುಭವಿಸಿ ನೋಡಿ. ನಿಮ್ಮ ಮುದ್ದು ಕಂದ ನಿಮ್ಮ ತೊಡೆಯನ್ನೇರಲು ತನ್ನ ಪುಟ್ಟ ಕೈಗಳನ್ನು ಚಾಚುತ್ತಾನೆ. ಆ ಪುಟ್ಟ ಕಂದನ ನಿಷ್ಕಪಟ ಮುಗುಳ್ನಗೆಯನ್ನು ನೋಡಿ ನಿಮ್ಮ ಕಣ್ಣುಗಳಿಂದ ಆನಂದಬಾಷ್ಪ ಉದುರುತ್ತದೆ. ನಿಜವಾಗಿಯೂ ಇವು ಸಂತೋಷದ ಕ್ಷಣಗಳು. ಆನಂದದ ಆ ಕ್ಷಣಗಳು ಉಂಟುಮಾಡುವ ಅನ್ವಯಾತ್ಮಕ ಮನೋಭಾವ ನಿಮ್ಮ ಆರೋಗ್ಯದ ಮೇಲೆ ಸೂಕ್ಷ್ಮ ಆದರೆ ಸ್ಪಷ್ಟ ಪ್ರಭಾವವನ್ನು ಬೀರುವುದು.

'ಸೈಕೋನ್ಯೂರೋ ಇಮ್ಯುನಾಲಜಿ' (ಮನೋನರರೋಗ ನಿರೋಧಕ ವಿಜ್ಞಾನ) ಎಂಬುದು ಸಂಶೋಧನೆಯ ಹೊಸಕ್ಷೇತ್ರ.

ಇದು ಮಸ್ತಿಷ್ಕ ಮತ್ತು ಶರೀರದ ರೋ
ನಿರೋಧಕ ವ್ಯವಸ್ಥೆಯ ಮಧ್ಯೆ ಒಂ
ಸೂತ್ರ ಇರುವುದನ್ನು ಸ್ಪಷ್ಟಪಡಿಸುತ್ತ
ಮಿಚಿಗನ್ನಿನ ಟೆಂಕಪ್ಸಿ ನಗರದ ೨,೭
ಮಂದಿಯ ಬಗ್ಗೆ ಸಮಾಜ ವಿಜ್ಞಾ
ಜೇಮ್ಸ್ ಹೌಸ್ ಹತ್ತು ವರ್ಷ
ಅಧ್ಯಯನ ಮಾಡಿದ. ಇದರ ಒಂ
ದೀರ್ಘಾವಧಿ ಸಮೀಕ್ಷೆ ನಡೆಸಿದ
ಆತನಿಗೆ ಈ ವಿಷಯ ಕಂಡು ಬಂತ
ವಿವಾಹಿತರು, ಸಾಮಾಜಿಕ ಜೀವನ
ಅತ್ಯಲ್ಪವಾಗಿ ತಮ್ಮನ್ನು ತೊಡ
ಕೊಂಡವರು, ವಿವಾಹ ವಿಚ್ಛೇದನಗೊ
ವರು ಅಥವಾ ಏಕಾಂಗಿಯಾಗಿರುವವರಿಗ
ಸಾಮಾಜಿಕ ಜೀವನದಲ್ಲಿ ಹೆಚ್ಚು ಕಾ
ನಿರತರಾಗಿರುವವರು ದೀರ್ಘಕಾಲ ಬ
ದ್ದಾರೆ.

ಮೂಲ: ೧೯೯೦ರ ಜನವರಿ ತಿಂಗಳಿನ 'ಸರ್ವೋತ್ತಮ್' ಹಿಂದಿ ಮಾಸ ಪತ್ರಿಕೆ
ಪ್ರಕಟವಾದ "ಸಂಕಲನ" 'ಬೀಮಾರಿ ಭಗಾಯಿಯೆ ಮನೋಬಲ್ ಸೆ' ಎಂಬ ಲೇಖನ.

ಇತ್ತೀಚೆಗೆ, ಓಹಿಯೋ ಪ್ರಾಂತೀಯ
ಶ್ವವಿದ್ಯಾನಿಲಯದ ಮನೋರೋಗ
ಕಿತ್ಸಕ ಜೆನಿಸ್ ಕೀಕೋಲ್ಟ್‌ಗ್ಲಾಜರ್
ುತ್ತು ರೋಗನಿರೋಧಕಶಕ್ತಿ ತಜ್ಞ
ೊನಾಲ್ಡ್ ಗ್ಲಾಜರ್ ೩೮–೩೮ ಮಹಿಳೆ
ರ ಎರಡು ತಂಡಗಳನ್ನು ಸೂಕ್ಷ್ಮವಾಗಿ
ರೀಕ್ಷಿಸಿದರು. ಅದರಲ್ಲಿ ಒಂದು ತಂಡ
ವಾಹಿತ ಮಹಿಳೆಯರದಾಗಿತ್ತು.
ನ್ನೊಂದು ಪರಿತ್ಯಾಗಮಾಡಲ್ಪಟ್ಟ
ಥವಾ ವಿವಾಹ ವಿಚ್ಛೇದನಕ್ಕೊಳಗಾದ
ಹಿಳೆಯರದಾಗಿತ್ತು. ವಿವಾಹಿತ ಮಹಿಳೆ
ರ ರೋಗ ನಿರೋಧಕ ಶಕ್ತಿ ವ್ಯವಸ್ಥೆ
ತ್ತಮತರವಾಗಿತ್ತು. ವೈವಾಹಿಕ ಜೀವನ
ಸುಖವಾಗಿದ್ದವರಲ್ಲಿ ಇದು ಅತ್ಯುತ್ತಮ
ಗಿತ್ತು. ಪುರುಷರನ್ನು ಕುರಿತು ನಡೆಸಿದ
್ಯಯನದಿಂದಲೂ ಇದೇ ಪರಿಣಾಮ
ಡು ಬಂತು.

ಸಾಮಾಜಿಕ ಸಂಬಂಧ ಮತ್ತು ಸಂಪರ್ಕ
ಆರೋಗ್ಯ ಮತ್ತು ದೀರ್ಘಾಯುಷ್ಯದ
ಷ್ಟಿಯಿಂದ ಇಷ್ಟೇ ಮಹತ್ವಪೂರ್ಣ
ಗಿರುತ್ತವೆ. ಸಾಮಾಜಿಕ ಚಟುವಟಿಕೆ
ಲ್ಲಿ ಕಡೇಪಕ್ಷ ವಾರದಲ್ಲಿ ಒಮ್ಮೆಯಾ
ೂ ಭಾಗವಹಿಸುವವರು, ಈ ಕ್ಷೇತ್ರದಲ್ಲಿ
ಪೂರ್ಣವಾಗಿ ನಿಷ್ಕ್ರಿಯರಾಗಿರುವವರಿ
ಹೆಚ್ಚು ಕಾಲ ಬದುಕುತ್ತಾರೆಂಬುದು
ಕಪ್ಪಿ ಮಾಡಿದ ಪರಿಶೀಲನೆಯಿಂದ ಕಂಡು
ತು.

ತನ್ನ ಮನಸ್ಸಿನ ಭಾವನೆಗಳನ್ನು ಇತರ
ಡನೆ ಹಂಚಿಕೊಳ್ಳುವುದು ಸಹ
ನುಷ್ಯನ ಜೀವನದಲ್ಲಿ ಅನುಕೂಲಕರ
ವ ಪೀಠಿಕೆಯಾಗುತ್ತದೆ. ಟೆಕ್ಸಾಸ್‌ನ
ಾಸ್‌ನಲ್ಲಿರುವ ಸದರ್ನ್ ಮೆಥೊಡಿಸ್ಟ್
ವಿಶ್ವವಿದ್ಯಾನಿಲಯದ ಮನೋವಿಜ್ಞಾನಿ ಜೇಮ್ಸ್ ಡಬ್ಲ್ಯು ಪೇನಿಬೇಕರ್ ತನ್ನ ವಿದ್ಯಾರ್ಥಿಗಳ ಒಂದು ಗುಂಪಿಗೆ ತಮ್ಮ ಜೀವನದ ಅತ್ಯಂತ ದಾರುಣ ಪ್ರಸಂಗವನ್ನು ಬರೆಯಲು ಹೇಳಿದ (೧೯೮೬). ಪ್ರತಿದಿನ ಕೆಲವು ನಿಮಿಷಗಳ ಕಾಲ ನಾಲ್ಕು ದಿನಗಳ ವರೆಗೆ ಒಂದೇ ಸಮ ಅವರು ಬರೆಯ ಬೇಕಾಗಿತ್ತು. "ತನ್ನ ಸಹೋದರಿಗೆ ನೌಕಾಯಾನ ಕಲಿಸಿದ ಬಗ್ಗೆ ಒಬ್ಬ ವಿದ್ಯಾರ್ಥಿ ಬರೆದ". ಪೇನಿಬೇಕರ್ ಈ ರೀತಿ ವರದಿ ಸಲ್ಲಿಸಿದ. 'ಅವಳು ಮೊದಲ ಬಾರಿ ನೌಕೆಯನ್ನು ತೆಗೆದುಕೊಂಡು ಹೊರಟಾಗಲೇ ಮುಳುಗಿಹೋದಳು."

ಸಾಮಾನ್ಯ ವಿಷಯಗಳನ್ನು ಬರೆಯಲು ಹೇಳಿದ ವಿದ್ಯಾರ್ಥಿಗಳಿಗಿಂತ, ತಮ್ಮ ದುಃಖದ ಅನುಭವಗಳನ್ನು ಪ್ರಸ್ತುತಪಡಿಸಲು ಹೇಳಿದ ವಿದ್ಯಾರ್ಥಿಗಳು ಹೆಚ್ಚು ಆರೋಗ್ಯವಂತರಾಗಿಯೂ, ಪ್ರಸನ್ನ ಚಿತ್ತರಾಗಿಯೂ ಇದ್ದರು. ಅಧ್ಯಯನದ ನಂತರದ ಆರು ತಿಂಗಳ ಅಂತರದಲ್ಲಿ ಈ ಮೇಲಿನ ಪರಿಣಾಮ ಕಂಡು ಬಂತು. ಶರೀರದ ರೋಗ ನಿರೋಧಕ ವ್ಯವಸ್ಥೆಯಲ್ಲೂ ಇದರಿಂದ ಅಸಾಧಾರಣ ಸುಧಾರಣೆಯಾಗುವುದೆಂದು ೧೯೮೮ರಲ್ಲಿ ಮಾಡಿದ ಇದೇ ತರದ ಇನ್ನೊಂದು ಅಧ್ಯಯನದಲ್ಲಿ ರಕ್ತಪರೀಕ್ಷೆಯಿಂದ ಈ ವಿಷಯ ಸ್ಪಷ್ಟವಾಯಿತು. ಈ ಸ್ಥಿತಿ ಸುಮಾರು ಆರು ವಾರಗಳವರೆಗೂ ಇರುತ್ತದೆಂಬುದು ಅರಿವಿಗೆ ಬಂತು. ಆದ್ದರಿಂದ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳುವುದರಿಂದ ಪ್ರತ್ಯಕ್ಷವಾಗಿಯೇ ಶಾರೀರಿಕ ಮತ್ತು ಮಾನಸಿಕ ಲಾಭ ಆಗುವುದೆಂಬುದು ಪೇನಿಬೇಕರ್‌ನ ಅನಿಸಿಕೆ.

ಆರೋಗ್ಯಕ್ಕೆ 'ಆಶಾವಾದ' ಇನ್ನೊಂದು ಪ್ರಧಾನ ನಿಮಿತ್ತ. ಹಾರ್ವರ್ಡ್ ವಿಶ್ವವಿದ್ಯಾಲಯದ ಪದವೀಧರರು ತಮ್ಮ ಭಾವನಾತ್ಮಕ ಮತ್ತು ಶಾರೀರಿಕ ಸ್ವಾಸ್ಥ್ಯಕ್ಕೆ ಸಂಬಂಧಪಟ್ಟಂತೆ ಒಂದು ಪ್ರಶ್ನಾವಳಿಗೆ ೧೯೩೭ ರಿಂದ ಕ್ರಮಬದ್ಧವಾಗಿ ಉತ್ತರ ಕೊಡುತ್ತಾ ಬಂದಿದ್ದಾರೆ. ಮಿಚಿಗನ್ ವಿಶ್ವವಿದ್ಯಾಲಯದ ಮನೋವಿಜ್ಞಾನಿ ಕ್ರಿಸ್ಟೋಫರ್ ಪೀಟರ್‌ಸನ್, ಈ ಪದವೀಧರರಲ್ಲಿ ೯೯ ಜನರನ್ನು ಕುರಿತು ಅಧ್ಯಯನ ಮಾಡಿದ (೧೯೮೮). ೨೫ ವರ್ಷಗಳವರೆಗೆ ನಿರಾಶೆಯಲ್ಲಿ ಮುಳುಗಿದ್ದವರು, ೪೦, ೫೦, ೬೦ ನೇ ವರ್ಷವನ್ನು ತಲುಪುತ್ತಿರುವಾಗಲೇ ಪ್ರಬಲ ಕಾಯಿಲೆಗಳಿಗೆ ತುತ್ತಾದರು ಎಂಬುದನ್ನು ಆತ ಕಂಡು ಹಿಡಿದ.

ಪೀಟರ್‌ಸನ್ ಹೇಳುವಂತೆ, ನಿರಾಶಾವಾದಿಗಳು ತಮ್ಮ ಕಾಯಿಲೆಗಳ ಬಗ್ಗೆ ಉದಾಸೀನರಾಗಿರಬಹುದು ಅಥವಾ ತಮ್ಮ ಆರೋಗ್ಯದ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡಿಲ್ಲದೆಯೂ ಇರಬಹುದು. ಕಾಯಿಲೆಗಳೊಡನೆ ಸೆಣಸಲು ಆಶಾವಾದದ ಪ್ರವೃತ್ತಿ ಪರಿಣಾಮಕಾರಿಯಾಗಬಲ್ಲದೆಂದು ಇದರ ಅಭಿಪ್ರಾಯವೇ? ಮನೋವಿಜ್ಞಾನಿ ಸೆಂಡ್ರಾ ಲೆವಿ, ಏಳು ವರ್ಷಗಳವರೆಗೆ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದ ಕ್ಯಾನ್ಸರ್ ಸಂಸ್ಥೆಯಲ್ಲಿ ಸ್ತನ ಕ್ಯಾನ್ಸರ್ ಉಲ್ಬಣಗೊಂಡಿದ್ದ ೩೬ ಮಹಿಳೆಯರ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಿದ. ಇವರಲ್ಲಿ ೧೨ ಮಹಿಳೆಯರು ಏಳನೇ ವರ್ಷದವರೆಗೆ ಜೀವಂತರಾಗಿದ್ದರು. ಔಷಧೋಪಚಾರಗಳ ನಂತರ ಅವರು ಎಷ್ಟು ಕಾಲ ರೋಗದ ಪ್ರಭಾವದಿಂದ ಮುಕ್ತರಾಗಿದ್ದರು ಎಂಬುದು ಅವರು ಜೀವಂತರಾಗಿದ್ದುದಕ್ಕೆ ಮುಖ್ಯ ನಿಮಿತ್ತವಾಗಿತ್ತು. ಇನ್ನೊಂದು ಪ್ರಬಲತರ ನಿಮಿತ್ತವೆಂದರೆ ಅವರ ಸಂತೋಷ ಮತ್ತು ಆನಂದದ ಮಟ್ಟವನ್ನು ಒಂದು ಪ್ರಮಾಣಿತ ಪ್ರಶ್ನಾವಳಿಯ ಆಧಾರದ ಮೇಲೆ ಅಂದಾಜು ಮಾಡ ಲಾಯಿತು.

ಇಂಗ್ಲೆಂಡಿನ ಸಾಲ್ಜಬರಿಯಲ್ಲಿರುವ ಸಾಮಾನ್ಯ ನೆಗಡಿಯ ಬಗ್ಗೆ ಮಾತ್ರ ಕೆಲಸ ಮಾಡುವ ವಿಭಾಗದಲ್ಲಿ ವಿಜ್ಞಾನಿಗಳು ಇಷ್ಟು ಮಾರಕವಲ್ಲದ, ಆದರೆ ಇದರಂತೆಯೇ ರಹಸ್ಯ ಪೂರ್ಣವಾದ ಕಾಯಿಲೆಯನ್ನು ಕುರಿತು ಅಧ್ಯಯನ ಮಾಡುತ್ತಿದ್ದಾರೆ. ಮಾನಸಿಕ ನಿಮಿತ್ತಗಳು ಮತ್ತು ನೆಗ ಯನ್ನು ತಡೆದುಕೊಳ್ಳುವ ಸಾಮರ್ಥ್ಯ ಮಧ್ಯದಲ್ಲೂ ಒಂದು ಸಂಬಂಧ ಇರಬಹುದು ಎಂಬ ಸಂಕೇತ ಈ ಅಧ್ಯಯನದಿಂದ ಕಂ ಬರುತ್ತದೆ.

ಕೆಲವರು ಹೇಳುವಂತೆ ಅಲ್ಪ ಪ್ರ ವಿಶ್ವಾಸಗಳೂ ನೆಗಡಿಯ ವಿಷಯದ ಉಪಯೋಗಕ್ಕೆ ಬರುತ್ತವೆ. ಮಸ್ತಿ ಶರೀರ ಮತ್ತು ಜೈವ ಕ್ಷೇತ್ರದ—ಸಂಶೋ ಮನೋವಿಜ್ಞಾನಿ ಡೇವಿಡ್ ಮಾಕ್ಲೆಲೆಂ "ನನಗೆ ನೆಗಡಿ ಆಗುವ ಹಾಗಿದೆ ಎನಿ ಕೂಡಲೇ ನಾನು ಸ್ನೇಹ ಸಂಬಂಧಗಳ ಯೋಚಿಸತೊಡಗುತ್ತೇನೆ. ಈ ಕ್ರ ಸದಾಕಾಲ ಸಫಲವಾಗಿದೆಯೆಂದಲ್ಲ; ಅನೇಕ ಸಲ ಅದ್ಭುತ ಪರಿಣಾಮ ಕಂಡಿ

ಮಾಕ್ಲೆಲೆಂಡಿನ ಈ ವಿಧಾನ ೧೯೮ ಮಾಡಿದ ಅಧ್ಯಯನದ ಪ್ರಾರಂ ಪರಿಣಾಮಗಳ ಮೇಲೆ ಆಧಾರಿತವಾ

...ಹಾನುಭವ ತಡೆಯುವ ಕೆಲ ಮಂದಿ ...ಲ್ಲಿ 'ಪ್ರತಿರಕ್ಷಾಗ್ಲೋಬ್ಯುಲಿನ್'–ಎ ...ಟ್ಟ ಹೆಚ್ಚಾಗುತ್ತದೆ. ಇದು ಶ್ವಾಸ ...ಬಂಧವಾದ ರೋಗದ ಸೋಂಕಿನಿಂದ ...ನುಷ್ಯನನ್ನು ರಕ್ಷಿಸುತ್ತದೆ.

ಮನುಷ್ಯನ ಅಭಿಪ್ರಾಯಗಳ, ಮನೋ ...ವಗಳ ಕಾಯಿಲೆಗಳ ಮೇಲೆ ಪ್ರಭಾವ ...ಗೆ ಬೀಳುತ್ತದೆ? ಸೋಂಕು ರಕ್ಷಾ ...ಸ್ತ್ರದ ತಜ್ಞರು ಇದಕ್ಕೆ ಸಂಬಂಧಪಟ್ಟಂತೆ ...ಲವಾದ ಪ್ರಮಾಣವನ್ನು ಹುಡುಕಿದ್ದಾರೆ. ...ಸ್ತಿಷ್ಕ ಮತ್ತು ರೋಗ ನಿರೋಧಕ ...ವಸ್ಥೆಯ ಮಧ್ಯೆ ಪರಸ್ಪರ ವಹನ ಕ್ರಿಯೆ ...ಡೆಯುತ್ತದೆ. ಸಾನ್ ಡಿಎಗೋ ವಿಶ್ವ ...ದ್ಯಾನಿಲಯದ ಕಾರೆನ್ ಬುಲ್ಕ್ ...ಮಸ್ ಗ್ರಂಥಿಯಲ್ಲಿ "ತಂತ್ರಿಕಾತಂತು" ...ನ್ನು ಕಂಡ. ಎದೆ ಮೂಳೆಯ ಕೆಳಗೆ ಇರು ...ಥ ಈ ಗ್ರಂಥಿಯೇ ರೋಗ ನಿರೋಧಕ ...ಕ್ತಕೋಶಗಳು ಅಥವಾ ಟಿ–ಕೋಶಗಳನ್ನು ...ತ್ಪತ್ತಿ ಮಾಡುತ್ತದೆ. ಕಾರ್ನ್‌ಬುಲ್ಕ್ ...ೂತೆಯಲ್ಲಿ ಇತ್ತೀಚೆಗೆ ಕೆಲಸ ಮಾಡು ...ದ್ದ ಮನೋರೋಗ ಚಿಕಿತ್ಸಕರಾದ ...ನಿಸ್ ಡಾರ್ಕೋ ಮತ್ತು ಮೈಕಲ್ ...ರ್ವಿನ್ ಈ ಕೋಶಗಳ ಮೇಲೆ 'ರಿಸೆಪ್ಟರ್' ...ಹ ಕಂಡರು. ಇವು ಸೂಕ್ಷ್ಮ ತಂತುದ್ರವ್ಯ ...ಂದ ಸಂಕೇತವನ್ನು ಗ್ರಹಿಸುತ್ತಿದ್ದುವು. ...ೋಚೆಸ್ಟರ್ ವಿಶ್ವವಿದ್ಯಾಲಯದ ಚಿಕಿತ್ಸಾ ...ಲೇಜಿನ ಡೇವಿಡ್ ಫೆಲ್ಟನ್ ಸಹ ...ಮಸ್, ಪ್ಲೀಹ, ಲಿಂಫ್, ಮೂಳೆಕೀಲು, ...ನ್ನು ಮೂಳೆಯೊಳಗಿನ ಮಜ್ಜಾರಜ್ಜು ...ುಂತಾದ ನಿರೋಧಕ ವ್ಯವಸ್ಥೆಯ ಎಲ್ಲಾ ...ನಯುವಗಳಲ್ಲಿ ಈ ಸೂಕ್ಷ್ಮ ತಂತುದ್ರವ್ಯ ...ನ್ನು ಕಂಡಿದ್ದಾರೆ. ಎಲ್ಲಾ ಸ್ನಾಯುಗಳೂ ಕೊನೆಗೆ ಮಸ್ತಿಷ್ಕಕ್ಕೇ ಸೇರಿರುವುದರಿಂದ ಈ ವಿಜ್ಞಾನಿಗಳ ಕೆಲಸ ಈ ಎರಡು ಸಂಬಂಧಗಳನ್ನು ಸ್ಪಷ್ಟವಾಗಿ ಸಾಬೀತು ಪಡಿಸುವುದಾಗಿದೆ.

ಈ ದಿಶೆಯಲ್ಲಿ ನಿರಂತರವಾಗಿ ಸಂಶೋಧನೆಗಳು ನಡೆಯುತ್ತಿವೆ. ಇವು ಮಸ್ತಿಷ್ಕ ಮತ್ತು ರೋಗ ಪ್ರತಿರೋಧಕ ವ್ಯವಸ್ಥೆಯ ಮಧ್ಯೆ ರಾಸಾಯನಿಕ ಸೂತ್ರಗಳ ಇರುವಿಕೆಯನ್ನು ನಿರೂಪಿಸುತ್ತವೆ. ನಮ್ಮ ಶರೀರದ ಎಲ್ಲಾ ಪ್ರಣಾಳಿಕೆಗಳೂ ಪರಸ್ಪರವಾಹಕವಾಗಿವೆ. ಎಂಬುದಕ್ಕೆ ವಿವರಗಳನ್ನು ವಿಜ್ಞಾನಿಗಳು ಕ್ರಮೇಣ ಸಂಗ್ರಹಿಸುತ್ತಿದ್ದಾರೆ. ಇವುಗಳ ಮಧ್ಯೆ ಸಂದೇಶ ವಾಹಕಗಳಾಗಿ ಕೆಲಸ ಮಾಡುವ ನೂರಾರು ಶಕ್ತಿಯುತ ಜೀವ ರಾಸಾಯನಿಕ ತತ್ವಗಳಿವೆ. ಇವುಗಳಲ್ಲಿ ಹೆಚ್ಚಿನವುಗಳ ವ್ಯಾಪಕ ಪ್ರಭಾವ ಮನೋವೃತ್ತಿ ಹಾಗು ಭಾವನೆಗಳ ಮೇಲೆ ಬೀಳುತ್ತದೆ. ಇವು ಮನಸ್ಸಿನ ಸ್ಥಿತಿ ಮತ್ತು ಆರೋಗ್ಯಸ್ಥಿತಿಗೆ ಮಧ್ಯದಲ್ಲಿರುವ ಚಿರ ಸಂದಿಗ್ಧ ಸಂಬಂಧಗಳನ್ನು ತಿಳಿಸಲು ಒಂದು ಅಣುವಿನ ಪಥ ಪ್ರದರ್ಶನ ಮಾಡುತ್ತವೆ.

ರಾಷ್ಟ್ರೀಯ ಮಾನಸಿಕ ಸ್ವಾಸ್ಥ್ಯ ಸಂಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಕೆಂಡೆಸ್ ಪರ್ಟ್ ಮತ್ತು ಆತನ ಸಹೋದ್ಯೋಗಿ ಮೈಕಲ್ ರಫ್ ೧೯೮೭ರಲ್ಲಿ ಈ ರೀತಿ ಘೋಷಿಸಿದರು. ಗಾಯಗಳನ್ನು ವಾಸಿಮಾಡುವ, ಅಂಗಾಂಶಗಳನ್ನು ಗುಣಪಡಿಸುವ ಮತ್ತು ಜೀವಾಣುವಿನ ಅಂತರ್ಗ್ರಹಣದಲ್ಲಿ ಸಹಾಯ ಮಾಡುವ ನಿರೋಧಕ ಕೋಶಗಳೇ "ಮೋನೋಸೈಟ್" ಇವು ಮಸ್ತಿಷ್ಕದಲ್ಲಿ ಉತ್ಪನ್ನವಾಗುವ "ತಂತ್ರಿಕಾಸೆಪ್ಟೈಯಿಡ್" ಎಂಬ ರಸಾಯನಗಳಿಗೆ

ಶೀಘ್ರವೇದಿಗಳಾಗಿರುತ್ತವೆ. ಮತ್ತು ಇವು ಗಳನ್ನು ಉತ್ಪನ್ನಮಾಡುವ ಕೋಶಗಳ ಪ್ರಬಲ ಸಂಗ್ರಹವೂ ಆಗಿರುತ್ತದೆ. ಇವು ಮನೋಭಾವಗಳ ಮೇಲೆ ಹಿಡಿತವನ್ನೂ ಇಟ್ಟುಕೊಳ್ಳುತ್ತವೆ.

ದೂರವಾಣಿಯ ತಂತಿಗಳಂತಹ ಅಣುಗಳ ವ್ಯವಸ್ಥೆ ಮಸ್ತಿಷ್ಕ ಮತ್ತು ನಿರೋಧಕ ಪ್ರಣಾಳಿಕೆಯ ಮಧ್ಯೆ ಇರುತ್ತದೆ. ಶ್ವೇತ ರಕ್ತ ಕೋಶಗಳು ಇದರ ಮೂಲಕ, ಮಸ್ತಿಷ್ಕದಿಂದ ನೇರವಾಗಿ ಸಂದೇಶಗಳನ್ನು ಪಡೆಯುತ್ತವೆ-ಎಂಬುದನ್ನು ಈ ಸಂಶೋಧನೆಯಿಂದ ಸ್ಪಷ್ಟಪಡಿಸಲಾಗಿದೆ. ಪರ್ಟ್ ಹೇಳುವಂತೆ "ಇವುಗಳೆಲ್ಲದರಿಂದಲೂ ಕೆಲಸತತ್ವಗಳನ್ನು ಸ್ಪಷ್ಟಪಡಿಸಲು ಪ್ರಯತ್ನಿಸುವುದೇ ನಮ್ಮ ಕೆಲಸ."

ಇಷ್ಟೊಂದು ತಿಳುವಳಿಕೆಯನ್ನು ಪಡೆದ ನಂತರವೂ ಅನೇಕ ವಿಜ್ಞಾನಿಗಳು ಮಸ್ತಿಷ್ಕ ಮತ್ತು ಶರೀರಕ್ಕೆ ಸಂಬಂಧಪಟ್ಟ ಅಧ್ಯಯನವನ್ನು ಕುರಿತು ಈಗಲೂ ಸಂದೇಹಪಡುತ್ತಾರೆ. "ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸನ್"ನ ೧೯೮೫ರ ಜೂನ್ ತಿಂಗಳ ಅಂಕದ ಸಂಪಾದಕೀಯದಲ್ಲಿ ಈ ನಂಬಿಕೆಯನ್ನು "ಜಾನಪದ ಕಥೆ" ಎಂದೂ ಹೆಸರಿಸಿದ್ದಾರೆ. ಕಾಯಿಲೆ ಮನಸ್ಥಿತಿಯನ್ನು ಪ್ರತ್ಯಕ್ಷವಾಗಿ ಪ್ರತಿಬಿಂಬಿಸುತ್ತದೆ. ಆದರೂ ಸಹ ಮಿಯಾಮಿ ವಿಶ್ವವಿದ್ಯಾಲಯದ ಪ್ರಯೋಗ ಶಿಕ್ಷಣ ತರಗತಿಯ ನಿರ್ದೇಶಕರಾದ ಡಾ|| ಮೇರಿ ಎಸ್ ಫ್ಲೇಚರ್ ಈ ರೀತಿ ಹೇಳುತ್ತಾರೆ. "ವಿಜ್ಞಾನಿಗಳು ಈ ಸತ್ವದ ಪರೀಕ್ಷೆ ಮಾಡುತ್ತಾ ಹೋದಂತೆಲ್ಲಾ, ಇದನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಲಾಗುತ್ತಿದೆ."

ಇತ್ತೀಚೆಗೆ ಹಾರ್ವರ್ಡ್ ವಿಶ್ವ ವಿದ್ಯಾಲಯದ ಮನೋವಿಜ್ಞಾನಿ ಏಲನ್ ಲೆಂಗರ್ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ವರನ್ನು ಕುರಿತು ಪರೀಕ್ಷೆ ನಡೆಸಿದ ಆಸ್ಪತ್ರೆಯ ಅನುಭವಕ್ಕೆ ಸಂಬಂಧಪಟ್ಟಂ ಒಂದು ಹೊಸ ತಿಳುವಳಿಕೆಯನ್ನು ಮೂ ಸಿದ. ಕಷ್ಟವನ್ನೇ ಅನಿವಾರ್ಯ-ಎಂದು ಕೊಳ್ಳದೆ ಆಸ್ಪತ್ರೆಯ ಯಾತನಾಮಯ ಸ್ಥಿತಿಗೆ ಸಮಾಂತರವಾಗಿ ಅಲ್ಲಿಯ ಅನ್ವ ಯಾತ್ಮಕ ಭಾಗವನ್ನೂ ನೋಡಬೇಕೆಂದು ಒತ್ತಿ ಹೇಳಿದನು. ಈ ರೀತಿಯ ತಿಳುವಳಿ ಪಡೆಯದ ರೋಗಿಗಳಿಗಿಂತ, ಇವರು ಅರ್ಧ ಪ್ರಮಾಣದಷ್ಟು ಮಾತ್ರ ನೋ ನಿವಾರಕ ಮಾತ್ರೆಗಳನ್ನು ತೆಗೆದುಕೊಂಡರು ಮತ್ತು ಆಸ್ಪತ್ರೆಯಿಂದ ಸರಾಸರಿ ಎರಡು ದಿನಗಳು ಮುಂಚಿತವಾಗಿಯೇ ಹೊ ಬಂದರು.

ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯ ಕ್ಯಾನ್ಸರ್ ಸಂಸ್ಥಾನದ ನಿರ್ದೇಶ ರೊನಾಲ್ಡ್ ಹರ್ಬರ್‌ಮನ್ ಇನ್ನೊಂ ಪರೀಕ್ಷಾ ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ. ಅಲ್ಲಿಯವರೇ ಆದ ಸಂಶೋ ಮತ್ತು 'ಯೆಲ್'ನ ಮನೋವಿಜ್ಞಾ ಜೂಡಿಥ್ ರಾಡಿನ್ ಇದರಲ್ಲಿ ಭಾಗವ ದರು. ಕ್ಯಾನ್ಸರ್ ರೋಗ ಗಂಭೀರ ಸ್ಥಿ ಯಲ್ಲಿ ಇಲ್ಲದ ರೋಗಿಗಳನ್ನು ಪರೀಕ್ಷೆಗೆ ತೆಗೆದುಕೊಳ್ಳಲಾಯಿತು. ಅವರಲ್ಲಿ ರೋಗ ಮರುಕಳಿಸುವ ಸಾಧ್ಯತೆಯೂ ಹೆಚ್ಚಾಗಿದ್ದುದರಿಂದ ಅವರ ರೋ ನಿರೋಧಕ ಶಕ್ತಿಯನ್ನು ಹೆಚ್ಚಿಸ ಮನೋವೈಜ್ಞಾನಿಕ ತರಬೇತಿಯ ಸಹಾ ಪಡೆಯಲಾಯಿತು. ೧೮ ಮಂದಿ ರೋ

ಗಳು ಎಂಟು ವಾರದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ತಮ್ಮ ಆತ್ಮವಿಶ್ವಾಸಹೀನತೆಯ ಭಾವವನ್ನು ಬದಲಾಯಿಸಿಕೊಂಡರು ಮನಸ್ಸನ್ನು ಹಗುರಗೊಳಿಸುವ ಪಾಠ ಕಲಿತರು.

ಸಾಮಾನ್ಯ ಚಿಕಿತ್ಸೆ ಪಡೆದ ರೋಗಿಗಳಿಗಿಂತ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ರೋಗಿಗಳಲ್ಲಿ ಹೆಚ್ಚು ಶಕ್ತಿಯುತವಾದ ರೋಗನಾಶಕ ಕೋಶಗಳು ವೃದ್ಧಿಗೊಂಡವು. ವಿಜ್ಞಾನಿಗಳು ಪ್ರಯೋಗದಿಂದ ಇದನ್ನು ಕಂಡುಕೊಂಡರು. ಈ ಕೋಶಗಳು ಅರ್ಬುದ ರೋಗ ಹೆಚ್ಚಾಗದಂತೆ ತಡೆಯುವಂಥವುಗಳಾಗಿದ್ದುವು. ಜೀವನದ ಬಗ್ಗೆ ಅನ್ವಯಾತ್ಮಕ ಅಭಿಪ್ರಾಯ ಇಟ್ಟುಕೊಳ್ಳುವುದರ ಪ್ರಯೋಜನಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವವರಿಂದ ನಾವು ಏನು ಕಲಿಯಬಲ್ಲೆವು? "ಆಶಾವಾದ ನಮ್ಮ ಜೀವನದಲ್ಲಿ ಉತ್ತಮ ಸುಧಾರಣೆ ತರಬಹುದು."

ಮನೋವಿಜ್ಞಾನಿ ಶೆಲ್ಡನ್ ಕೊಹೆನ್ ಈ ರೀತಿ ಹೇಳುತ್ತಾನೆ. "ಆಶಾವಾದ ನಿಜವಾಗಿಯೂ ಪ್ರತಿರೋಧ ವ್ಯವಸ್ಥೆಯನ್ನು ಪ್ರಭಾವಗೊಳಿಸುವುದೇ?" ಇದನ್ನು ಪರಿಗಣಿಸುವುದೇ ಈಗ ಸವಾಲಾಗಿದೆ. ವಿಜ್ಞಾನಿ ಕಾರನ್ ಬುಲ್ಕ್ ಈ ರೀತಿ ಹೇಳುತ್ತಾನೆ. 'ಮನೋವೈಜ್ಞಾನಿಕ ನಿಮಿತ್ತಗಳು ಮತ್ತು ರೋಗನಿರೋಧಕ ವ್ಯವಸ್ಥೆಯ ಮಧ್ಯದ ಅಂತರ್ಸಂಬಂಧಗಳನ್ನು ಸ್ಪಷ್ಟಪಡಿಸಲು ಬಹಳ ಜಾಗರೂಕತೆಯಿಂದ ವ್ಯವಸ್ಥಿತವಾಗಿ ಸಂಶೋಧನೆ ಮಾಡಲಾಗುತ್ತಿದೆ. ಇದಕ್ಕೆ ಇನ್ನೂ ಅನೇಕ ವರ್ಷಗಳು ಬೇಕಾಗಬಹುದು. ಆದರೆ ಭವಿಷ್ಯದಲ್ಲಿ ಇದರ ಉತ್ತಮ ಪರಿಣಾಮ ಅದ್ಭುತವಾಗಿರುವುದು.

ಹೀಗಿತ್ತು ನಾ. ಕ. ಅವರ ವಿನೋದ

ಒಂದು ಸಾರಿ ಹದಿಹರೆಯದ ಉಪಾಧ್ಯಾಯರು ಕಾಲೇಜಿನಲ್ಲಿ ಕಸ್ತೂರಿ ಅವರಿಗೆ "ಬಿಡಿಸಾರ್, ನಿಮ್ಮ ಕಾಲದ ಮಾತೇ ಆಡುತ್ತೀರಿ, ನೀವು ಮಾಡಿದ್ದನ್ನೆಲ್ಲ ನಾವೂ ಮಾಡಬಲ್ಲೆವು" ಎಂದು ಸವಾಲೆಸೆದರು. ಅದಕ್ಕೆ ಅವರು "ಸಾಧ್ಯವಿಲ್ಲಪ್ಪ–ಸುಮ್ಮನೆ ಪಂದ್ಯ ಕಟ್ಟಬೇಡಿ–ನಮ್ಮ ಕಾಲದ ಘಟಾನುಘಟಿಗಳನ್ನು ಬಿಡಿ. ಕೇವಲ ನಾನು ಮಾಡುವುದನ್ನು ಕೂಡ ನೀವು ಮಾಡಲಾರಿರಿ ನನ್ನಂಥವನ ಜೊತೆ ಪಂದ್ಯಕಟ್ಟಿ ಸೋತು, ಇಷ್ಟೊಂದು ಮಂದಿಗೆ ತಿಂಡಿ ಕಾಫಿ ಕೊಡಿಸಿ ಕೈಕಚ್ಚಿಕೊಳ್ಳಬೇಡಿ. ಬೇಡ್ರಪ್ಪಾ" ಎಂದರೂ ಯುವಪಡೆ ಕೇಳಲಿಲ್ಲ. "ಸರಿ ಉಳಿದ ದೊಡ್ಡದೆಲ್ಲ ಇರಲಿ, ನಾನು ಮಾಡುವ ಸಣ್ಣದೊಂದು ಕೆಲಸಮಾಡಿ ಸಾಕು" ಎಂದು ತಮ್ಮ ಕೃತಕ ದಂತಪಂಕ್ತಿಗಳನ್ನು ಕಳಚಿ ಮೇಜಿನ ಮೇಲಿಟ್ಟರು. ಪಂದ್ಯಕಟ್ಟಿದವರು ತಿಂಡಿ ಕಾಫಿಯಿಂದ ಕೈಕಚ್ಚಿಸಿಕೊಂಡರು.

ಸತ್ಯ - ಮಿಥ್ಯ

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೬ನೇ ಕ್ರಾಸ್, ಚಾಮುಂಡಿಪುರ
ಮೈಸೂರು-೫೭೦೦೦೪

ಯೌವನದಲ್ಲಿ ಕಾಲಿಡುತ್ತಿದ್ದ ಯುವಕನೊಬ್ಬನ ಮುಂದೆ ಒಬ್ಬ ದೇವಕನ್ನಿಕೆ ಪ್ರತ್ಯಕ್ಷಳಾಗಿ, "ನನ್ನಲ್ಲಿ ಐದುವರಗಳಿವೆ. ಅವು ಯಾವುವೆಂದರೆ—ಕೀರ್ತಿ, ಪ್ರೇಮ, ಐಶ್ವರ್ಯ, ಭೋಗ ಮತ್ತು ಮೃತ್ಯು. ಇವುಗಳಲ್ಲಿ ಒಂದನ್ನು ಆರಿಸಿಕೊ. ಚೆನ್ನಾಗಿ ಯೋಚನೆ ಮಾಡು, ಆರಿಸುವಾಗ ಜಾಣತನವಿರಲಿ, ಏಕೆಂದರೆ ಇವುಗಳಲ್ಲಿ ಮೌಲ್ಯವಿರುವುದು ಒಂದಕ್ಕೆ ಮಾತ್ರ."

"ಯೋಚಿಸಬೇಕಾದದ್ದು ಏನೂ ಇಲ್ಲ. ನನಗೆ ಭೋಗ ಬೇಕು" ಅಂದ ಯುವಕ. ಅವನಿಗೆ ಅದು ದೊರೆಯಿತು. ಅವನು, ಯುವಕರು ಅಪೇಕ್ಷಿಸುವ ಭೋಗವನ್ನರಿಸಿ ಎಲ್ಲೆಡೆ ಅಲೆದ. ಸುಖ ಭೋಗಗಳನ್ನು ಅನುಭವಿಸಿದ. ಆದರೆ ಇವೆಲ್ಲಾ ಕ್ಷಣಿಕ, ವ್ಯರ್ಥ ಎಂದು ಅವನಿಗೆ ಅನಿಸಿತು. ಕಡೆಯಲ್ಲಿ 'ಇಷ್ಟು ವರ್ಷ ನಾನು ಕಾಲವನ್ನು ವ್ಯರ್ಥವಾಗಿ ಹಾಳುಮಾಡಿದೆ. ಇನ್ನೊಂದು ಬಾರಿ ನನಗೆ ವರವನ್ನು ಆರಿಸಿಕೊಳ್ಳುವ ಅವಕಾಶ ಸಿಕ್ಕಿದರೆ....' ಎಂದು ಯೋಚಿಸುತ್ತಿದ್ದಂತೆ ದೇವಕನ್ನಿಕೆ ಪ್ರತ್ಯಕ್ಷಳಾದಳು. "ನನ್ನಲ್ಲಿ ನಾಲ್ಕು ವರಗಳಿವೆ. ಒಂದನ್ನು ಆರಿಸಿಕೊ. ಜ್ಞಾಪಕವಿರಲಿ, ಒಂದು ಮಾತ್ರ ಅಮೂಲ್ಯವಾದುದು" ಎಂದಳು ಆ ದೇವಕನ್ನಿಕೆ.

ಸ್ವಲ್ಪ ಹೊತ್ತು ಯೋಚಿಸಿ, ಅವ
'ಪ್ರೇಮ'ವನ್ನು ಆರಿಸಿದ. ದೇವಕನ್ನಿಕೆಂ
ಕಣ್ಣಲ್ಲಿ ನೀರಿನ ಹನಿ ಬಂದದ್ದು ಅವ
ಗೊತ್ತಾಗಲಿಲ್ಲ.

ಹಲವು ವರ್ಷಗಳು ಕಳೆದವು. ಖ
ಮನೆಯ ಮುಂದಿಟ್ಟ ಹೆಣದ ಬಳಿ ಅವ
ಕುಳಿತ್ತಿದ್ದ. 'ಒಬ್ಬರ ನಂತರ ಒಬ್ಬ
ನನ್ನನ್ನು ತೊರೆದು ಹೊರಟು ಹೋದ
ಈಗ ನಾನೊಬ್ಬನೇ. ಪ್ರೇಮ ನನ್ನ
ಮಾರಿದೆ. ಸಾವಿರ ಗಂಟೆಗಳ ದುಃಖ
ನಾನು ಬೆಲೆ ಕೊಟ್ಟಿದ್ದೇನೆ. ಹೃದಯಾಂ
ಆಳದಿಂದ ನಾನು 'ಪ್ರೇಮ'ವನ್ನು ಶ
ತ್ತೇನೆ' ಎಂದ.

"ಮೂರು ವರ್ಷದಲ್ಲಿ ನೀನು ಅನ
ಪಡೆದು ಜಾಣನಾಗಿದ್ದಿ. ಈಗ
ಬೇಕಾದುದನ್ನು ಉಳಿದ ಮೂ
ಆರಿಸಿಕೊ" ಎಂದಳು ದೇವಕನ್ನಿಕೆ.

ಬಹಳ ಹೊತ್ತು ಆಲೋಚಿಸಿ ಅ
'ಕೀರ್ತಿ'ಯನ್ನು ಆರಿಸಿಕೊಂಡ. ನಿಟ್ಟು
ಬಿಡುತ್ತಾ ದೇವಕನ್ನಿಕೆ ಅದೃಶ್ಯಳಾ
ಅನೇಕ ವರ್ಷಗಳ ನಂತರ ಅವಳು ಹಿಂ
ದಳು. ಅವನು ಏಕಾಂಗಿಯಾಗಿ ಯ
ಸುತ್ತಾ ನಿಂತಿದ್ದ. ಅವನ ಮನ

ಮೂಲ: ಮಾರ್ಕ್ ಟ್ವೈನ್.

ನಿದೆ ಅವಳಿಗೆ ಗೊತ್ತಾಯಿತು. 'ನನ್ನ ಸರು ವಿಶ್ವದಲ್ಲೆಲ್ಲಾ ಹರಡಿತ್ತು. ಆದರೆ ಾಗಿದ್ದುದು ಎಷ್ಟು ಕೊಂಚ ಕಾಲ! ಂತರ ನಾನು ಕಂಡದ್ದು ಹೊಟ್ಟೆಕಿಚ್ಚು, ್ವೇಷ, ಕಿರುಕುಳ. ಕಡೆಯಲ್ಲಿ ನನ್ನ ಬಗ್ಗೆ ನ ತೋರಿಸುತ್ತಿದ್ದದ್ದು ಮರುಕ. ನುಷ್ಯನ ಶತ್ರುವಲ್ಲವೇ ಅದು?'

"ಎರಡು ವರಗಳು ನನ್ನ ಬಳಿ ಇನ್ನೂ ಉಳಿದಿವೆ. ಹೆಚ್ಚು ಮಹತ್ವದ್ದನ್ನು ರಿಸಿಕೊ"—ದೇವಕನ್ನಿಕೆ ಹೇಳಿದಳು.

'ಐಶ್ವರ್ಯ! ಎಂತಹ ಬಲ ಅದಕ್ಕೆ! ದೊಂದಿದ್ದರೆ ಮರ್ಯಾದೆಯನ್ನೂ ಳಗೊಂಡು ಲ್ಲವನ್ನೂ ಖರೀದಿಸಬಹುದು. ಹಣವಿದ್ದ ನ ಬಳಿ, ಮಣ್ಣಿನಲ್ಲಿ ತೆವಳುತ್ತಾ ಜನ ರುತ್ತಾರೆ. ನಾನು ಬಹಳ ಸಮಯ ್ಯಯಮಾಡಿಬಿಟ್ಟೆ. ಮೊದಲೇ ಇದನ್ನು ರಿಸಿಕೊಳ್ಳಬೇಕಾಗಿತ್ತು' ಎಂದು ಮನಸ್ಸಿ ಲ್ಲೇ ಲೆಕ್ಕಹಾಕುತ್ತಾ, ಅವನು ದೇವಕನ್ನಿಕೆ ಲ್ಲಿ 'ಐಶ್ವರ್ಯ'ವನ್ನು ಬೇಡಿದ. ಅವಳು ತಥಾಸ್ತು' ಎಂದಳು.

ಮೂರು ವರ್ಷ ಕಳೆಯಿತು. ಒಂದು ದಿನ ವನು ಒಂಟಿಯಾಗಿ ನಡುಗುತ್ತಾ ಮನೆಯ ಟ್ಟದ ಮೇಲೆ ಕುಳಿತಿದ್ದ – ಕುಳಿಬಿದ್ದ ಣ್ಣುಗಳು, ಬಕ್ಕತಲೆ, ನೆಂಗೆ ಕಟ್ಟಿದ ಪೋಲಗಳು, ಹರಕಲು ಬಟ್ಟೆ.

"ಪ್ರಾಪಂಚಿಕ ಕೊಡುಗೆಗಳಿಗೆಲ್ಲಾ ಧಿಕ್ಕಾರ. ಇವೆಲ್ಲಾ ಮಿಥ್ಯೆ. ಇವೆಲ್ಲಾ ಕೊಡುಗೆಗಳಲ್ಲ ಎರವಲಾಗಿ ಕೊಟ್ಟಂತಹವು. ಶಾಶ್ವತ ಎಂದು ಭ್ರಮೆ ಹುಟ್ಟಿಸುವ ತಾತ್ಕಾಲಿಕ ಅಂಶಗಳು. ಶಾಶ್ವತವೂ, ಸಹಜವೂ ಆದ ದುಃಖ, ನೋವು, ದಾರಿದ್ರ್ಯ, ಅವಮಾನ ಇವುಗಳಿಗೆ ತಾತ್ಕಾಲಿಕ ಮರುವೇಷವೇ ಯಶಸ್ಸು, ಪ್ರೇಮ, ಐಶ್ವರ್ಯ, ಭೋಗ ಇವೆಲ್ಲಾ. ನನಗೆ ಕನಸಿಲ್ಲದ ಸುಖ ನಿದ್ದೆ ಬೇಕು; ನನಗೆ ವಿಶ್ರಾಂತಿ ಬೇಕು' ಎಂದು ತನಗೆ ತಾನೇ ಹೇಳಿಕೊಂಡ.

ದೇವಕನ್ನಿಕೆ ಪುನಃ ಬಂದಳು. ಅವುಗಳಲ್ಲಿ ನಾಲ್ಕು ವರಗಳಿದ್ದವು. 'ಮೃತ್ಯು'ವಿರಲಿಲ್ಲ. 'ನಾನು ಅದನ್ನು ಒಂದು ಮಗುವಿಗೆ ಕೊಟ್ಟೆ. ಪಾಪ! ಏನೂ ತಿಳಿಯದ ಮುಗ್ಧ ಮಗು. ಆದರೆ ಅದು ನನ್ನಲ್ಲಿ ನಂಬಿಕೆ ಇಟ್ಟು 'ನೀನೇ ನನ್ನ ಪರವಾಗಿ ಆರಿಸಿ ವರ ಕೊಡು ಎಂದು ಹೇಳಿತು. ಆದರೆ ನೀನು ಹಾಗೆ ಮಾಡಲಿಲ್ಲ' ಎಂದಳು ದೇವಕನ್ನಿಕೆ.

'ಅಯ್ಯೋ! ಎಂತಹ ದುರವಸ್ಥೆ. ನನಗೇನು ಉಳಿದಿದೆ?'

'ಮುದಿತನ ಪಡೆಯುವ ಮುಖಭಂಗ— ಅದಕ್ಕೂ ನಿನಗೆ ಯೋಗ್ಯತೆ ಇಲ್ಲ?' ಎಂದಳು ದೇವಕನ್ನಿಕೆ.

ಕಡೆಯದಾಗಿ: ಸಭಿಕರಿಗೆ ಬೇಜಾರಾಗಿದೆ ಎಂದು ತಿಳಿದಾಗ ಉಪನ್ಯಾಸಕರು ಅವರಲ್ಲಿ ಗೆಲುವನ್ನು ತರಲು ಉಪಯೋಗಿಸುವ ಪದ. ಹೀಗೆ ಗೆಲುವನ್ನೂ ಸಮಾಧಾನವನ್ನೂ ಮತ್ತೆ ಮತ್ತೆ ಅರಳಿಸುವರು.

ರೋಗಿ: ವೈದ್ಯರನ್ನು ಬದುಕಿಸುವ ಮಹಾತ್ಮ.

ನಾ. ಕ. ಅವರ ಅನರ್ಥಕೋಶದಿಂದ

ಮಮತೆ

ಮಾಧವರಾವ್ ಮುಧೋಳ್
"ರಮಾಶ್ರೀ", ೧೧೬೬–ಬಿ ೧,
೨ನೇ ಹಂತ, ಶ್ರೀರಾಮಪುರ
ಮೈಸೂರು ೫೭೦ ೦೨೩

ಮಿಸೆಸ್ ಘೋಷ್ ಬಹಳ ಶ್ರೀಮಂತರು. ವಿಶಾಲವಾದ ಭವ್ಯಬಂಗಲೆಯಲ್ಲಿ ಅವರು ಒಬ್ಬರೇ ಇರುತ್ತಿದ್ದರು. ಅವರಿಗೆ ಒಬ್ಬನೇ ಮಗ. ಅವನು ಒಬ್ಬ ಬೆಂಗಾಲಿ ಹುಡುಗಿಯನ್ನು ಮದುವೆಯಾಗಿ ಕೆನಡಾ ದೇಶದಲ್ಲಿ ವಾಸವಾಗಿದ್ದ. ಅವನನ್ನು ಅಲ್ಲಿ ಯಾರೋ ಕೊಲೆ ಮಾಡಿದರು. ಅಂದಿನಿಂದ ಮಿಸೆಸ್ ಘೋಷ್‌ರ ಜೀವನಕ್ಕೆ ಯಾವ ಗುರಿಯೂ ಇಲ್ಲದಂತಾಯಿತು. ಅವರು ತಮ್ಮ ಮಗನನ್ನು ಉಣಿಸಿ ತಿನಿಸಿ ತೊಡಿಸಿ ಚೆನ್ನಾಗಿ ಬೆಳೆಸಿದ್ದರು. ಅವನ ಎಲ್ಲ ಇಚ್ಛೆಗಳನ್ನು ಪೂರೈಸಿ, ಅವನನ್ನು ಸಂತೋಷದಿಂದಿರಿಸುವುದೇ ತಮ್ಮ ಕರ್ತವ್ಯವೆಂದೆಣಿಸಿದ್ದರು. ಎಂದೂ ಅವನ ಮಾತಿಗೆ ಬೇರೆ ಹೇಳುತ್ತಲೇ ಇರಲಿಲ್ಲ. ಮಿಸ್ಟರ್ ಘೋಷರು ಬದುಕಿರುವವರೆಗೆ, ಅವರಿಗೆ ಏಕಾಕಿತನದ ಕಲ್ಪನೆಯೇ ಬಂದಿರಲಿಲ್ಲ. ಯಜಮಾನರ ಸಾವು, ಅವರ ಜೀವನವನ್ನೇ ಹಿಂಡಿತು. ಒಂದು ಕಡೆಗೆ ತರುಣ ಮಗನ ಮೃತ್ಯು, ಇನ್ನೊಂದು ಕಡೆ ಪತಿವಿಯೋಗ. ಅವರನ್ನು ಅರೆ ಹುಚ್ಚರನ್ನಾಗಿ ಮಾಡಿದವು. ಈಗಂತು ಅವರು ಯಾವ ತರುಣರನ್ನು ಕಂಡರೂ ಅವ
ತಮ್ಮ ಮಗನ ರೂಪವನ್ನೇ ಕಾ
ತ್ತಿದ್ದರು. ಅವರೊಡನೆ ಅಕ್ಕರೆಯಿಂದ
ಯುತ್ತಿದ್ದರು. ಈ ವರ್ತನೆಯನ್ನು ಕಂ
ಜನರಿಗೆ ಸಂಶಯ ಬರುವಂತಾಗುತ್ತಿತ
ಈ ಇಳಿ ವಯಃಸ್ಸಿನ ಹೆಂಗಸು ತರುಣ
ಇಷ್ಟೇಕೆ ಆಸ್ಥೆವಹಿಸುತ್ತಿದ್ದಾಳೆಂದು ಅ
ತ್ತಿದ್ದರು.

ಒಂದು ಸಂಜೆ ಅವರು ತಮ್ಮ
ಗೆಲಸದ ಹಿರಿಯಳೊಡನೆ ತಮ್ಮ ಬಂ
ಎದುರು ಹುಲ್ಲು ಬೈಲಿನಲ್ಲಿ ಕುಳಿತಿದ್ದ
ಆಗ ಹೊರಗೆ ಬೀದಿಯಲ್ಲಿ ಯಾರೋ
ಹೋಗುತ್ತಿದ್ದ ಶಬ್ದವಾಯಿತು. ಜೆ
ಭಯಾನಕ ಕೂಗೂ ಕೇಳಿ ಬಂತು. ಅ
ತಮ್ಮ ಟಾರ್ಚ್ ತರಿಸಿಕೊಂಡು ಹೆ
ಬಂದು ನೋಡಿದರು. ಬೀದಿಯಲ್ಲಿ
ಬಂಗಲೆಯ ಸ್ವಲ್ಪ ದೂರದಲ್ಲಿಯೇ
ದೇಹ ಬಿದ್ದಿರುವುದು ಕಂಡಿತು. ಅ
ನೋಡುತ್ತಲೂ ಅವರು ಕಿರುಚಿಕೊಂ

"ಏನಾಯಿತು ಅಮ್ಮಾವ್ರೇ?"
ಕೆಲಸದವಳು ಓಡಿ ಬಂದು ಕೇಳ

ಮೂಲ: ಶ್ರೀಮತಿ ಅನ್ವರ್ ಸುಜಹತ್, ಅವರ 'ಮಮ್ತಾ' ಉರ್ದು ಕಥೆ.

ೕಮತಿ ಘೋಷ್ ಬಿದ್ದಿರುವ ದೇಹದತ್ತ ರಳು ಮಾಡಿದರು. ಅದನ್ನು ಕಂಡು ಕೆಲಸ ವಳೂ ಭಯಭೀತಳಾದಳು. "ಅಮ್ಮಾವ್ರೇ! ಾವು ಪೋಲಿಸರಿಗೆ ಫೋನ್ ಮಾಡಿ" ಂದು ನುಡಿದಳು.

ಮಿಸೆಸ್ ಘೋಷ್ ಟಾರ್ಚ್ ಬೆಳಕಿನಲ್ಲಿ ೋಡಿದರು. ಬಿದ್ದವನು ಒಬ್ಬ ತರುಣ ಾಗಿದ್ದ. ಅವನ ಸೊಂಟದಲ್ಲಿ ಚಾಕುವಿ ಂದ ಇರಿಯಲಾಗಿತ್ತು.

ಅವರು ಆತುರಾತುರವಾಗಿ ತಮ್ಮ ಂಗಲೆಗೆ ಬಂದು ಪೋಲಿಸ್ ಠಾಣೆಗೆ ೋನ್ ಮಾಡಿದರು. ತುಸು ಸಮಯದಲ್ಲಿ ೋಲಿಸರು ಅಲ್ಲಿಗೆ ಧಾವಿಸಿದರು. ತರುಣ ಗೆ ಇನ್ನೂ ಉಸಿರಿತ್ತು. ತಕ್ಷಣ ಪೋಲಿಸರು ವನನ್ನು ಆಸ್ಪತ್ರೆಗೆ ಸೇರಿಸಿದರು.

ಶ್ರೀಮತಿ ಘೋಷ್‌ರು ತಮ್ಮ ಕಾರಿನಲ್ಲಿ ೋಲೀಸರೊಡನೆ ಆಸ್ಪತ್ರೆಗೆ ತೆರಳಿದರು. ೋಲಿಸರಿಗೂ ಹೇಗೂ ಶ್ರೀಮತಿ ಘೋಷರ ೇಳಿಕೆ ಪಡೆಯಬೇಕಿತ್ತು. ಅದಕ್ಕಾಗಿ ವರೂ ಇವರನ್ನು ತಮ್ಮ ಜೊತೆಗಿರು ುದೇ ಯೋಗ್ಯವೆಂದರು. ಅದರೆ ಶ್ರೀಮತಿ ೋಷ್‌ರಿಗೆ ಆ ತರುಣನಲ್ಲಿ ಅಸಕ್ತಿ. ವನು ಬದುಕುಳಿಯುವುದನ್ನು ಅವರು ೋಡಬಯಸಿದ್ದರು.

ಪೋಲಿಸರು ತರುಣನನ್ನು ತುರ್ತು ಿಕಿತ್ಸೆಗೆ ಸೇರಿಸಿದರು. ವೈದ್ಯರು ತಕ್ಷಣ ರೀಕ್ಷೆ ಶುಶ್ರೂಷೆಗೆ ತೊಡಗಿದರು. ್ರೀಮತಿ ಘೋಷ್‌ರು ತುರ್ತುವಾರ್ಡಿನ ೊರಗಡೆ ರೂಮಿನಲ್ಲಿ ಕುಳಿತಿದ್ದರು. ುಹಳ ಹೊತ್ತಿನ ಮೇಲೆ ಒಬ್ಬ ವೈದ್ಯರು ೊರಗೆ ಬಂದು,

"ಈಗ ಪೋಲೀಸರು ಸೇರಿಸಿದ ಪೇಷಂಟಿನ ೊಡೆ ಬಂದವರು ನೀವೇ?" ಎಂದರು.

"ಹೌದು! ಏನು ವಿಷಯ ಹೇಳಿ?"

"ಅವನಿಗೆ ಸಾಕಷ್ಟು ರಕ್ತಶ್ರಾವ ಆಗಿದೆ. ಅದಕ್ಕೆ ರಕ್ತದ ಆವಶ್ಯಕತೆ ಇದೆ" ಎಂದರು ಡಾಕ್ಟರು.

"ತಾವು ರಕ್ತವನ್ನು ಬ್ಲಡ್ ಬ್ಯಾಂಕಿನಿಂದ ತರಿಸಿಕೊಳ್ಳಿ. ಖರ್ಚು ನಾನು ಕೊಡುವೆ" ಎಂದರು ಶ್ರೀಮತಿ ಘೋಷ್, "ನನ್ನ ರಕ್ತ ಅವನ ರಕ್ತಕ್ಕೆ ಸರಿಹೋಗುತ್ತಿದ್ದರೆ, ನನ್ನ ರಕ್ತವನ್ನೇ ನಾನು ಅವನಿಗೆ ಕೊಡಲು ಸಿದ್ಧ" ಎಂದೂ ಹೇಳಿದರು.

ಶ್ರೀಮತಿ ಘೋಷ್‌ರವರ ವಯಸ್ಸು ಐವತ್ತೈದರಿಂದ ಅರುವತ್ತು ವರ್ಷದೊಳಗಿದ್ದಿತು. ಅದಕ್ಕೆ ಡಾಕ್ಟರು, ಅವರ ರಕ್ತವನ್ನು ತೆಗೆದುಕೊಳ್ಳುವುದಕ್ಕೆ ಸಮ್ಮತಿಸಲಿಲ್ಲ. ರಕ್ತವನ್ನು ಹೊರಗಿನಿಂದ ತರಿಸಿಕೊಳ್ಳಲಾಯಿತು. ಪೇಷಂಟಿಗೆ ಅದನ್ನು ಕೊಡುವುದಕ್ಕೆ ವ್ಯವಸ್ಥೆಯಾಯಿತು. ಆಪರೇಷನ್ ಆದ ತರುವಾಯ, ಡಾಕ್ಟರ್ ಹೊರಗೆ ಬಂದು, ಮಿಸೆಸ್ ಘೋಷ್ ಅವರಿಗೆ,

"ಶುಭಾಶಯಗಳು! ಆಪರೇಷನ್ ಯಶಸ್ವಿಯಾಗಿದೆ. ಬೆಳಗಿನ ಹೊತ್ತಿಗೆ ಪೇಷಂಟಿಗೆ ಎಚ್ಚರ ಬರಬೇಕು. ಚಾಕು ದೇಹದಲ್ಲಿ ತುಂಬಾ ಆಳವಾಗಿ ಇಳಿದಿರಲಿಲ್ಲ" ಎಂದರು.

ಶ್ರೀಮತಿ ಘೋಷ್‌ಗೆ ಸ್ವಂತ ಅವರ ಮಗನೇ ಜೀವದಿಂದ ಎದ್ದಷ್ಟು ಸಂತೋಷವಾಯಿತು. ಅವರು ಡಾಕ್ಟರಿಗೆ,

"ನಾನು ಪೇಷಂಟನ್ನು ನೋಡಬಹುದೆ; ಡಾಕ್ಟರ್!?" ಎಂದರು.

"ತಾವು ಬೆಳಗ್ಗೆ ಬಂದು ಅವನನ್ನು ನೋಡಿ. ಈಗ ಅವನಿಗೆ ತುಂಬಾ ವಿಶ್ರಾಂತಿ ಬೇಕು."

ರಾತ್ರಿಯನ್ನು ಅದು ಹೇಗೆ ಅವರು ಕಳೆದರೊ! ಸ್ವಂತ ತಮ್ಮ ಮಗನೇ ಗಾಯಗೊಂಡು ಆಸ್ಪತ್ರೆಯಲ್ಲಿ ಮಲಗಿದ್ದಾನೆಂದು ಶ್ರೀಮತಿ ಘೋಷ್‌ರಿಗೆ ಅನಿಸಿತ್ತು.

ಬೆಳಗಾಗುತ್ತಲು ಎಲ್ಲವಕ್ಕೂ ಮೊದಲು ಅವರು ಆಸ್ಪತ್ರೆಗೆ ಫೋನ್ ಮಾಡಿ, "ಏನು ಪೇಷಂಟಿಗೆ ಎಚ್ಚರ ಬಂದಿದೆಯೆ?" ಎಂದು ಕೇಳಿದರು.

ಉತ್ತರವಾಗಿ, ಆಸ್ಪತ್ರೆಯ ದಾದಿ, "ಇನ್ನೂ ಪೂರ್ತಿಯಾಗಿ ಎಚ್ಚರ ಬಂದಿಲ್ಲ. ರಕ್ತ ತುಂಬಾ ಹೋದುದರಿಂದ ಅವರಿಗೆ ಬಹಳ ಆಯಾಸವಾಗಿದೆ. ಆದರೆ ಏನೂ ತೊಂದರೆಯಿಲ್ಲ" ಎಂದು ನುಡಿದಳು.

ಶ್ರೀಮತಿ ಘೋಷ್ ಬೇಗನೆ ಬೆಳಗಿನ ಉಪಾಹಾರ ಮುಗಿಸಿಕೊಂಡು ಸ್ವಲ್ಪ ಹಣವನ್ನು ಪರ್ಸಿನಲ್ಲಿ ಹಾಕಿಕೊಂಡು ಆಸ್ಪತ್ರೆಗೆ ನಡೆದರು. ಇಬ್ಬರು ಪೋಲಿಸರು ಕೊಠಡಿಯ ಹೊರಗಡೆಗೆ ಪೇಷಂಟಿನ ಹೇಳಿಕೆಯನ್ನು ತೆಗೆದುಕೊಳ್ಳಲು ಕಾದು ಕುಳಿತಿದ್ದರು. ಶ್ರೀಮತಿ ಘೋಷ್‌ರನ್ನು ನೋಡುತ್ತಲು ಅವರು ಎದ್ದು ನಿಂತು,

"ಮ್ಯಾಡಮ್! ಈ ಹುಡುಗ ತಮಗೇನಾಗಬೇಕು? ನಿಮಗೂ ಅವನಿಗೂ ಏನು ಸಂಬಂಧ?" ಎಂದರು.

ಶ್ರೀಮತಿ ಘೋಷ್ ಸ್ವಲ್ಪ ಖಾರವಾಗಿಯೆ, "ನಾನು ಇವನಿಗೆ ಹೇಗೆ ಸಂಬಂಧವೆಂಬುದು ಮಹತ್ವದ ವಿಷಯವಲ್ಲ. ಮಹತ್ವವಿರುವುದು ಅವನ ಜೀವ. ಮನುಷ್ಯ ತನ್ನ ಮನಸ್ಸಿನಲ್ಲಿ ತನಗಾಗುವ ನೋವು ಬೇರೆಯವರಿಗೂ ಆಗುತ್ತದೆ ಎಂದುಕೊಂಡರೆ ಯಾರು ಯಾರನ್ನೂ ಕೊಲೆಮಾಡರು ಮತ್ತು ಯಾರಿಗೂ ವೈರಿಯೂ ಆಗಲಾರರು. ಇವನು ನನ್ನ ಮನೆಯ ಹೊ
ಗಡೆ ಗಾಯಗೊಂಡು ಬಿದ್ದಿದ್ದ. ಯಾ
ಕೊಲೆಗಡುಕ ಇವನನ್ನು ಚಾಕುವಿನಿ
ಇರಿದು ಹೋದನೋ ತಿಳಿಯದು. ನಾ
ಇವನ ಕೂಗು ಕೇಳಿದೆ. ಗಾಯದಿಂ
ನರಳುವ ವೇದನೆಯನ್ನು ಕಂಡೆ. ಕೂಡ
ಪೋಲಿಸರಿಗೆ ಫೋನ್ ಮಾಡಿ ಕ
ಕೊಂಡೆ. ಮಾನವತೆಯ ದೃಷ್ಟಿಯಿಂದ
ಗಾಯಗೊಂಡವನು ನನಗೆ ಎಲ್ಲ
ಯಿಂದಲೂ ಸಂಬಂಧಿಕನು. ಕೆಲವು ವ
ಗಳ ಕೆಳಗೆ ನನ್ನ ಒಬ್ಬನೇ ಮಗನ
ಕೆನೆಡಾದಲ್ಲಿ, ಇದೇ ರೀತಿ ಇರಿದು ಹೊ
ದ್ದರು. ಯಾರೂ ಗಾಯಗೊಂಡ
ಮಗನಿಗೆ ಸಹಾಯ ಮಾಡಲಿ
ಪೋಲಿಸರೂ ತಡವಾಗಿಯೇ ಬಂದಿದ್ದ
ನನ್ನ ಮಗ ವಿಲಿವಿಲಿ ಒದ್ದಾಡಿ,
ನೀಗಿದ್ದ. ಆ ದುಃಖವನ್ನು ಇನ್ನೂ ನನ
ಮರೆಯುವುದಕ್ಕಾಗಿಲ್ಲ. ಈ ಘಟನೆ
ಎಷ್ಟೋ ವರ್ಷಗಳಾಗಿ ಹೋಗಿವೆ.
ಮಗನ ಅಂತ್ಯವಾದ ಮೇಲೆ, ಪ್ರತಿ
ಗೊಂಡ ಮನುಷ್ಯನೂ ನನಗೆ ನನ್ನ
ನಾಗಿಯೇ ತೋರುತ್ತಾನೆ." ಇಷ್ಟು
ಶ್ರೀಮತಿ ಘೋಷ್ ಬಿಕ್ಕಿ ಬಿಕ್ಕಿ ಅ
ಗಿದರು. ಪೋಲಿಸರು ಸ್ತಬ್ಧರಾಗಿ ನಿ
ಇನ್ನೂ ಶ್ರೀಮತಿ ಘೋಷರು
ಕಣ್ಣೀರನ್ನು ಒರಸಿಕೊಳ್ಳುತ್ತಲೇ ಇ
ಅಷ್ಟರಲ್ಲಿ ಡಾಕ್ಟರೊಬ್ಬರು
ಬಂದು,

"ಮ್ಯಾಡಮ್! ತಾವು ಹೋಗಿ
ಯನ್ನು ನೋಡಬಹುದು. ಅವನಿ
ಬಂದಿದೆ" ಎಂದು ಹೇಳಿದರು.

ಕೇಳುತ್ತಲೂ ಪೋಲಿಸರು ಥಟ್ಟನೆ,

ಡಾಕ್ಟರ್ ಸಾಹೇಬರೆ? ನಾವು
ದಲು ರೋಗಿಯ ಹೇಳಿಕೆ ತೆಗೆದು
ಸ್ಬಿತ್ತೇವೆ" ಎಂದರು.

ಈ ವಿಷಯವಾಗಿ ಈಗ ತಾವು ಇನ್ನೂ
ನನ್ನು ಕಾಣಲಾಗುವುದಿಲ್ಲ. ಏಕೆಂದರೆ
ಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುವಷ್ಟು
ಜ್ಞೆ ಬಂದಿಲ್ಲ ಅವನಿಗೆ. ಅದಕ್ಕಾಗಿ
ದಲು ಈ ಮ್ಯಾಡಮ್ ಅವರು ಹೋಗಿ
ನನ್ನು ನೋಡಲಿ. ಆಮೇಲೆ ನೀವೂ
ನನ್ನು ಭೇಟಿಯಾಗಬಹುದು" ಎಂದು
ಳಿದರು.

ಶ್ರೀಮತಿ ಘೋಷ್ ಒಳಗಡೆಗೆ ಹೋಗಿ
ೋಡಿದರು. ಹುಡುಗನಿಗೆ ಸಂಪೂರ್ಣ
ಜ್ಞೆ ಬಂದಿತ್ತು. ಅವರು ರೋಗಿಯ
ತ್ರ ಹಾಸಿಗೆಯ ಮೇಲೆ ಕುಳಿತು ಬಹಳ
ತಃಕರಣದಿಂದ ಅವನ ತಲೆಯ ಮೇಲೆ
ಇರಿಸಿ,

"ಮಗು! ಈಗ ನಿನಗೆ ಹೇಗೆ ಅನಿಸು
ದೆ?" ಎಂದು ಕೇಳಿದರು.

"ಅಮ್ಮಾ! ನಾನೀಗ ಸರಿಯಾಗಿದ್ದೇನೆ"
ದು ಬಹಳ ಕ್ಷೀಣಧ್ವನಿಯಲ್ಲಿ ಹುಡುಗ
ತ್ತರಿಸಿದ.

ಶ್ರೀಮತಿ ಘೋಷ್‌ರು ಮತ್ತೆ,

"ನಿನ್ನನ್ನು ಕೊಲ್ಲಲು ಪ್ರಯತ್ನಿಸಿದವರು
ರು?" ಎಂದು ಕೇಳಿದರು.

ಹುಡುಗ ಅವರ ಕಡೆಗೆ ನೋಡಿದ.
ವರು ಯಾರು ಅನ್ನುವುದು ನನಗೆ
ತ್ತಿಲ್ಲ" ಎಂದು ಹೇಳಿದ.

ಶ್ರೀಮತಿ ಘೋಷ್ ಸುಮ್ಮನಾದರು.
ೀತಿಯಿಂದ ಅವನ ತಲೆಯ ಮೇಲೆ ಕೈ
ಡಿಸುತ್ತಿದ್ದರು.

ಹುಡುಗ ಬಹಳ ಎಂದರೆ ಇಪ್ಪತ್ತು
ತ್ತೆರಡು ವರ್ಷದವನಿರಬೇಕು. ಅವರು
ತಮ್ಮ ಸ್ಮೃತಿಯಲ್ಲಿ ತಮ್ಮ ಮಗ ರಾಕೇಶ್
ನನ್ನು ನೋಡುತ್ತಿದ್ದರು. ಹುಡುಗನಿಗೆ
ಸಂಪೂರ್ಣ ಆರೋಗ್ಯ ಆಗುವವರೆಗೆ ಅವನ
ಹತ್ತಿರವೇ ಕುಳಿತಿರಬೇಕೆನಿಸಿತು ಅವರಿಗೆ.
ಅದೇ ಸಮಯಕ್ಕೆ ದಾದಿ ಬಂದು,

"ಮ್ಯಾಡಮ್ ಈಗ ತಾವು ಹೋಗ
ಬಹುದು. ಪೇಷಂಟಿಗೆ ವಿಶ್ರಾಂತಿಯ ಅವಶ್ಯ
ಕತೆ ಇದೆ" ಎಂದಳು.

ನಿರ್ವಾಹವಿಲ್ಲದೆ ಶ್ರೀಮತಿ ಘೋಷ್‌ರು
ಎದ್ದು ಹೊರಗೆ ಬಂದರು. ಅವರು ಹೊರಗೆ
ಬರುತ್ತಲೂ ಪೋಲಿಸಿನವರು ಹೇಳಿಕೆ
ತೆಗೆದುಕೊಳ್ಳಲು ಒಳಗೆ ಹೋದರು.
ಆಮೇಲೆ ಪೋಲಿಸಿನವರು ಹೊರಗೆ ಬಂದ
ಮೇಲೆ, ಅವರನ್ನು ಕೇಳಿದ್ದಕ್ಕೆ.

"ಈ ಹುಡುಗನಿಗೆ ಏನೂ ಗೊತ್ತಿಲ್ಲ.
ಇವನನ್ನು ಯಾರೋ ಅರಿಯದ ವೈರಿ ಇರಿ
ದಿದ್ದಾನೆ. ಈ ಹುಡುಗನ ಬಗ್ಗೆ ಪೋಲಿಸಿ
ನವರ ಹತ್ತಿರವೂ ಯಾವುದೂ ರಿಕಾರ್ಡ್
ಇಲ್ಲ. ಅದಕ್ಕಾಗಿ ಈ ಘಟನೆಯನ್ನು ಸ್ವಂತ
ದ್ವೇಷದ್ದೆಂದೇ ಹೇಳಬೇಕಾಗುತ್ತದೆ"
ಎಂದರು.

ಶ್ರೀಮತಿ ಘೋಷ್ ಅವರಿಗೆ ಹುಡುಗ
ಉಡಾಳನೂ ಕೇಡಿಯೂ ಆದ ತರುಣನಲ್ಲ
ವೆಂದು ಸಂತೋಷವಾಯಿತು. ಅವರು
ಶುಶ್ರೂಷೆ ಚೆನ್ನಾಗಿ ಆಗಲೆಂದು ಅವನನ್ನು
ಅಂದೇ ಸರ್ಕಾರಿ ಆಸ್ಪತ್ರೆಯಿಂದ, ಖಾಸಗಿ
ನರ್ಸಿಂಗ್ ಹೋಮಿಗೆ ಸೇರಿಸಿದರು. ಅಲ್ಲಿ
ಅವನನ್ನು ಸ್ವಂತ ಮಗನಂತೇ ಅವರು
ನೋಡಿಕೊಂಡರು. ಘೋಷ್‌ರ ಆಶೀರ್ವಾದ
ದಿಂದಲೂ, ಚೆನ್ನಾಗಿ ನೋಡಿಕೊಂಡುದದ
ರಿಂದಲೂ ಹುಡುಗ ಬೇಗ ಆರೋಗ್ಯವಂತ
ನಾದ. ಆಗ ಅವನು ಶ್ರೀಮತಿ ಘೋಷ್‌ರಿಗೆ,

"ನನ್ನ ತಂದೆ ತಾಯಿಗಳನ್ನು ಭಯೋತ್ಪಾದಕರು ಕೊಲೆ ಮಾಡಿದರು. ಮನೆಯ ಎಲ್ಲ ಸಾಮಾನುಗಳನ್ನು ದೋಚಿಕೊಂಡು ಹೋದರು. ಆಗ ನಾನು ಕಾಲೇಜ್ ಹಾಸ್ಟಲ್ಲಿನಲ್ಲಿದ್ದೆ. ದುರ್ಘಟನೆಯ ಸಮಾಚಾರ ತಿಳಿಯುತ್ತಲು ಮನೆಗೆ ಹೋದೆ. ಅಲ್ಲಿ ಎಲ್ಲ ಮುಗಿದೇ ಹೋಗಿತ್ತು. ನನ್ನ ಕುಟುಂಬವನ್ನು ನಿರ್ನಾಮಮಾಡುವುದಕ್ಕೆ ಯಾವ ವೈರಿಗಳು ಕಾದಿದ್ದರೋ ನನಗಂತೂ ತಿಳಿಯದು."

ಹುಡುಗ ತಾನು ಮುಸಲ್ಮಾನನೆಂದೂ, ತನ್ನ ಹೆಸರು ರಶೀದ್ ಎಂದೂ ಹೇಳಿದ. ಆದರೂ ಶ್ರೀಮತಿ ಘೋಷ್ ತಾವು ಹಿಂದುಗಳಾದರೂ ಈ ಮಾತಿಗೂ ಕಿಂಚಿತ್ತೂ ಮಹತ್ವ ಕೊಡಲಿಲ್ಲ. ಏಕೆಂದರೆ ಅವರಿಗೆ ಮಾನವತೆಯೇ ಎಲ್ಲ ಧರ್ಮಕ್ಕಿಂತಲೂ ಹೆಚ್ಚಿನದಾಗಿತ್ತು. ನರ್ಸಿಂಗ್ ಹೋಮಿನಿಂದ ಅವನನ್ನು ತಮ್ಮ ಮನೆಗೆ ಕರೆತಂದರು.

"ಮಗು! ಇವತ್ತಿನಿಂದ ಈ ಮನೆ ನಿನ್ನದು. ನೀನು ಓದಬೇಕೆಂದಿದ್ದರೆ ಓದು. ನಿನ್ನ ಓದಿನ ಎಲ್ಲ ಖರ್ಚು ನನಗಿರಲಿ" ಎಂದರು.

ರಶೀದ್ ಶ್ರೀಮತಿ ಘೋಷ್‌ರನ್ನು ಕೃತಜ್ಞತೆಯಿಂದ ನೋಡಿದ. ಅವನು ಈಗಾಗಲೇ ಇವರ ಉಪಕಾರದ ಹೊರೆಯಿಂದ ಮಣಿದಿದ್ದ. ಅವರ ಮಾತನ್ನು ಕೇಳಿ ಅವನ ಕಣ್ಣುಗಳಲ್ಲಿ ನೀರೂರಿತು. ಅವನು ಅವರ ಪಾದದ ಮೇಲೆ ಬಾಗಿ,

"ಮ್ಯಾಡಮ್! ನೀವು ನನ್ನ ಮೇಲೆ ಇಷ್ಟು ಕೃತಜ್ಞತೆಯ ಹೊರೆಯನ್ನು ಏಕೆ ಹೊರಿಸುತ್ತಿದ್ದೀರಿ. ನನ್ನ ವಿಷಯವಂತೂ ತಮಗೆ ಏನು ಗೊತ್ತಿಲ್ಲ" ಎಂದ.

"ನೀನು ಏನೇ ಇದ್ದರೂ ಇವತ್ತಿ... ನನ್ನ ಮಗ" ಎಂದು ಮುಗುಳುನಗ... ಶ್ರೀಮತಿ ಘೋಷ್ ಉತ್ತರಿಸಿದರು.

ಅಂದಿನಿಂದ ರಶೀದ್ ಶ್ರೀಮತಿ ಘೋ... ಜೊತೆ ಇರತೊಡಗಿದ. ಈಗ ಅವನಿಗೆ ... ಕಳೆದುಕೊಂಡದ್ದು ಎಲ್ಲವೂ ಸಿಕ್ಕಿ... ತಾಯಿಯ ಮಮತೆ, ಮನೆಮಠ, ... ಯೊಂದು ರೀತಿಯ ಐಶ್ವರ್ಯದ ಸೌಕ... ಎಲ್ಲವೂ ಸಿಕ್ಕಿತು. ಶ್ರೀಮತಿ ಘೋ... ಆಶ್ರಯ ಸಿಕ್ಕಮೇಲೆ ರಶೀದ್ ಪ್ರ... ದಲ್ಲಿಯೇ ತಾನು ಬಹಳ ಅದೃಷ್ಟ... ಎಂದುಕೊಂಡ.

ಅವನು ಎಲ್ಲವನ್ನೂ ಮರೆತು, ... ಕಡೆಗೆ ಲಕ್ಷ್ಯಕೊಟ್ಟ. ಎರಡು ... ದಲ್ಲಿಯೇ ಬಿ.ಎಸ್.ಸಿ., ಪರೀಕ್ಷೆ... ಉತ್ತಮ ಸ್ಥಾನದಲ್ಲಿ ಉತ್ತೀರ್ಣನಾ...

ಬಿ.ಎಸ್‌ಸಿ., ಫಲಿತಾಂಶ ಬಂದೆ... ಒಂದು ದಿವಸ ಶ್ರೀಮತಿ ಘೋಷ್ ಅ...

"ಮಗು! ನನಗೀಗ ವಯಸ್ಸಾ... ಇಷ್ಟು ದೊಡ್ಡ ವ್ಯವಹಾರವಿದೆ. ಇ... ಈಗ ನಾನೊಬ್ಬಳೇ ಮಾಡುತ್ತಿ... ಇನ್ನು ಮೇಲೆ ಈ ವ್ಯವಹಾರವನ್ನು ... ವಹಿಸಿಕೊ. ಅಂದರೆ ನನ್ನ ಇಳಿ ವಯ... ಶಾಂತಿಯಿಂದ ಕಳೆಯುತ್ತೇನೆ. ... ನೀನೂ ಒಬ್ಬನೇ ಆಗಿದ್ದೀಯಾ. ... ನಿನಗೆ ಮದುವೆಮಾಡಿ, ಬೆಳದಿಂಗಳಂ... ಯನ್ನು ಮನೆಗೆ ತರಬೇಕೆಂದಿದ್ದೇನೆ... ಯಾವುದಾದರೂ ಒಪ್ಪಿಗೆಯಾದ ... ಇದ್ದರೆ ನನಗೆ ತಿಳಿಸು. ಆದರೆ ಅವ... ತಾಯಿಯರನ್ನು ಕಂಡು ... ಮಾತನ್ನು ನಿಶ್ಚಯಿಸುವೆ...." ಎಂ...

ರಶೀದ್ ನಾಚುತ್ತ,

"ಮಮ್ಮಿ! ಒಬ್ಬ ಹುಡುಗಿಯೇನೋ ನನಗೆ ಇಷ್ಟವಾಗಿದ್ದಾಳೆ. ಅವಳು ನನ್ನೊಡನೆ ಕಾಲೇಜಿನಲ್ಲಿ ಓದುತ್ತಿದ್ದಾಳೆ. ಒಂದೆರಡು ದಿವಸಗಳಲ್ಲಿ ಅವಳನ್ನು ನಿಮ್ಮ ಹತ್ತಿರ ಕರೆತರುವೆ. ಆದರೆ ಒಂದು ಮಾತು ಜ್ಞಾಪಕ ವಿರಲಿ. ಮಮ್ಮಿ! ಅವಳು ನಿಮಗೆ ಇಷ್ಟ ವಾದರೆ ಮಾತ್ರ ಅವಳನ್ನು ನಾನು ಮದುವೆ ಯಾಗುವೆ. ಇಲ್ಲದಿದ್ದರೆ, ನೀವು ಇಷ್ಟಪಟ್ಟ ಹುಡುಗಿಯೇ ಆಗಲಿ" ಎಂದು ಹೇಳಿದ.

"ಹುಡುಗಿ ನಿನ್ನ ಮನಸ್ಸಿಗೆ ಬಂದರೆ ಆಯಿತು. ನನಗೂ ಇಷ್ಟವೆಂದೇ ತಿಳಿ" ಎಂದು ಶ್ರೀಮತಿ ಘೋಷ್ ಮುಗುಳು ನಗುತ್ತ ಹೇಳಿದರು.

ಎರಡು ದಿವಸಗಳನಂತರವೇ ರಶೀದ್ ನಜಮಾಳನ್ನು ಶ್ರೀಮತಿ ಘೋಷರಿಗೆ ಭೇಟಿ ಮಾಡಿಸಲು ಕರೆತಂದ. ಶ್ರೀಮತಿ ಘೋಷರು, ರಶೀದ್‌ನನ್ನು ತಮ್ಮ ಮಗ ನೆಂದೇ ತಿಳಿದಿದ್ದರೆಂದು, ನಜಮಾಳಿಗೆ ಗೊತ್ತಿದ್ದಿತು. ಶ್ರೀಮತಿ ಘೋಷ್ ಹಿಂದೂ ಸ್ತ್ರೀಯಾದುದರಿಂದ, ನಜಮಾ ಅವರ ಪಾದ ಮುಟ್ಟಿ, ನಮಸ್ಕರಿಸ ಹೋದಳು. ಶ್ರೀಮತಿ ಘೋಷ್ ಕೂಡಲೇ ಹಿಂದಕ್ಕೆ ಸರಿದು,

"ಮಗು! ನಿಮ್ಮ ಮತದಲ್ಲಿ ಪಾದ ಮುಟ್ಟಿ ನಮಸ್ಕರಿಸುವ ಸಂಪ್ರದಾಯವಿಲ್ಲ ಅದು ನನಗೆ ಗೊತ್ತು. ನಿಮ್ಮ ಮತದಲ್ಲಿರು ವಂತೆ–ಎದ್ದು ನಿಂತು ನೀನು ನನಗೆ ನಮಸ್ಕಾರ ಮಾಡು ನೋಡು. ನೀನು ನನಗೆ ಇಷ್ಟವಾಗಿದ್ದೀಯೆ, ಅಷ್ಟು ಮಾತ್ರ ನಿನ್ನಾಗಿ ತಿಳಿದುಕೊ" ಎಂದರು.

ನಜಮಾ, ಲಜ್ಜೆಯಿಂದ ಶಿರಬಾಗಿ ನಮಸ್ಕರಿಸಿದಳು–ಶ್ರೀಮತಿ ಘೋಷ್ ಅವ ಳನ್ನು ಅಪ್ಪಿಕೊಂಡು,

"ಮಗೂ! ನಿನಗೆ ಆಶ್ಚರ್ಯವಾಗುತ್ತಿರ ಬಹುದು. ರಶೀದ್ ಮುಸಲ್ಮಾನ. ನಾನು ಹಿಂದು. ಆದರೂ ನಾನು ಅವನನ್ನು ನನ್ನ ಮಗನೆನ್ನುತ್ತೇನೆ. ಇದಕ್ಕೆ ಕಾರಣ, ರಶೀದ್‌ನಂತೆಯೇ ನನಗೊಬ್ಬ ಹರೆಯದ ಮಗನಿದ್ದ. ಅವನನ್ನು ಯಾರೋ ಕೊಲೆ ಮಾಡಿದರು....ಅವನ ಸಾವಿನ ನಂತರ ನಾನು ಏಕಾಂಗಿಯಾಗಿ ಬಿಟ್ಟಿದ್ದೆ. ಆಗ ರಶೀದ್ ನನಗೆ ಸಿಕ್ಕ. ಅವನನ್ನು ನೋಡು ತ್ತಲು ದೇವರು ನನ್ನ ಮಗನನ್ನು ರಶೀದ್‌ನ ರೂಪದಲ್ಲಿ ಕಳಿಸಿದ್ದಾನೆನಿಸಿತು. ಈಗ ಇವನೇ ನನಗೆ ಮಗ ಮತ್ತು ಇವನೇ ನನ್ನ ಸಕಲ ಆಸ್ತಿಗೆ ವಾರಸುದಾರ" ಎಂದು ಹೇಳಿದರು.

"ಆದರೆ ಆಂಟಿ! ರಶೀದ್ ಮುಸಲ್ಮಾನ" ಎಂದು ನಜಮಾ ನುಡಿದಳು.

"ಆದರೇನಾಯಿತು? ಮುಸಲ್ಮಾನರು ಮನುಷ್ಯರಲ್ಲವೆ? ನಾನು ಎಲ್ಲ ಮತ ಗಳನ್ನೂ ಗೌರವದಿಂದ ಕಾಣುತ್ತೇನೆ. ಎಲ್ಲ ಮತದ ಬೋಧನೆಯೂ ಒಂದೇ. ಆದರೆ ಸ್ವತಃ ನನಗೆ ಮಾನವ ಧರ್ಮದಲ್ಲಿ ಶ್ರದ್ಧೆ ಯಿದೆ. ಅದರಿಂದಾಗಿ ರಶೀದ್ ಮುಸಲ್ಮಾನ ನಾದರೆ ನನಗೆ ಅದರಿಂದ ಏನೂ ಚ್ಯುತಿ ಬಾರದು."

ಶ್ರೀಮತಿ ಘೋಷರ ಮಾನವೀಯತೆ ಮತ್ತು ವಿಶಾಲ ಮನೋಭಾವವನ್ನು ಕಂಡು ನಜಮಾಳ ಕಣ್ಣುಗಳಲ್ಲಿ ನೀರೂರಿ ದವು.

ಕಾಲೇಜಿನಲ್ಲಿ ರಶೀದ್‌ನ ಜೊತೆಗೆ ಇನ್ನೊಬ್ಬ ಹುಡುಗ ಅಷ್ರಫ್‌ನೂ ಅಭ್ಯಾಸ ಮಾಡುತ್ತಿದ್ದ. ಅಷ್ರಫ್ ಕೇಡಿಯಾಗಿರ ದಿದ್ದರೂ ಅವನ ಸ್ವಭಾವದ ವಿಷಯದಲ್ಲಿ

ರಶೀದ್‌ಗೆ ಸ್ವಲ್ಪ ಶಂಕೆಯಿತ್ತು. ಏಕೆಂದರೆ, ರಶೀದ್ ಹಾಸ್ಟೆಲ್ಲಿನಲ್ಲಿ ಇರುವಾಗಲೆಲ್ಲ, ಅಷ್ರಫ್ ಅವನನ್ನು ಯಾವಾಗಲೂ ಉದ್ರೇಕಿಸುತ್ತಿದ್ದ. ತಂದೆ ತಾಯಿಗಳ ಕೊಲೆಯ ಸೇಡು ತೀರಿಸಿಕೊಳ್ಳಲು ಹೇಳುತ್ತಿದ್ದ. ಯಾರು ಯಾರಮೇಲೆ ಸಂಶಯವಿದೆಯೋ ಅವರೆಲ್ಲರನ್ನೂ ಕೊಲೆಗೈಯಲು ಉದ್ರೇಕಿಸುತ್ತಿದ್ದ. ಈ ಉದ್ದೇಶವನ್ನು ಸಾಧಿಸಲು ರಶೀದ್‌ನಿಗೆ ಆಯುಧಗಳನ್ನು ಕೊಡಲೂ ಅವನು ಪ್ರಯತ್ನಿಸಿದ್ದ. ಒಂದು ಸಲ ರಶೀದ್ ಅವನನ್ನು,

"ಈ ಆಯುಧಗಳನ್ನು ನೀನು ಎಲ್ಲಿಂದ ತರುತ್ತಿ? ಎಂದು ಕೇಳಿಯೂ ಇದ್ದ.

"ಅದನ್ನು ಕಟ್ಟಿಕೊಂಡು ನೀನೇನು ಮಾಡುವಿ? ಅದಕ್ಕೂ ನಿನಗೂ ಏನೂ ಸಂಬಂಧವಿಲ್ಲ. ಸ್ಟೆನ್‌ಗನ್, ರಿವಾಲ್ವರ್, ಕೈ ಬಾಂಬು, ಒಟ್ಟಿನಲ್ಲಿ ನೀನು ಏನು ಹೇಳುತ್ತೀಯೋ ಅದೆಲ್ಲವನ್ನೂ ತಂದು ಕೊಡುವೆ. ನೀನು ಹೇಳಿದರೆ ನಿನ್ನ ಮನೆತನದ ಶತ್ರುಗಳನ್ನು ನಿರ್ನಾಮ ಮಾಡುವುದರಲ್ಲಿ, ನಿನಗೆ ಸಹಾಯಕನೂ ಆಗಬಲ್ಲೆ" ಎಂದು ಉತ್ತರಿಸಿದ್ದ.

ರಶೀದ್‌ಗೆ ಭಯೋತ್ಪಾದನೆಯೆಂದರೆ ಬಹಳ ತಿರಸ್ಕಾರವಿತ್ತು. ಅದರಿಂದಾಗಿ ಅವನು ಅಷ್ರಫ್‌ನ ಒತ್ತಾಯದ ಇಚ್ಛೆಯನ್ನು ಧಿಕ್ಕರಿಸಿದ್ದ. ಆಮೇಲೆ ಆತನಿಂದ ದೂರವೇ ಇರುತ್ತಿದ್ದ.

ನಜಮಾ ತುಂಬ ಚೆಲುವೆಯಾದ ಹುಡುಗಿ. ಅದರಿಂದಾಗಿ ಅಷ್ರಫ್ ಕೂಡ ಅವಳನ್ನು ಬಯಸುತ್ತಿದ್ದ. ರಷಿದ್ ತನ್ನ ಮಾತನ್ನು ತಿರಸ್ಕರಿಸಿದ ಮೇಲೆ ಅವನ ಬಗ್ಗೆ ಹೊಟ್ಟೇಕಿಚ್ಚು ಪ್ರಾರಂಭವಾಯಿತು.

ಮಿಸೆಸ್ ಘೋಷ್ ರಷಿದ್‌ನನ್ನು ತ
ಮಗನನ್ನಾಗಿ ಮಾಡಿಕೊಂಡು, ತ
ಸರ್ವಸ್ವ ಆಸ್ತಿಯನ್ನು ಅವನ ಹೆ
ಮಾಡಿದ್ದು ತಿಳಿದು ಬಂದಾಗಲಂತೂ, ಅ
ಹೊಟ್ಟೆಯಲ್ಲಿ ಬೆಂಕಿಯನ್ನೇ ಹಾಕಿದ
ಯಿತು. ಆಮೇಲೆ ನಜಮಾ ರಶೀದ್‌ನ
ಪ್ರೀತಿಸುತ್ತಿರುವುದು, ಮದುವೆಯಾ
ತ್ತಿರುವುದೂ ಗೊತ್ತಾದ ಮೇಲಂತ
ಅವರಿಬ್ಬರ ವಿರುದ್ಧ ಇವರ ನರನಾಡಿಗ
ತಿರಸ್ಕಾರದ ನಂಜೇ ಹರಿಯತೊಡಗಿ
ಅವರಿಬ್ಬರ ಸಂತೋಷವನ್ನು ನುಚ್ಚುನು
ಮಾಡುವುದಾಗಿ ಅಷ್ರಫ್ ಪ್ರ
ಮಾಡಿದ.

ನಜಮಾಳನ್ನು ಕಂಡ ಒಂದು ವ
ನಂತರ ಅವಳ ತಂದೆ ತಾಯಿಗಳ
ಶ್ರೀಮತಿ ಘೋಷ್ ಭೇಟಿಯಾದ
ರಷಿದ್ ತಮ್ಮ ಸ್ವಂತ ಮಗ
ದಿದ್ದರೂ, ಅವನನ್ನು ತಾವು ತಮ್ಮ ಮ
ನ್ನಾಗಿಯೇ ಸ್ವೀಕರಿಸಿದ್ದಾರೆಂದು
ದಳು. ನಜಮಾನ ತಂದೆ ತಾಯಿ
ಸುಶಿಕ್ಷಿತರು, ಬಹಳ ಸಂಭಾವಿ
ಆಗಿದ್ದರು. ರಶೀದ್‌ನ ವಿಷಯ
ನಜಮಾ ಎಲ್ಲ ವಿಷಯಗಳನ್ನೂ ಅ
ತಿಳಿಸಿದ್ದಳು. ಹೀಗಾಗಿ ಅವರೂ ಕೂ
ಈ ಸಂಬಂಧವನ್ನು ಒಪ್ಪಿಕೊಂಡರು.
ದಿವಸಗಳನಂತರ ರಶೀದ್ ನ
ನಜಮಾರ ಮದುವೆ ಬಹಳ ವಿಜ
ಯಿಂದ ಜರಗಿತು. ಈ ಸಂದರ್ಭ
ಶ್ರೀಮತಿ ಘೋಷ್‌ರು ಉದಾ
ಖರ್ಚುಮಾಡಿದರು. ಆಮಂತ್ರಿತರ
ಪಂಗಡಗಳ ಜನರೂ ಸೇರಿದ್ದರು.
ಪಟ್ಟಣದಲ್ಲಿ ಒಬ್ಬ ಹಿಂದು

ುಸಲ್ಮಾನರ ಹುಡುಗನನ್ನು ತನ್ನ ಮಗ ನ್ನಾಗಿಯೂ ತನ್ನ ವಾರಸುದಾರನ ್ನಾಗಿಯೂ ಮಾಡಿಕೊಂಡರೆಂಬ ಚರ್ಚೆ ಡೆದಿತ್ತು. ರಾತ್ರಿ ಹನ್ನೊಂದು ಗಂಟೆಯು ಮಯಕ್ಕೆ ಬಂದಿದ್ದ ಅತಿಥಿಗಳೆಲ್ಲ ಹೊರಟು ಹೋದರು. ಆಗ ಶ್ರೀಮತಿ ಘೋಷರು, ಶೀದ್ ಮತ್ತು ನಜಮಾರ ಮಸ್ತಕವನ್ನು ತುಂಬಿಸಿ,

"ಮಕ್ಕಳೇ! ನೀವು ತುಂಬಾ ದಣಿದಿ ್ದೀರಿ. ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ" ಂದರು.

ರಶೀದ್ ಮತ್ತು ನಜಮಾರವರು ನಸು ಾಚಿ-ತಮ್ಮ ರೂಮಿನತ್ತ ಹೊರಡಲು ರುಗಿದೊಡನೆ, ಒಂದು ಜೀಪು ಬಂದು ಂತಿತು. ಅವರಿಬ್ಬರೂ ನಿಂತು ತಿರುಗಿ ೋಡಿದರು. ಜೀಪಿನಿಂದ ಒಬ್ಬ ಪೋಲಿಸ್ ರೀಕ್ಷಕ ಮತ್ತು ಕೆಲವು ಪೇದೆಗಳು ಇಳಿದು ್ರೀಮತಿ ಘೋಷ್‌ರ ಹತ್ತಿರ ಬಂದು,

"ಶ್ರೀಮತಿ ಘೋಷ್ ನೀವೇನಾ?" ಂದು ಪೋಲಿಸ್ ನಿರೀಕ್ಷಕ ಕೇಳಿದ.

"ಹೌದು! ಇನ್‌ಸ್ಪೆಕ್ಟರ್!! ವಿಷಯ ನು?" ಎಂದು ಸ್ವಲ್ಪ ಅಸಮಾಧಾನದ ್ವನಿಯಲ್ಲಿಯೇ, ಶ್ರೀಮತಿ ಘೋಷ್ ೇಳಿದರು.

"ರಶೀದ್ ಎಂಬ ಹೆಸರಿನ ಹುಡುಗ ಮ್ಮ ಹತ್ತಿರ ಇದ್ದಾನೆಯೆ?"

"ಹೌದು! ರಶೀದ್ ನನ್ನ ಮಗ. ಇಂದೇ ವನ ಮದುವೆಯಾಗಿದೆ" ಎಂದು ರಶೀದ್‌ನ ಡೆ ಕೈ ತೋರಿಸುತ್ತ ನುಡಿದರು.

"ಹಾಗಾದರೆ ನಾವು ರಶೀದ್‌ನನ್ನು ಂಧಿಸಿ ಹಿಡಿದುಕೊಂಡು ಹೋಗಲು ಂದಿರುವೆನೆಂದು ಬಹಳ ಅಸಮಾಧಾನದಿಂದ ೇಳಬೇಕಾಗಿದೆ, ಮ್ಯಾಡಮ್!"

"ರಷಿದ್‌ನನ್ನು ಹಿಡಿದುಕೊಂಡು ಹೋಗಲು ಬಂದಿರುವಿರಾ? ಯಾವ ಅಪರಾಧಕ್ಕಾಗಿ?" ಎಂದು ಭಯಗೊಂಡವರಂತೆ. ಹಿಂಜರಿದು ಶ್ರೀಮತಿ ಘೋಷ್ ಕೇಳಿದರು.

"ಭಯೋತ್ಪಾದಕರ ಗುಂಪಿನವರ ಜೊತೆಗೆ ರಶೀದ್‌ನ ಸಂಬಂಧವಿದೆ."

"ಇಲ್ಲಾ! ...." ಎಂದು ಶ್ರೀಮತಿ ಘೋಷ್ ಚೀರಿದರು. "ಇದು ಸುಳ್ಳು. ನನ್ನ ಮಗ ಭಯೋತ್ಪಾದಕನಾಗಲಾರ. ಇವನನ್ನು ನಾನು ಅನೇಕ ವರ್ಷಗಳಿಂದ ಕಂಡು ಅರಿತಿರುವೆ."

"ಕ್ಷಮಿಸಿ ಮ್ಯಾಡಮ್! ನಮ್ಮ ಹತ್ತಿರ ರಶೀದ್ ಭಯೋತ್ಪಾದಕನಿರುವನೆಂದು ಸಾಕ್ಷಿ ಪುರಾವೆಗಳಿವೆ."

ಇದೂವರೆಗೆ ಸುಮ್ಮನೇ ನಿಂತಿದ್ದ ರಶೀದ್ ಮುಂದೆ ಬಂದು, "ನಾನು ಭಯೋತ್ಪಾದಕನಾಗಿರುವೆನೆಂದು ನಿಮ್ಮ ಹತ್ತಿರ ಯಾವ ಆಧಾರವಿದೆ? ಎಂದು ಕೇಳಿದ.

"ನೀನು ಅಶ್ರಫ್‌ನನ್ನು ಬಲ್ಲೆಯಾ? ಎಂದು ಪೋಲಿಸ್ ಇನ್‌ಸ್ಪೆಕ್ಟರ್ ಕೇಳಿದ.

"ಹೂಂ!" ಎಂದು ತಲೆಯಾಡಿಸಿ ರಷಿದ್ ಹೇಳಿದ. "ಆದರೆ ಅವನು ನನ್ನ ಕಾಲೇಜಿನಲ್ಲಿ ಓದುತ್ತಿದ್ದ" ಎಂಬ ಮಟ್ಟಿಗೆ ನನಗೆ ಗೊತ್ತು."

"ಅಶ್ರಫ್ ಬಂಧಿಯಾಗಿದ್ದಾನೆ. ಅವನಿಂದ ಅನೇಕ ಅಪಾಯಕಾರಿ ಆಯುಧಗಳನ್ನು ವಶಪಡಿಸಿಕೊಳ್ಳಲಾಗಿದೆ. ನೀನು ಅವನ ಸಂಗಡಿಗನೆಂದು ಅವನೇ ಹೇಳಿದ. ನೀವಿಬ್ಬರೂ ಕೂಡಿಯೇ ಈ ಭಯೋತ್ಪಾದಕ ವೃತ್ತಿಯನ್ನು ಮಾಡುತ್ತೀರೆಂದು ಅವನು ಹೇಳಿಕೆಕೊಟ್ಟಿದ್ದಾನೆ."

ಈ ದೊಡ್ಡ ಅಪರಾಧವನ್ನು ಕೇಳುತ್ತಲೂ ರಶೀದ್ ದಿಗ್ಭ್ರಾಂತನಾಗಿ ನಿಂತುಕೊಂಡ. ಅವನ ಪಾದದಡಿಯ ನೆಲವೇ ಕುಸಿದಂತಾಯಿತು. ಅಷ್ರಫ್ ಹೀಗೇಕೆ ಮಾಡಿದನೆಂಬುದೇ ಅವನಿಗೆ ತಿಳಿಯದಾಯಿತು. ಅವನು ದುರ್ಬಲನಾದಂತಾಗಿ ಸೋತಹೆಜ್ಜೆಯಿಂದ ಶ್ರೀಮತಿ ಘೋಷ್‌ರ ಹತ್ತಿರ ಬಂದು, ಕೈಜೋಡಿಸಿ, ಅಳುತ್ತ,

"ಮಮ್ಮೀ! ನಾನು ನಿಜವಾಗಲೂ ನಿರಪರಾಧಿ. ನೀವು ನನ್ನನ್ನು ರಕ್ಷಿಸುತ್ತಾ ಬಂದಂದಿನಿಂದ ನಿಮ್ಮನ್ನು ನಾನು ನನ್ನ ತಾಯಿಯೆಂದೇ ತಿಳಿದಿದ್ದೀನೆ. ತಮ್ಮ ಮೇಲಿನ ಆಣೆಯಿಟ್ಟು ಹೇಳುವೆ, ನಾನು ಭಯೋತ್ಪಾದಕನಲ್ಲ. ನನಗಂತೂ ಈ 'ಭಯೋತ್ಪಾದಕ' ಶಬ್ದವೆಂದರೇ ತಿರಸ್ಕಾರ. ಅಷ್ರಫ್ ಯಾವುದೋ ದುರುದ್ದೇಶದಿಂದ ನನ್ನನ್ನು ಸಿಕ್ಕಿಸಿದ್ದಾನೆ" ಎಂದು ಹೇಳಿದ.

ಅವನ ತಲೆಯ ಮೇಲೆ ಕೈಯಾಡಿಸುತ್ತಾ ಶ್ರೀಮತಿ ಘೋಷರು,

"ಮಗು! ಅನುಭವವಿಲ್ಲದೇ ನನ್ನ ಕೂದಲು ಬೆಳ್ಳಗಾಗಿಲ್ಲ. ಇಷ್ಟು ದೊಡ್ಡ ಮೋಸ ನನ್ನ ಕಣ್ಣುಗಳಿಗೆ ಕಾಣಿಸದೇ ಇರುವುದಿಲ್ಲ. ನಾನು ಹಿತ್ತಾಳೆಯನ್ನು ಬಂಗಾ
ವೆಂದು ಎಂದೂ ಒಪ್ಪಿರಲಾರೆ. ನೀನು ನಿರ
ರಾಧಿಯೆಂಬುದು ನನಗೆ ಗೊತ್ತು. ನೀನ
ಚಿಂತಿಸಬೇಡ. ನೀನು ನಿರಪರಾಧಿಯೆಂಬ
ದನ್ನು ಸಿದ್ಧಪಡಿಸಲು ನಾನು ಕೋರ್ಟ
ಕಟಕಟೆ ಹತ್ತಲು ಎಂದೂ ಹಿಂಜರಿಯುವು
ದಿಲ್ಲ. ನೀನು ಎಳ್ಳಷ್ಟೂ ಚಿಂತಿಸಬೇಡ. ನಿನ
ರಕ್ಷಣೆಗಾಗಿ, ನಿನ್ನ ತಾಯಿ ಇನ್ನೂ ಬದು
ದ್ದಾಳೆ. ಹೋಗು ಕಾನೂನಿಗೆ ಮರ್ಯಾದ
ಕೊಟ್ಟು ಈಗ ನೀನು ಇನ್‌ಸ್ಪೆಕ್ಟರ್ ಜೊ
ಹೋಗು. ನಾಳೆಯೇ ನಿನ್ನನ್ನು ನಾ
ಜಾಮೀನಿನ ಮೇಲೆ ಬಿಡಿಸಿ ತರುವ
ಎಂದರು.

ರಶೀದ್ ಒಮ್ಮೆ ಆಶಾಪೂರಿತ ದೃ
ಯಿಂದ ತನ್ನ ಕೈಹಿಡಿದ ನವ ಮಡದಿ
ಕಡೆ ನೋಡಿದ. ಅವಳ ಕಣ್ಣುಗಳಲ್ಲಿ ಆ
ಭಯದಿಂದ ಕಣ್ಣೀರು ಉಕ್ಕುತ್ತಿತ್ತು
ಅವನು ಹೋಗಿ ಪೋಲಿಸ್ ಜೀಪಿನ
ಕುಳಿತ. ಅವನಿಗೆ ದೃಢವಿಶ್ವಾಸವಿತ್ತು
ತಾನು ಸತ್ಯವಂತ. ಸತ್ಯಕ್ಕೆ ಸಾವಿ
ಸತ್ಯಕ್ಕೆ ಜಯ ಖಂಡಿತ.

ಕಾಲೇಜು : ಅಪ್ಪನ ಆಸ್ತಿ ಕರಗಿಸಲು ಮಕ್ಕಳು ಸೇರಬೇಕಾದ ಸಂಸ್ಥೆ. ೬-೮ ವರ್ಷಗಳ ಕಾಲ ಶ್ರೀಮಂತರ ಮಕ್ಕಳು ಕಾಲಕ್ಷೇಪ ಮಾಡುವ ಸ್ಥಳ.

ಕಾಂಪೌಂಡ್ : ಚುನಾವಣೆ ಪ್ರಚಾರಕ್ಕೆ, ಅಶ್ಲೀಲ ದೂಷಣೆಗೆ, ಜಾಹಿರಾತುಗಳಿಗೆಂದೇ ಮಾಡಿಸಿದ ಗೋಡೆ.

(ನಾ. ಕಸ್ತೂರಿಯವರ ಅನರ್ಥಕೋಶದಿಂದ)

ಜಪಾನೀಯರ ಬಗ್ಗೆ ಈರ್ಷ್ಯೆ ಬೇಡ

ಟಿ. ಎಸ್. ಲಲಿತ
೭೦೩, ಮೊದಲನೆ ಮಹಡಿ,
೧೭ನೇ ಮೇನ್, ಸರಸ್ವತಿಪುರ
ಮೈಸೂರು-೫೭೦೦೦೯

ಯಾವುದೇ ನೈಸರ್ಗಿಕ ಸಂಪನ್ಮೂಲಗಳಿಲ್ಲದ ಪುಟ್ಟ ರಾಷ್ಟ್ರ ಜಪಾನ್. ಎರಡನೆ ವಿಶ್ವ ಸಮರದ ನಂತರ ಬಾಂಬ್ ದಾಳಿಗೆ ತುತ್ತಾಗಿ, ಸರ್ವನಾಶ ಹೊಂದಿದ್ದರೂ, ಫೀನಿಕ್ಸ್‌ನಂತೆ ಮತ್ತೆ ಎದ್ದು ನಿಂತಿದೆ. ಎಲೆಕ್ಟ್ರಾನಿಕ್ಸ್ ಉಪಕರಣಗಳ ತಯಾರಿಕೆಯಲ್ಲಿಂದು ವಿಶ್ವದ ಮಾನ್ಯತೆಗಳಿಸಿದೆ. ಜಪಾನೀಯರು ಕಷ್ಟಸಹಿಷ್ಣುಗಳು. ದೇಶಾಭಿಮಾನಿಗಳು ಆ ಜನ. ಹಾಗಾಗಿ ಜಪಾನಿಂದು ಶ್ರೀಮಂತ ದೇಶವೆನಿಸಿದೆ. ಜಪಾನಿನ ಸಿರಿವಂತಿಕೆಯನ್ನು ಕಂಡಾಗ, ಅದರ ಬಗ್ಗೆ ಈರ್ಷ್ಯೆ ತಾಳುವಂತಾಗುತ್ತದೆ. ಜಪಾನ್ ಶ್ರೀಮಂತ ರಾಷ್ಟ್ರವಾದರೂ, ಜಪಾನಿಯರು ಮಾತ್ರ, ನಾವು ಭಾರತೀಯರು ಎದುರಿಸುವಷ್ಟೇ ಸಮಸ್ಯೆಗಳೊಂದಿಗೇ ಜೀವನ ಸಾಗಿಸಬೇಕಾಗಿದೆ ಎಂದಾಗ ನಾಣ್ಯದ ಮತ್ತೊಂದು ಮುಖವನ್ನು ಕಾಣುತ್ತೇವೆ.

ಜಪಾನಿನಲ್ಲಿ ರೈಲುಗಳು ಸಮಯಕ್ಕೆ ಸರಿಯಾಗಿ ಓಡುತ್ತವೆ. ಅಲ್ಲಿನ ಸಬ್‌ವೇಗಳು ಅತ್ಯಂತ ಸುರಕ್ಷಿತ. ರಸ್ತೆಗಳು ಅತಿ ಸ್ವಚ್ಛ. ತಂತ್ರಜ್ಞಾನದಲ್ಲಿ ಜಪಾನ್ ವಿಶ್ವಕ್ಕೇ ಮುಂದಾಳು. ಎಲೆಕ್ಟ್ರಾನಿಕ್ಸ್ ಹಾಗೂ ಅಲ್ಲಿನ ಆಟೋಮೊಬೈಲ್ ಕೈಗಾರಿಕೆಗಳು ವಿಶ್ವದ ಅದ್ಭುತಗಳು. ಜಪಾನೀಯರು ನಿಜಕ್ಕೂ ಆರ್ಥಿಕ ಪವಾಡವನ್ನೇ ಸೃಷ್ಟಿಸಿದ್ದಾರೆ.

ನಾಣ್ಯಕ್ಕೆ ಮತ್ತೊಂದು ಮುಖವಿದೆ. ಜಗತ್ತಿನಲ್ಲೇ ಅತಿ ಹೆಚ್ಚಿನ ವರಮಾನ ಹೊಂದಿದ ರಾಷ್ಟ್ರಗಳಲ್ಲೊಂದೆನಿಸಿದರೂ, ತಮ್ಮ ಉತ್ತಮಗೊಳ್ಳದ ಜೀವನ ಮಟ್ಟದಿಂದಾಗಿ, ಜಪಾನಿಯರು ಬೇಸತ್ತಿದ್ದಾರೆ. ಅತಿ ದುಬಾರಿಯಾದ ಸಣ್ಣ ಮನೆಗಳು. ತಾವು ಕೆಲಸಮಾಡುವ ಸ್ಥಳಗಳಿಗೆ ಹೋಗಿಬರಲು ಕಿಕ್ಕಿರಿದ ವಾಹನಗಳಲ್ಲಿ ಪ್ರಯಾಣ. ಮಂಕುಕವಿದ ಕಛೇರಿಗಳಲ್ಲಿ, ಆಯಾಸದ ದುಡಿತ. ಸರ್ಕಾರ ಇದನ್ನು 'ಶ್ರೀಮಂತಿಕೆಯ ವಿರೋಧಾಭಾಸ' ಎಂದಿದೆ, 'ಶ್ರೀಮಂತ ಜಪಾನ್-ಬಡ ಜಪಾನೀಯರು.

ಅನೇಕರಿಗೆ ಪರಿಸ್ಥಿತಿ ನಿರಾಶಾದಾಯಕವಾಗಿದೆ. ಉದಾಹರಣೆಗೆ-ಪಶ್ಚಿಮ ಜಪಾನಿನ ಮಾಧ್ಯಮವರ್ಗದ ಕೆಲಸದಲ್ಲಿರುವ 'ವಿಯು

ಆಧಾರ: ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜೆಫ್ ಶಿಯರ್ ಅವರ "ಡೋಂಟ್ ಎನ್ವಿ ದಿ ಜಪಾನೀಸ್" ಲೇಖನದ ಅನುವಾದ.

ಕಾವ' ದಂಪತಿಗಳನ್ನೇ ತೆಗೆದುಕೊಳ್ಳೋಣ. ಇಬ್ಬರೂ ಸೇರಿ ವರ್ಷಕ್ಕೆ ಸುಮಾರು ೬ ಮಿಲಿಯನ್ 'ಯನ್'ಗಳನ್ನು ಸಂಪಾದಿಸುತ್ತಾರೆ. (ಸುಮಾರು ೯ ಲಕ್ಷ ರೂ.ಗಳು) ಮಧ್ಯ ಟೋಕಿಯೋದಿಂದ ೭೫ ನಿಮಿಷಗಳಲ್ಲಿ ಪ್ರಯಾಣಿಸಬಹುದಾದ ಅಂತರದಲ್ಲಿರುವ ಅವರ ಮನೆ ೪೩ ಚದರ ಮೀಟರುಗಳಿದ್ದು ಅಡಿಗೆ ಮನೆ (ಅಲ್ಲಿಯೇ ಊಟವನ್ನು ಮಾಡಬೇಕು) ಮಲಗುವ ಕೋಣೆ, ಸ್ನಾನಗೃಹ ಹಾಗೂ ವ್ಯಾಸಂಗದ ಕೋಣೆಗಳನ್ನೊಳಗೊಂಡಿರುತ್ತದೆ. ಶಯನ ಗೃಹ ಹಾಗೂ ವ್ಯಾಸಂಗದ ಕೊಠಡಿಗಳು ಕೇವಲ ೩.೫ ಮೀಟರ್ ಅಗಲವಿರುತ್ತವೆ. ಜಪಾನೀಯರು ಹಾಸ್ಯಕ್ಕಾಗಿ ತಮ್ಮ ಮನೆಗಳನ್ನು 'ಉಸಾಗಿ ಗೋಯು' ಎಂದರೆ 'ಮೊಲದ ಗೂಡೆಂದು' ಕರೆಯುತ್ತಾರೆ.

ಈ ಮನೆಗಾಗಿ ತಿಂಗಳಿಗೆ ಮಿಯಕಾವ ಕೊಡುವ ಬಾಡಿಗೆ ೧ ಲಕ್ಷ 'ಯನ್'ಗಳು. ಆರು ವರ್ಷದಷ್ಟು ಹಳೆಯದಾದ ತಮ್ಮ ಕಾರನ್ನು ಮನೆಯ ಮುಂದೆ ನಿಲ್ಲಿಸಲು 'ಪಾರ್ಕಿಂಗ್' ಜಾಗಕ್ಕಾಗಿ ಕೊಡಬೇಕಾದ್ದು ತಿಂಗಳಿಗೆ ೩೫೦ ರೂ.ಗಳಿಗೆ ಸಮನಾದಷ್ಟು 'ಯನ್'ಗಳು. ೪ ತಿಂಗಳ ಬಾಡಿಗೆಯಷ್ಟು ಹಣವನ್ನು ಸುರಕ್ಷಿತತೆಗಾಗಿ ಮುಂಗಡವಾಗಿ ಕೊಟ್ಟರೆ, ವಸತಿ ಗೃಹ ಬದಲಾವಣೆ ಮಾಡಿದಾಗ ಅವರಿಗೆ ಹಿಂದೆ ಸಿಗುವುದು ಕೇವಲ ಕೊಟ್ಟ ಹಣದ ಅರ್ಧದಷ್ಟು.

ಈ ಮನೆಗಳಲ್ಲಿ ನೀರು ಕಾಯಿಸುವ ಸೌಲಭ್ಯಗಳಿಲ್ಲದಿರಬಹುದು. ವಾಷರ್, ಡ್ರೈಯರ್, ಸ್ಟೌವ್, ಫ್ರಿಡ್ಜ್, ಏರ್ ಕಂಡೀಷನರ್ ಅಥವಾ ಸೆಂಟ್ರಲ್ ಹೀಟಿಂಗ್ ಸೌಲಭ್ಯ ಸಿಗದಿರಬಹುದು. ದಲ್ಲಾಳಿಗಳು

ಇಂಥ ಮನೆಗಳನ್ನು 'ಭವ್ಯ ಮಹಲು'ಗ
ಪಟ್ಟಿಗೆ ಸೇರಿಸಿದಾಗ, ಅಲ್ಲಿ ವ್ಯಂಗದ ಒಂದ
ತುಣುಕೂ ಕಂಡು ಬರುವುದಿಲ್ಲ.

ಪ್ರತಿಯೊಬ್ಬ ಜಪಾನೀಯನ ಪರ
ರಾಗತ ಕನಸಿನಂತೆ ಮಿಯಕಾವ ದಂಪ
ಗಳು ತಾವು ಎಂದಿಗೂ ಮನೆಕೊಳ್ಳಬ
ದೆಂಬ ಕನಸು ಕಾಣುವುದಿಲ್ಲ. ೭೫ ಚದ
ಮೀಟರ್ ಜಾಗ ಹೊಂದಿದ ಮನೆ
ಟೋಕಿಯೋದಲ್ಲಿ ಸುಮಾರು ೮೭ ಲ
ರೂ.ಗಳಾಗುತ್ತದೆ. ಬ್ಯಾಂಕ್ ಆ
ಜಪಾನ್‌ನ ೧೯೭೮ರ ಸರ್ವೆ ಪ್ರಕ
ಶೇ. ೩೩ರಷ್ಟು ಜಪಾನೀಯರು ತ
ಮನೆ ಕೊಳ್ಳುವುದಕ್ಕಾಗಿ ಹಣ ಉಳಿತಾ
ಮಾಡುತ್ತಿದ್ದೇವೆಂದೆ ಹೇಳಿದ್ದರು. ಆ
೧೯೮೮ರ ಹೊತ್ತಿಗೆ ಆ ಸಂಖ್ಯೆ ಕೇ
ಶೇ. ೧೯ಕ್ಕಿಳಿದಿತ್ತು.

ಜಪಾನೀಯರ ತೀರಾ ತಿರಸ್ಕಾ
ಪಾತ್ರವಾಗುವುದೆಂದರೆ ಅವರ ಸಂಚ
ವ್ಯವಸ್ಥೆ, ಕಛೇರಿಗಳಿಗೆ ಹೋಗುವ ಸಮ
ದಲ್ಲಂತೂ, ರೈಲುಗಳಲ್ಲಿ ಇರುವ ಸ್ಥ
ಕಾಶದ ಶೇಕಡಾ ೩೫೦ ಪಟ್ಟು ಜನ ತು
ತ್ತಾರೆ. ನೆಲಕ್ಕೆ ಕಾಲೂರಲೂ
ತ್ರಿಶಂಕುಸ್ಥಿತಿಯ ಅನುಭವ. 'ಸಬ್
ಆಳುಗಳು, ರೈಲಿನ ಬಾಗಿಲು ಮು
ವಂತಾದರೆ ಸಾಕೆನ್ನುವಂತೆ ಪ್ರಯಾ
ರನ್ನು ರೈಲಿನೊಳಗೆ ತುರುಕುತ್ತಾರೆ,
ದಿನವೂ ಪ್ರಯಾಣದ ಝಂಝಾಟಕ್ಕೆ
ದೈಹಿಕವಾಗಿ ಹಾಗೂ ಮಾನಸಿಕ
ಬಳಲಿಯೇ, ತಮ್ಮ ಕೆಲಸದ ಜಾಗ
ತಲುಪುತ್ತಾರೆ. ಆರೋಗ್ಯಕ್ಕೆ ದಿವ
ಎನಿಸಿದ ಕೆಫೀನ್ ಹಾಗೂ ವಿಟಮಿನ್
ಯುಕ್ತ 'ರೀಗೇನ್' ಜಪಾನಿ ಕೆಲ
ರಲ್ಲಿ ಅತ್ಯಂತ ಬಳಕೆಯಲ್ಲಿರುವ 'ಸಂಜ

ಪ್ರಯಾಣಗಳ ನಡುವೆ ಜಪಾನೀಯರು
ೇರಿಯ ಕೆಲಸಗಳಲ್ಲಿ ಅತಿ ಹೆಚ್ಚಿನ
ುಯವನ್ನು ವಿನಿಯೋಗಿಸಬೇಕಾಗು
ದೆ. ಬೆಳಗ್ಗೆ ೮-೩೦ಕ್ಕೆ ಕಛೇರಿಗೆ ಬಂದರೆ,
ತ್ರಿ ೮ ಘಂಟೆಯವರೆಗೂ, ಅಥವಾ
ದಕ್ಕು ಹೆಚ್ಚು ಕಾಲವನ್ನು ತನ್ನ ಕೆಲಸದ
ೇಜಿನಲ್ಲೇ ಕಳೆಯಬೇಕಾಗಬಹುದು.
ಛೇರಿಯ ವೇಳೆಯ ನಂತರ ಸಂತೋಷ
ೂಟಗಳಲ್ಲಿ ಭಾಗವಹಿಸುವುದು ಕೇವಲ
ವಿಳಿಯಕಾಲರ್' ಕೆಲಸಗಾರರಿಗೆ ಮಾತ್ರ
ಾಧ್ಯ. ಪ್ರಯಾಣಕ್ಕೆ ಅತಿದೀರ್ಘ ಸಮಯ
ಡಿಯುವುದರಿಂದ, ಮಧ್ಯರಾತ್ರಿಗೂ
ೂದಲು ಮನೆ ಸೇರುವುದು ಅಸಂಭವದ
ಷಯ.

ಅನೇಕ ನೌಕರರು ಶೇಕಡಾ ೯೬ ರಷ್ಟು
ಪಾನಿ ಉದ್ಯಮಗಳು ಒದಗಿಸುವ ಕಂಪೆನಿ
ುನೆಗಳ ಲಾಭವನ್ನು ಪಡೆಯಲು ಯತ್ನಿಸು
ತ್ತಾರೆ. ಕ್ರೋಮ್ ಪ್ಲೇಟ್ ಮೆಷೀನ್‌ನ
ಾಗಗಳನ್ನು ತಯಾರಿಸುವ ಕಂಪೆನಿ
ಂಸೆಕುಸೆಟೊ' ಒದಗಿಸುವ ಮನೆ
ಂತೆಯೇ, ಸಾಮಾನ್ಯ ಇತರ ಮನೆಗಳೂ
ರುತ್ತವೆ. ಊಟದ ಮನೆಯಿಂದ ಶುರು
ಾಗುವ ಕಾರಿಡಾರುಗಳುದ್ದಕ್ಕೂ ಅತಿ
ೆಯ ಮರದ ಗೋಡೆಗಳು ವಿಭಾಗಿಸುವ
ಣ್ಣ ಸಣ್ಣ ಕೊಠಡಿಗಳಿರುತ್ತವೆ. ಕಲೆಗಳಿಂದ
ಾಡಿದ ಕಾರ್ಪೆಟ್‌ಗಳು ನೆಲವನ್ನಲಂಕರಿಸು
ವೆ. ಏರ್‌ಕಂಡೀಷನಿಂಗ್ ಇಲ್ಲದೆ, ಕೇವಲ
ುಸಬಹುದಾದ ಒಂದು ಬಾಗಿಲು,
ರಿಡಾರಿನ ಮತ್ತೊಂದು ಪಕ್ಕಕ್ಕೆ ಆಟದ
ೋಣೆ. ಕೆಲಸಗಾರರು ಅಲ್ಲಿಯೇ ನೆಲದ
ೇಲೆ ಕುಳಿತೊ, ಇಲ್ಲವೇ ಮಹ್‌ಜೋಂಗ್
ವೇ ಇಸ್ಪೀಟಾಡುತ್ತಲೋ ವಿಶ್ರಮಿಸಿ
ಕೊಳ್ಳುತ್ತಾರೆ. ಕೆಂಪು ಆಷ್ಟ್ರೇಯೊಂದು
ಸಿಗರೇಟು ತುಂಡುಗಳಿಂದ ತುಂಬಿ ತುಳುಕು
ತ್ತಿರುತ್ತದೆ.

ರಾಸಾಯನಿಕ ದ್ರವ್ಯಗಳು ನೆಲದಲ್ಲಿ
ಮಡುಗಟ್ಟಿ, ಕಾಮನಬಿಲ್ಲಿನ ವರ್ಣಗಳನ್ನು
ಸೃಷ್ಟಿಸಿದ, ಫ್ಯಾಕ್ಟರಿಯ ಮೇಲ್ಭಾಗದಲ್ಲಿ,
ಪುರುಷರು ಕುಳಿತು ಧೂಮಪಾನಮಾಡುವ
ಕೊಠಡಿಗಳಿರುತ್ತವೆ. ಇಲ್ಲಿಗೆ ಸೆಟೋ ಕೆಲಸ
ಗಾರರು ವರ್ಷಕ್ಕೆ ೧೮,೦೦೦ರೂ. ಮಾತ್ರ
ಬಾಡಿಗೆಕೊಡುವ ಅಗ್ಗದ ವಸತಿ ಸೌಕರ್ಯ
ವಿದೆ. ೪.೭ ಲಕ್ಷರೂ.ಗಳ ವಾರ್ಷಿಕ
ಆದಾಯದ ಮಿಕ್ಕ ಹಣವನ್ನ ವರು
ಉಳಿತಾಯಮಾಡುತ್ತಾರೆ.

ಇಷ್ಟಾದರೂ, ಅತಿಹೆಚ್ಚು ಪ್ರಚಾರ
ಗೊಳ್ಳುವ 'ರಾಷ್ಟ್ರೀಯ ಉಳಿತಾಯ'ದರ
ಇತ್ತೀಚಿನ ವರ್ಷಗಳಲ್ಲಿ ಇಳಿಮುಖವಾಗಿದೆ
ಹಾಗೂ ಜಪಾನೀಯರು ದುಂದು ವೆಚ್ಚ
ಮಾಡುತ್ತಿರುವ ಸೂಚನೆಗಳಿವೆ. ಜಪಾನೀ
ಯರು ಮನೆಕೊಳ್ಳಲು ಸಾಧ್ಯವಿಲ್ಲದಿರುವು
ದರಿಂದ, ಅವರು ಇತರ ವಸ್ತುಗಳನ್ನು
ಕೊಳ್ಳಲು ಹಣ ಖರ್ಚುಮಾಡುತ್ತಾರೆನ್ನು
ತ್ತಾರೆ ಸಾಮಾಜಿಕ ಕಾರ್ಯಕರ್ತ 'ಶುಯಿಚಿ
ಕಟೋ'

ಟೋಕಿಯೋದಲ್ಲಿ ದಾರಿದ್ರ್ಯ ಸೂಸು
ವಂತಿರುವ ಮನೆಗಳ ಮುಂದೆ ಅತಿ
ಶ್ರೀಮಂತಿಕೆಯ ಸೂಚಕಗಳಾದ ಕಾರುಗಳು
ನಿಂತಿರುತ್ತವೆ. ಜಪಾನಿನ ಶ್ರೀಮಂತಿಕೆಯ
ವಿರೋಧಾಭಾಸ, ಮತ್ತಿಲ್ಲಿಯೂ ಎದ್ದು
ಕಾಣುತ್ತದೆ. ಈ ಭವ್ಯ ಕಾರುಗಳು ಕೇವಲ
ಮಾನಸಿಕ ತೃಪ್ತಿಗಾಗಿ. ಕಾರಣ, ಇಲ್ಲಿ ಈ
ಕಾರುಗಳೋಡಬಹುದಾದಂಥ ರಸ್ತೆಗಳೇ
ಇಲ್ಲ ಎನ್ನುತ್ತಾನೆ ಕಟೋ. ಜಪಾನಿನಲ್ಲಿ

ಕಾವ' ದಂಪತಿಗಳನ್ನೇ ತೆಗೆದುಕೊಳ್ಳೋಣ. ಇಬ್ಬರೂ ಸೇರಿ ವರ್ಷಕ್ಕೆ ಸುಮಾರು ೬ ಮಿಲಿಯನ್ 'ಯನ್'ಗಳನ್ನು ಸಂಪಾದಿಸುತ್ತಾರೆ. (ಸುಮಾರು ೯ ಲಕ್ಷ ರೂ.ಗಳು) ಮಧ್ಯ ಟೋಕಿಯೋದಿಂದ ೭೫ ನಿಮಿಷಗಳಲ್ಲಿ ಪ್ರಯಾಣಿಸಬಹುದಾದ ಅಂತರದಲ್ಲಿರುವ ಅವರ ಮನೆ ೪೩ ಚದರ ಮೀಟರುಗಳಿದ್ದು ಅಡಿಗೆ ಮನೆ (ಅಲ್ಲಿಯೇ ಊಟವನ್ನು ಮಾಡಬೇಕು) ಮಲಗುವ ಕೋಣೆ, ಸ್ನಾನಗೃಹ ಹಾಗೂ ವ್ಯಾಸಂಗದ ಕೋಣೆಗಳನ್ನೊಳಗೊಂಡಿರುತ್ತದೆ. ಶಯನ ಗೃಹ ಹಾಗೂ ವ್ಯಾಸಂಗದ ಕೊಠಡಿಗಳು ಕೇವಲ ೨.೫ ಮೀಟರ್ ಅಗಲವಿರುತ್ತವೆ. ಜಪಾನೀಯರು ಹಾಸ್ಯಕ್ಕಾಗಿ ತಮ್ಮ ಮನೆಗಳನ್ನು 'ಉಸಾಗಿ ಗೋಯ' ಎಂದರೆ 'ಮೊಲದ ಗೂಡೆಂದು' ಕರೆಯುತ್ತಾರೆ.

ಈ ಮನೆಗಾಗಿ ತಿಂಗಳಿಗೆ ಮಿಯಕಾವ ಕೊಡುವ ಬಾಡಿಗೆ ೧ ಲಕ್ಷ 'ಯನ್'ಗಳು. ಆರು ವರ್ಷದಷ್ಟು ಹಳೆಯದಾದ ತಮ್ಮ ಕಾರನ್ನು ಮನೆಯ ಮುಂದೆ ನಿಲ್ಲಿಸಲು 'ಪಾರ್ಕಿಂಗ್' ಜಾಗಕ್ಕಾಗಿ ಕೊಡಬೇಕಾದ್ದು ತಿಂಗಳಿಗೆ ೨೫೦ ರೂ.ಗಳಿಗೆ ಸಮನಾದಷ್ಟು 'ಯನ್'ಗಳು. ೪ ತಿಂಗಳ ಬಾಡಿಗೆಯಷ್ಟು ಹಣವನ್ನು ಸುರಕ್ಷಿತತೆಗಾಗಿ ಮುಂಗಡವಾಗಿ ಕೊಟ್ಟರೆ, ವಸತಿ ಗೃಹ ಬದಲಾವಣೆ ಮಾಡಿದಾಗ ಅವರಿಗೆ ಹಿಂದೆ ಸಿಗುವುದು ಕೇವಲ ಕೊಟ್ಟ ಹಣದ ಅರ್ಧದಷ್ಟು.

ಈ ಮನೆಗಳಲ್ಲಿ ನೀರು ಕಾಯಿಸುವ ಸೌಲಭ್ಯಗಳಿಲ್ಲದಿರಬಹುದು. ವಾಷರ್, ಡ್ರೈಯರ್, ಸ್ಟೌವ್, ಫ್ರಿಡ್ಜ್, ಏರ್ ಕಂಡೀಷನರ್ ಅಥವಾ ಸೆಂಟ್ರಲ್ ಹೀಟಿಂಗ್ ಸೌಲಭ್ಯ ಸಿಗದಿರಬಹುದು. ದಲ್ಲಾಳಿಗಳು

ಇಂಥ ಮನೆಗಳನ್ನು 'ಭವ್ಯ ಮಹಲು'ಗ
ಪಟ್ಟಿಗೆ ಸೇರಿಸಿದಾಗ, ಅಲ್ಲಿ ವ್ಯಂಗದ ಒಂದ
ತುಣುಕೂ ಕಂಡು ಬರುವುದಿಲ್ಲ.

ಪ್ರತಿಯೊಬ್ಬ ಜಪಾನೀಯನ ಪರ
ರಾಗತ ಕನಸಿನಂತೆ ಮಿಯಕಾವ ದಂಪ
ಗಳು ತಾವು ಎಂದಿಗೂ ಮನೆಕೊಳ್ಳಬ
ದೆಂಬ ಕನಸು ಕಾಣುವುದಿಲ್ಲ. ೭೫ ಚದ
ಮೀಟರ್ ಜಾಗ ಹೊಂದಿದ ಮನ
ಟೋಕಿಯೋದಲ್ಲಿ ಸುಮಾರು ೮೭ ಲ
ರೂ.ಗಳಾಗುತ್ತದೆ. ಬ್ಯಾಂಕ್ ಆ
ಜಪಾನ್‌ನ ೧೯೭೮ರ ಸರ್ವೆ ಪ್ರಕ
ಶೇ. ೩೨ರಷ್ಟು ಜಪಾನೀಯರು ತಾ
ಮನೆ ಕೊಳ್ಳುವುದಕ್ಕಾಗಿ ಹಣ ಉಳಿತಾ
ಮಾಡುತ್ತಿದ್ದೇವೆಂದೆ ಹೇಳಿದ್ದರು. ಆ
೧೯೮೮ರ ಹೊತ್ತಿಗೆ ಆ ಸಂಖ್ಯೆ ಕೇ
ಶೇ. ೧೯ಕ್ಕಿಳಿದಿತ್ತು.

ಜಪಾನೀಯರ ತೀರಾ ತಿರಸ್ಕಾ
ಪಾತ್ರವಾಗುವುದೆಂದರೆ ಅವರ ಸಂಚ
ವ್ಯವಸ್ಥೆ, ಕಛೇರಿಗಳಿಗೆ ಹೋಗುವ ಸಮ
ದಲ್ಲಂತೂ, ರೈಲುಗಳಲ್ಲಿ ಇರುವ ಸ್ಥ
ಕಾಶದ ಶೇಕಡಾ ೨೫೦ ಪಟ್ಟು ಜನ ತು
ತ್ತಾರೆ. ನೆಲಕ್ಕೆ ಕಾಲೂರಲೂ
ತ್ರಿಶಂಕುಸ್ಥಿತಿಯ ಅನುಭವ. 'ಸಬ್
ಆಳುಗಳು, ರೈಲಿನ ಬಾಗಿಲು ಮು
ವಂತಾದರೆ ಸಾಕೆನ್ನುವಂತೆ ಪ್ರಯಾ
ರನ್ನು ರೈಲಿನೊಳಗೆ ತುರುಕುತ್ತಾರೆ,
ದಿನವೂ ಪ್ರಯಾಣದ ರಷುಂರಷಾಟಕ್ಕೆ
ದೈಹಿಕವಾಗಿ ಹಾಗೂ ಮಾನಸಿಕ
ಬಳಲಿಯೇ, ತಮ್ಮ ಕೆಲಸದ ಜಾಗ
ತಲುಪುತ್ತಾರೆ. ಆರೋಗ್ಯಕ್ಕೆ ದಿವ್
ಎನಿಸಿದ ಕೆಫೀನ್ ಹಾಗೂ ವಿಟಮಿನ್
ಯುಕ್ತ 'ರೀಗೇನ್' ಜಪಾನಿ ಕೆಲ
ರಲ್ಲಿ ಅತ್ಯಂತ ಬಳಕೆಯಲ್ಲಿರುವ 'ಸಂಜೀ

ಪ್ರಯಾಣಗಳ ನಡುವೆ ಜಪಾನೀಯರು
ಚೇರಿಯ ಕೆಲಸಗಳಲ್ಲಿ ಅತಿ ಹೆಚ್ಚಿನ
ುಯವನ್ನು ವಿನಿಯೋಗಿಸಬೇಕಾಗು
ದೆ. ಬೆಳಗ್ಗೆ ೮–೩೦ಕ್ಕೆ ಕಛೇರಿಗೆ ಬಂದರೆ,
ತ್ರಿ ೮ ಘಂಟೆಯವರೆಗೂ, ಅಥವಾ
ಕ್ಕು ಹೆಚ್ಚು ಕಾಲವನ್ನು ತನ್ನ ಕೆಲಸದ
ೇಜಿನಲ್ಲೇ ಕಳೆಯಬೇಕಾಗಬಹುದು.
ಛೇರಿಯ ವೇಳೆಯ ನಂತರ ಸಂತೋಷ
ೂಟಗಳಲ್ಲಿ ಭಾಗವಹಿಸುವುದು ಕೇವಲ
ಳಿಯಕಾಲರ್' ಕೆಲಸಗಾರರಿಗೆ ಮಾತ್ರ
ಾಧ್ಯ. ಪ್ರಯಾಣಕ್ಕೆ ಅತಿದೀರ್ಘ ಸಮಯ
ಡಿಯುವುದರಿಂದ, ಮಧ್ಯರಾತ್ರಿಗೂ
ೂದಲು ಮನೆ ಸೇರುವುದು ಅಸಂಭವದ
ಷಯ.

ಅನೇಕ ನೌಕರರು ಶೇಕಡಾ ೯೭ ರಷ್ಟು
ಪಾನಿ ಉದ್ಯಮಗಳು ಒದಗಿಸುವ ಕಂಪೆನಿ
ನೆಗಳ ಲಾಭವನ್ನು ಪಡೆಯಲು ಯತ್ನಿಸು
ತ್ತಾರೆ. ಕ್ರೋಮ್ ಪ್ಲೇಟ್ ಮೆಷೀನ್‌ನ
ಾಗಗಳನ್ನು ತಯಾರಿಸುವ ಕಂಪೆನಿ
ಂಸೆಕುಸೆಟೊ' ಒದಗಿಸುವ ಮನೆ
ಂತೆಯೇ, ಸಾಮಾನ್ಯ ಇತರ ಮನೆಗಳೂ
ರುತ್ತವೆ. ಊಟದ ಮನೆಯಿಂದ ಶುರು
ಾಗುವ ಕಾರಿಡಾರುಗಳುದ್ದಕ್ಕೂ ಅತಿ
ಳೆಯ ಮರದ ಗೋಡೆಗಳು ವಿಭಾಗಿಸುವ
ಣ್ಣ ಸಣ್ಣ ಕೊಠಡಿಗಳಿರುತ್ತವೆ. ಕಲೆಗಳಿಂದ
ಾಡಿದ ಕಾರ್ಪೆಟ್‌ಗಳು ನೆಲವನ್ನಲಂಕರಿಸು
ವೆ. ಏರ್‌ಕಂಡೀಷನಿಂಗ್ ಇಲ್ಲದೆ, ಕೇವಲ
ಸಬಹುದಾದ ಒಂದು ಬಾಗಿಲು,
ರಿಡಾರಿನ ಮತ್ತೊಂದು ಪಕ್ಕಕ್ಕೆ ಆಟದ
ಾಣೆ. ಕೆಲಸಗಾರರು ಅಲ್ಲಿಯೇ ನೆಲದ
ೇಲೆ ಕುಳಿತೊ, ಇಲ್ಲವೇ ಮಹ್‌ಜೋಂಗ್
ಲ್ಲವೇ ಇಸ್ಪೀಟಾಡುತ್ತಲೋ ವಿಶ್ರಮಿಸಿ
ಕೊಳ್ಳುತ್ತಾರೆ. ಕೆಂಪು ಆಷ್ಟ್ರೇಯೊಂದು ಸಿಗರೇಟು ತುಂಡುಗಳಿಂದ ತುಂಬಿ ತುಳುಕುತ್ತಿರುತ್ತದೆ.

ರಾಸಾಯನಿಕ ದ್ರವ್ಯಗಳು ನೆಲದಲ್ಲಿ ಮಡುಗಟ್ಟಿ, ಕಾಮನಬಿಲ್ಲಿನ ವರ್ಣಗಳನ್ನು ಸೃಷ್ಟಿಸಿದ, ಫ್ಯಾಕ್ಟರಿಯ ಮೇಲ್ಭಾಗದಲ್ಲಿ, ಪುರುಷರು ಕುಳಿತು ಧೂಮಪಾನಮಾಡುವ ಕೊಠಡಿಗಳಿರುತ್ತವೆ. ಇಲ್ಲಿಗೆ ಸೆಟೋ ಕೆಲಸಗಾರರು ವರ್ಷಕ್ಕೆ ೧೮,೦೦೦ರೂ. ಮಾತ್ರ ಬಾಡಿಗೆಕೊಡುವ ಅಗ್ಗದ ವಸತಿ ಸೌಕರ್ಯವಿದೆ. ೪.೭ ಲಕ್ಷರೂ.ಗಳ ವಾರ್ಷಿಕ ಆದಾಯದ ಮಿಕ್ಕ ಹಣವನ್ನವರು ಉಳಿತಾಯಮಾಡುತ್ತಾರೆ.

ಇಷ್ಟಾದರೂ, ಅತಿಹೆಚ್ಚು ಪ್ರಚಾರಗೊಳ್ಳುವ 'ರಾಷ್ಟ್ರೀಯ ಉಳಿತಾಯ'ದರ ಇತ್ತೀಚಿನ ವರ್ಷಗಳಲ್ಲಿ ಇಳಿಮುಖವಾಗಿದೆ ಹಾಗೂ ಜಪಾನೀಯರು ದುಂದು ವೆಚ್ಚ ಮಾಡುತ್ತಿರುವ ಸೂಚನೆಗಳಿವೆ. ಜಪಾನೀಯರು ಮನೆಕೊಳ್ಳಲು ಸಾಧ್ಯವಿಲ್ಲದಿರುವುದರಿಂದ, ಅವರು ಇತರ ವಸ್ತುಗಳನ್ನು ಕೊಳ್ಳಲು ಹಣ ಖರ್ಚುಮಾಡುತ್ತಾರೆನ್ನುತ್ತಾರೆ ಸಾಮಾಜಿಕ ಕಾರ್ಯಕರ್ತ 'ಶುಯಿಚಿ ಕಟೋ'

ಟೋಕಿಯೋದಲ್ಲಿ ದಾರಿದ್ರ್ಯ ಸೂಸುವಂತಿರುವ ಮನೆಗಳ ಮುಂದೆ ಅತಿ ಶ್ರೀಮಂತಿಕೆಯ ಸೂಚಕಗಳಾದ ಕಾರುಗಳು ನಿಂತಿರುತ್ತವೆ. ಜಪಾನಿನ ಶ್ರೀಮಂತಿಕೆಯ ವಿರೋಧಾಭಾಸ, ಮತ್ತಿಲ್ಲಿಯೂ ಎದ್ದು ಕಾಣುತ್ತದೆ. ಈ ಭವ್ಯ ಕಾರುಗಳು ಕೇವಲ ಮಾನಸಿಕ ತೃಪ್ತಿಗಾಗಿ. ಕಾರಣ, ಇಲ್ಲಿ ಈ ಕಾರುಗಳೋಡಬಹುದಾದಂಥ ರಸ್ತೆಗಳೇ ಇಲ್ಲ ಎನ್ನುತ್ತಾನೆ ಕಟೋ. ಜಪಾನಿನಲ್ಲಿ

ರಾಷ್ಟ್ರೀಯ ಹೆದ್ದಾರಿ ಇರುವುದೇ ಕೇವಲ ೩೫೦೦ ಕಿ.ಮೀಟರ್ !

೩೩ ಮಿಲಿಯನ್, ಕಾರುಗಳನ್ನು ಹೊಂದಿರುವ ಜಪಾನಿನಲ್ಲಿ ವಾಹನ ಸಂಚಾರ ಸ್ತಬ್ಧವಾದಂತಿರುತ್ತದೆ. ಟೋಕಿಯೋದಲ್ಲಿ 'ವಾಹನ ನಿಲುಗಡೆ' ಎಂಬುದು ಸಾಧ್ಯವೇ ಇಲ್ಲದಂಥ ಸ್ಥಳಾಭಾವದ ಪರಿಸ್ಥಿತಿ. ಕಾರಿನಲ್ಲಿ ಪ್ರಯಾಣಿಸುವ ಜನ, ಬೆಳಗ್ಗೆ ೫ ಘಂಟೆಗೆ ಮನೆ ಬಿಟ್ಟು ಆಫೀಸು ತಲುಪುವ ಮುನ್ನ, ನಡುವೆ ರಸ್ತೆಯಲ್ಲೆಲ್ಲೋ ಕಾರು ನಿಲ್ಲಿಸಿ ಸಣ್ಣನಿದ್ದೆ ತೆಗೆಯುವ, ಇಲ್ಲವೇ, ಮನೆಯಿಂದ ತಂದ ಉಪಹಾರ ತಿನ್ನುವುದರಲ್ಲಿ ಮಗ್ನರಾಗಿರುವುದು ತೀರಾ ಸಾಮಾನ್ಯ ದೃಶ್ಯ.

ದೇಶದೊಳಗೇ ಸಂತಸಕರ ವಿಹಾರಕ್ಕಾಗಿ ಪ್ರಯಾಣಮಾಡುವುದು ಎನ್ನುವುದಂತೂ, ಜಪಾನಿನ ಪರಿಸ್ಥಿತಿಗೆ ಹೊಂದುವಂತಹ ಮಾತೇ ಅಲ್ಲ. ವಾರಾಂತ್ಯದಲ್ಲಿ ಟೋಕಿಯೋದಿಂದ, ಸಮುದ್ರ ತೀರದವರೆಗಿನ ೧೦೦ ಕಿ. ಮೀ. ಪ್ರಯಾಣಕ್ಕೆ ೬ ಘಂಟೆಗಳು ಹಿಡಿಯುತ್ತವೆ. ಹೆದ್ದಾರಿಯ ತೆರಿಗೆಗಳಂತೂ ಅತ್ಯಧಿಕ. ಟೋಕಿಯೋದಿಂದ ಒಸಾಕಾದವರೆಗಿನ ೪೦೦ ಕಿ.ಮೀ.ಗಳ ಪ್ರಯಾಣಕ್ಕೆ, ೧೯೦೦ ರೂಪಾಯಿಗಳ ತೆರಿಗೆ ತೆರಬೇಕಾಗುತ್ತದೆ.

ತಮ್ಮ ಆಸೆ, ಆಕಾಂಕ್ಷೆಗಳನ್ನು ಹತ್ತಿಕ್ಕುತ್ತಿರುವ ಜಪಾನೀಯರಿಂದ ಸಾಮೂಹಿಕ ವಿರೋಧ ವ್ಯಕ್ತಪಡಬಹುದೆಂಬ ನಿರೀಕ್ಷೆ ಹುಸಿಯಾಗಿದೆ. ಆಂದೋಳನಗಳ ಹೆಸರಂತೂ ಜಪಾನಿನಲ್ಲಿ ಕೇಳೇ ಇಲ್ಲದ ವಿಷಯ. ಆದರೂ ಭಗ್ನವಾದ ಆಸೆಗಳಿಂದುಂಟಾದ ಬೇಸರಿಕೆ ಸಮಾಜದ ಆಳಕ್ಕಿಳಿಯಬಹುದೆಂಬ

ಯೋಚನೆ ಸರ್ಕಾರಕ್ಕೆ. ಮ
'ಮಾಲಿಕತ್ವ'ವೆಂಬ ಆಸೆಯನ್ನು
ಪಡಿಸದಿದ್ದಲ್ಲಿ, ಜಪಾನ್ ಅರ್ಥಿ
ಮುನ್ನಡೆಯುವಂತೆ ಮಾಡಲು ಜ
ಯರು ತಮ್ಮ ಸರ್ವಸ್ವವನ್ನೂ
ಮಾಡಿ, ಎಲ್ಲಿಯವರೆಗೆ ಶ್ರಮ
ದುಡಿಯಬಲ್ಲರು ?

ಈ ಪರಿಸ್ಥಿತಿಯನ್ನು ವಿವರಿ
'ಮನೂಕೆ' ಎಂಬ ಜಪಾನಿ ಶಬ್ದ
ಉಪಯೋಗಿಸಲಾಗುತ್ತದೆ. ಜಾಹಿ
ಕಂಪೆನಿಯೊಂದರ ಅಧಿಕಾರಿ ಹೇಳು
"ನಮ್ಮಲ್ಲಿ ಮೂರು ವಸ್ತುಗಳ ಕ
ಎದ್ದು ತೋರುತ್ತದೆ. ಸಮಯ,
ಹಾಗೂ ವ್ಯಕ್ತಿಗತ (ಖಾಸಗಿ) ಜ
ದಿನದ ಹೆಚ್ಚಿನ ಕಾಲವನ್ನು ಕಛೇರಿ
ಕಳೆಯಬೇಕಾಗಿರುವುದರಿಂದ ಸಮ
ಕೊರತೆ, 'ಮೊಲದ ಗೂಡುಗಳಂತಹ
ಗಳಲ್ಲಿ ವಾಸಮಾಡಬೇಕಾಗಿರುವು
ಸ್ಥಳದ ಅಭಾವ, ಸಹೋದ್ಯೋ
ಹಾಗೂ ಗಿರಾಕಿಗಳೊಂದಿಗೆ, ದಿನದ
ವೇಳೆ ಕಳೆಯಬೇಕಾಗಿರುವುದರಿಂದ
ವೈಯಕ್ತಿಕ ಜೀವನವೆಂಬುದೇ
ಆದರೆ 'ಮನುಕೆ' ಶಬ್ದ ಅತಿ ತೀಕ್ಷ್ಣ
ದ್ವಂದ್ವಾರ್ಥ ಹೊಂದಿದೆ. ಜಪಾನಿನ
ಶಬ್ದಕ್ಕೆ 'ಮೂರ್ಖ' ಎಂಬ ಅರ್ಥವೂ
ಜೀವನದ ಅತಿ ಅವಶ್ಯಕತೆಗಳೆನಿಸಿ
ಮೂರು ವಸ್ತುಗಳಿಂದ ವಂಚಿ
ಜೀವನ ಸಾಗಿಸುವ ನಾವು ಮ
ರಲ್ಲದೆ ಮತ್ತೇನು ?" ಎನ್ನುತ್ತಾ
ಅಧಿಕಾರಿ.

ಜಪಾನೀಯರಿಗೆ ತಮ್ಮ ರಾ
ಆರ್ಥಿಕ ಮುನ್ನಡೆಯ ಬಗೆ

ಕಿಮ್ಮ, ಆದರೆ ಕೆಲವರಿಗೆ ಕೇವಲ ಈ ಕಿಮ್ಮಯೊಂದೇ ಸಾಲದೆನಿಸಿದೆ. ರಾಷ್ಟ್ರದ ಈ ಪಾರ ಸಂಪತ್ತು ದಿನನಿತ್ಯದ ಜೀವನ ವನ್ನು ಸಾಕಷ್ಟು ಸುಧಾರಿಸುವತ್ತ ಏಕೆ ಕರಿಯದಾಗಿದೆ ಎನ್ನುತ್ತಾರೆ. ಎರಡನೆಯ ಶ್ವಸಮರದ ನಂತರದ ತುರ್ತು ಪರಿಸ್ಥಿತಿ ಯಲ್ಲಿ ಈ ರೀತಿಯ ಜೀವನಸ್ಥಿತಿಯನ್ನು ಒಪ್ಪಿಕೊಂಡುದೇನೋ ಸರಿ, ಆದರೆ ನಂತರದ ೪ ದಶಕ ಸಮೃದ್ಧಿಯಲ್ಲಿ ಕಳೆದಾಗಲೂ ಇದೇ ಸ್ಥಿತಿ. ಅದೂ ಇಷ್ಟೆಲ್ಲಾ ಅಪಾರ ಸಂಪತ್ತುಗಳಿಸಿಕೊಂಡ ಮೇಲೂ! ಖಂಡಿತಾ ಸಮರ್ಥನೀಯವಾದ ಸ್ಥಿತಿಯಲ್ಲ ಇದು!



ಒಂದು ಉಗಾದಿ ಹಬ್ಬದ ಮುಂಜಾನೆ ಕಸ್ತೂರಿ ಅವರು ಡಾ|| ಎಚ್. ಕೆ. ರಂಗನಾಥ್ ಅವರ ಮನೆಗೆ ಹೋಗಿ, ಹಬ್ಬದ ಸಡಗರದಲ್ಲಿದ್ದ ಅವರ ತಾಯಿಯನ್ನು ಕರೆದು "ಒಳ್ಳೇ ಹಬ್ಬ ಇವತ್ತು. ಆದರೆ ಏನು ಮಾಡೋದಮ್ಮ? ಇವತ್ತೇ ನಿಮ್ಮ ಮಗ ಜೈಲಿಗೆ ಹೋಗಬೇಕಾಗಿದೆಯಲ್ಲ! ಬೇಡಕಣ್ರೋ ಇವತ್ತು ಬೇಡಪ್ಪ ಮನೇಲಿ ಹಬ್ಬ ಇರುತ್ತೆ ಅಂತ ಎಷ್ಟೋ ಹೇಳಿದೆ ಪೋಲೀಸಿನವರಿಗೆ! ಆದರೆ ಕೇಳಬೇಕಲ್ಲ ಅವರು" ಎಂದರು. ಮನೆಯವರಿಗೆಲ್ಲಾ ಗಾಬರಿ ಆದರೆ ಅವರು ನಗುನಗುತ್ತ "ಇವತ್ತು ಜೈಲಿನಲ್ಲಿ ನನ್ನದೇ ಹರಿಕಥೆ. ಅಲ್ಲಿರುವ ಅಪರಾಧಿಗಳಿಗೆ! ಹಬ್ಬ ಅಂತ ಸ್ಪೆಷಲ್ ಕಾರ್ಯಕ್ರಮ! ನಿಮ್ಮ ಮಗ ಪಿನ್ ಪಾಟಿಗೆ ಬರಲಿ." ಎಂದಾಗ ನಗೆ ಒಡೆದು ಮಹಾಪೂರವಾಯಿತು.

ಡಾ|| ಹೆಚ್. ಕೆ. ರಂಗನಾಥ್ ಅವರ ಸ್ಮೃತಿಯಿಂದ

ವೃತ್ತಿತೃಪ್ತಿ

ಡಾ|| ಎ. ಎಸ್. ರಾಘವಕು
೭೪, ೬ನೆಯ ಮೇನ್ ರಸ್ತೆ
(ಈಜುವಕೊಳದ ರಸ್ತೆ ಸಮೀಪ
ಸರಸ್ವತಿಪುರ, ಮೈಸೂರು-೫೭೦

ವಿದ್ಯಾವಂತನಾಗಿರಲಿ ಅಲ್ಲದಿರಲಿ, ಮತಿವಂತನಾಗಿರಲಿ ಮಂದಮತಿಯಾಗಿರಲಿ ಒಂದಲ್ಲ ಒಂದು ಬಗೆಯ ಕೆಲಸಕ್ಕೆ ಪ್ರತಿಯೊಬ್ಬ ವ್ಯಕ್ತಿಯೂ ಸೇರಲು ಇಚ್ಛಿಸುತ್ತಾನೆ ಮಾತ್ರವಲ್ಲ ಕೆಲಸದಲ್ಲಿ ಇರಲು ಹಾಗೂ ಅದನ್ನು ಉಳಿಸಿಕೊಳ್ಳಲು ಇಷ್ಟಪಡುತ್ತಾನೆ, ಕಷ್ಟಪಡುತ್ತಾನೆ ಕೂಡ. ವ್ಯಕ್ತಿಗೆ ದೊರಕುವ ಕೆಲಸ, ಅವನು ಪಡೆದಿರುವ ವಿದ್ಯಾರ್ಹತೆ, ಸಾಮರ್ಥ್ಯ ಮುಂತಾದವುಗಳನ್ನು ಆಧರಿಸಿರುತ್ತದೆ. ಕೆಲವೊಂದು ಕಡೆ ಚಿಕ್ಕ ಮಕ್ಕಳನ್ನೇ ಕೆಲಸಕ್ಕೆ ಹೋಗೆಂದು ತಂದೆತಾಯಿಗಳು ಒತ್ತಾಯಪಡಿಸಿದರೆ ಕೆಲವೆಡೆ ವಯಸ್ಸಿಗೆ ಬಂದರೂ ಕೆಲಸಕ್ಕೆ ಕಳುಹದಿರುವ ಹಿರಿಯರೂ ಈ ಸಮಾಜದಲ್ಲಿ ಇಲ್ಲದಿಲ್ಲ. ನಮ್ಮ ಸಮಾಜದಲ್ಲಿ ಹಲವು ಬಗೆಯ ವೃತ್ತಿಗಳಿವೆ. ವಿವಿಧ ಮನೋಭಾವಗಳಿರುವ ಜನರಿದ್ದಾರೆ. ಅವರು ವಿವಿಧ ಬಗೆಯ ಸಾಮರ್ಥ್ಯ, ಕೌಶಲ, ಆಸಕ್ತಿಗಳನ್ನು ಪಡೆದುಕೊಂಡಿದ್ದರೂ ಮಾಡುತ್ತಿರುವ ಕೆಲಸದಿಂದ ಹಣ ಸಂಪಾದಿಸುತ್ತಿರುವರೇ ವಿನಾ ಮನಸ್ಸಿನ ಶಾಂತಿ ನೆಮ್ಮದಿಗಳನ್ನು ಪಡೆದುಕೊಂಡಿಲ್ಲ.

ಪರಿಕಲ್ಪನೆ

ಮಾಡುವ ಕೆಲಸ ಯಾವುದೇ ಆಗಿರಲಿ, ಪರಿಸರ ಅಥವಾ ಸನ್ನಿವೇಶ ಯಾವುದೇ
ಆಗಿರಲಿ ವೃತ್ತಿಯಲ್ಲಿರುವ ವ್ಯಕ್ತಿಗೆ
ಕೆಲಸದ ಬಗ್ಗೆ ಮನಸ್ಸು, ಅಭಿ
ಆಸಕ್ತಿ, ಗೌರವಗಳು ಇರಬೇಕ
ಸಹಜ. ಇದು ಮೊದಲನೆಯ ಬಗೆ.
ನಿರಾಸೆ, ಅದೃಢಮನೋಭಾವ, ಅ
ಮುಂತಾದವುಗಳಿದ್ದ ವ್ಯಕ್ತಿ ಯಾವ
ದಲ್ಲೇ ಇರಲಿ ಅವನಿಗೆ ಶಾಂತಿ ಸುಖಗ
ಲಾರವು. ಇದು ಎರಡನೆ ಯ
ಮೊದಲನೆಯ ಬಗೆಗೆ ಸೇರಿದ ವ್ಯ
ಕೆಲಸವನ್ನು ಇಷ್ಟಪಡುವುದು ಮಾ
ಅದರಲ್ಲಿ ಸಂತೋಷವನ್ನೂ ಕಾ
ತ್ತಿರುತ್ತಾನೆ. ಇದರ ಜೊತೆಗೆ
ಮತ್ತು ಆಶಾಭಂಗಗಳನ್ನು ಹಿ
ಕೊಂಡು ಕೆಲಸಕ್ಕೆ ಹೋದರೆ
ಲಭಿಸುವುದು ಅಸಂತೃಪ್ತಿಯೇ
ಮತ್ತೇನೂ ಅಲ್ಲ. ಆದರೆ ವೃತ್ತಿನಿ
ವನು ಸದಾ ಹಸನ್ಮುಖಿಯಾಗಿದ್ದು
ಸ್ಥೈರ್ಯಗಳಿಂದ ಮುನ್ನುಗ್ಗಿ ಹ
ತನ್ನ ಪಾಲಿಗೆ ವಹಿಸಿದ ಕೆಲಸವನ್ನು
ಮಾಡಿದಾಗ ಲಭಿಸುವ ಆತ್ಮ
ವನ್ನು ಸರ್ವೇಸಾಮಾನ್ಯವಾಗಿ
ತೃಪ್ತಿ' ಎಂದು ಹೇಳುವುದಿದೆ.
ರುವ ಯಾವುದೇ ವ್ಯಕ್ತಿ ಮ
ಮೂರು ಕ್ಷೇತ್ರಗಳಿಗೆ ಹೊ

ಬೇಕಾಗಿದೆ—೧) ಸಹೋದ್ಯೋಗಿಗಳು ೨) ಸಮಾಜ ೩) ಕೆಲಸ. ಈ ಕ್ಷೇತ್ರಗಳಲ್ಲಿನ ಸಫಲ ಹೊಂದಾಣಿಕೆಯ ಫಲಿತಾಂಶವಾಗಿ ಲಭ್ಯವಾಗುವ ಒಂದು ಮನಸ್ಥಿತಿಗೆ 'ವೃತ್ತಿತೃಪ್ತಿ' ಎಂದು ಕರೆಯಲಾಗುತ್ತದೆ.

ಮಹತ್ವ

ಭಾರತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ. ಹಾಕಿಕೊಂಡ ಯೋಜನೆಗಳು ಪೂರ್ಣಗೊಳ್ಳಲು ಆರ್ಥಿಕ ಮುಗ್ಗಟ್ಟು ಅಡ್ಡಿ ಬರುವುದು ಸಹಜವೇ. ನಾವೆಲ್ಲ ಆರ್ಥಿಕ ಪ್ರಗತಿಗೆ ಕೊಡುಗೆ ನೀಡಬೇಕಾಗಿರುವುದರಿಂದ ಹಾಗೂ ನಮ್ಮಲ್ಲಿರುವ ನಿರುದ್ಯೋಗ ಸಮಸ್ಯೆ ಎಂಬ ದೊಡ್ಡ ಭೂತವನ್ನು ಓಡಿಸಬೇಕಾಗಿ ಇರುವುದರಿಂದ ಎಲ್ಲ ರೀತಿಯ ಕೆಲಸಗಾರರೂ ಅಧಿಕ ನಿಷ್ಠೆಯಿಂದ, ಅಧಿಕ ಬದ್ಧತೆಯಿಂದ ಕೆಲಸ ಮಾಡುವುದು ಮಾತ್ರ ಅಲ್ಲ ಉತ್ತಮ ಮಟ್ಟದ ಕೆಲಸವನ್ನೂ ಮಾಡಬೇಕಾಗಿದೆ. ಅಂದರೆ ಯುಕ್ತ ವ್ಯಕ್ತಿಗೆ ಯುಕ್ತ ಕೆಲಸ ಒದಗಿಸುವುದರ ಮೂಲಕ ಎಲ್ಲ ಉದ್ಯೋಗಿಗಳೂ ವೃತ್ತಿತೃಪ್ತಿ ಪಡೆಯುವಂತೆ ಮಾಡಬಹುದು. ಆದರೆ ಇದು ಅಸಾಧ್ಯ, ಕಲ್ಪನೆಗೆ ಮಾತ್ರ ಲಭ್ಯ ಎಂದು ಅನ್ನಿಸುವುದಾದರೂ ವೃತ್ತಿ ತೃಪ್ತಿಯೇ ಪರಮಗುರಿ ಆಗಬೇಕು.

"ಬಲ್ಲವರೇ ಬಲ್ಲರ್ ಸಕ್ಕರೆಯ ಸವಿಯ" ಎಂಬ ಹೇಳಿಕೆಯಂತೆ ಪ್ರತಿಯೊಬ್ಬ ವ್ಯಕ್ತಿಯೂ ತಾನು ಮಾಡುವ ಕೆಲಸದಿಂದ ತೃಪ್ತಿಯನ್ನು ಪಡೆಯಲು ಪ್ರಯತ್ನಿಸುತ್ತಾನೆ. ವೃತ್ತಿಯಲ್ಲಿ ತೃಪ್ತಿಯನ್ನು ಕಂಡಂಥ ಕೆಲಸಗಾರ ಹೆಚ್ಚು ಶ್ರಮವಹಿಸಿ ಶ್ರದ್ಧೆ ಆಸಕ್ತಿ ಮುಂತಾದವುಗಳಿಂದ ಕೆಲಸ ಮಾಡಿದ್ದೇ ಆದರೆ ಕೆಲಸ ಕೊಡಿಸಿದವನ ಉತ್ಪನ್ನಗಳೂ ಹೆಚ್ಚಾಗುವುವರ ಜೊತೆಗೆ ಪ್ರತಿಯೊಬ್ಬ ಕೆಲಸಗಾರನಿಗೂ ಅಧಿಕಾಧಿಕ ತೃಪ್ತಿ ತನ್ನ ಕೆಲಸದಿಂದ ಸಿಗುವ ಸಾಧ್ಯತೆ ಇದೆ. ಇದು ಸರ್ವವಿದಿತವೂ ಹೌದು, ಸರ್ವಸಮ್ಮತವೂ ಹೌದು. ಉದಾ : ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ಮಗು ಪ್ರತಿನಿತ್ಯ ತನ್ನ ಪಾಠಗಳನ್ನು ಸರಿಯಾಗಿ ಕಲಿಯುತ್ತ ಹೋದರೆ ಲಘು ಪರೀಕ್ಷೆ ಹಾಗೂ ಅಂತಿಮ ಪರೀಕ್ಷೆಗಳಲ್ಲಿ ಸಮರ್ಪಕವಾಗಿ ಉತ್ತರ ಬರೆಯಲು ಸಾಧ್ಯವಾಗುತ್ತದೆ. ಇವರಿಂದ ಆ ಮಗುವಿಗೆ, ಅಂದರೆ, ವಿದ್ಯಾರ್ಥಿಗೆ ಸಂತೋಷವಾಗುತ್ತದೆ ಇಲ್ಲವೇ ತೃಪ್ತಿ ಸಿಗುತ್ತದೆ. ಇಲ್ಲಿ ವಿದ್ಯಾರ್ಥಿಯ ಕೆಲಸ ವಿದ್ಯೆಯನ್ನು ಕಲಿಯುವುದು ಇಲ್ಲವೆ ಅರ್ಜಿಸುವುದು. ಮಾಡುವ ಇಲ್ಲವೆ ಕಲಿಯುತ್ತಿರುವ ಕೆಲಸದಿಂದ ಒಂದು ಸಲ ಸಾಫಲ್ಯವನ್ನು ದೊರಕಿಸಿಕೊಂಡ ವ್ಯಕ್ತಿಗೆ ತೃಪ್ತಿ ಸಿಗುವುದರಲ್ಲಿ ಸಂಶಯವಿಲ್ಲ. ಆದರೆ ಇಂಥ ವ್ಯಕ್ತಿ ಸುಮ್ಮನೆ ಕುಳಿತಿರಲು ಸಾಧ್ಯವೇ? ಕೆಲಸ ಚಿಕ್ಕದಾಗಿರಲಿ, ದೊಡ್ಡದಾಗಿರಲಿ, ಸುಲಭವಾಗಿರಲಿ, ಕಠಿಣವಾಗಿರಲಿ ಕೈ ಹಾಕಿದ ಮೇಲೆ ಸುಮ್ಮನಿರಬಾರದು ; ಸುಮ್ಮನಿರಲಾಗದು. ಪೂರ್ಣ ಮಾಡುವ ಬಗೆ ಹೇಗೆ ಎಂಬ ಜಂಜಾಟದಲ್ಲಿ ಬಿದ್ದು, ಹೊಸದಾರಿಯಲ್ಲಾದರೂ ಮುಂದುವರೆದು ಹಿಡಿದ ಕೆಲಸವನ್ನು ಪೂರ್ಣ ಮಾಡಲು ಪ್ರಯತ್ನಿಸುತ್ತಾನೆ. ಇದೇ ಒಳಿತು ಎಂಬ ಭಾವನೆ ವ್ಯಕ್ತಿಯಲ್ಲಿ ಬೇರೂರುತ್ತದೆ. ಇದೇ ವೃತ್ತಿತೃಪ್ತಿಗೆ ನಾಂದಿಯಾಗುತ್ತದೆ.

ವೃತ್ತಿತೃಪ್ತಿಯ ಮೇಲೆ ಪ್ರಭಾವ ಬೀರುವ ಅಂಶಗಳು

ವೃತ್ತಿತೃಪ್ತಿ ಎನ್ನುವುದು ಅನೇಕ ಅಂಶಗಳನ್ನು ಒಳಗೊಂಡಿರುತ್ತದೆ ಮತ್ತು ಈ ಅಂಶಗಳು ಒಂದರೊಡನೊಂದು ಸಂಬಂಧವನ್ನು ಹೊಂದಿರುವುದರಿಂದ ಅವನ್ನು ಬೇರ್ಪಡಿಸುವುದು ಕಷ್ಟ ಎಂದು ಮನೋವಿಜ್ಞಾನಿ ಹಾಗೂ ಶಿಕ್ಷಣ ತಜ್ಞ ಥಾಮಸ್ ವಿಲಿಯಡ್ರ್‍ಹ್ಯಾರೆಲ್ ತಿಳಿಸಿದ್ದಾರೆ. ಈ ಅಂಶಗಳನ್ನು ಅವರು ಎರಡು ಪ್ರಧಾನ ವರ್ಗಗಳಾಗಿ ವಿಂಗಡಿಸಿದ್ದಾರೆ:

(ಅ) ವೈಯಕ್ತಿಕ ಅಂಶಗಳು.
(ಆ) ಕೆಲಸಕ್ಕೆ ಸಂಬಂಧಿಸಿದ ಅಂಶಗಳು.

(ಅ) ವೈಯಕ್ತಿಕ ಅಂಶಗಳು

ಲಿಂಗ: ಇದು ವೃತ್ತಿತೃಪ್ತಿಯ ಮೇಲೆ ಪ್ರಭಾವ ಬೀರುತ್ತದೆ. ಮಹಿಳೆಯರ ಆಸೆ ಮತ್ತು ಆರ್ಥಿಕ ಸ್ಥಿತಿಗತಿಗಳು ಕಡಿಮೆ ಮಟ್ಟದಲ್ಲಿದ್ದರೂ ಪುರುಷರಿಗಿಂತ ಮಹಿಳೆಯರೇ ವೃತ್ತಿಯಿಂದ ಅಧಿಕ ತೃಪ್ತಿಯನ್ನು ಪಡೆಯುತ್ತಿದ್ದಾರೆ ಎಂಬುದು ಅನೇಕ ಅಧ್ಯಯನಗಳಿಂದ ವ್ಯಕ್ತಪಟ್ಟಿದೆ.

೨) ಆಧಾರಿತರ ಸಂಖ್ಯೆ: ಇದೂ ವೃತ್ತಿತೃಪ್ತಿಯ ಮೇಲೆ ಪ್ರಭಾವ ಬೀರುವಂಥದೇ. ತಮ್ಮ ಆದಾಯವನ್ನೇ ನಂಬಿ ಜೀವನ ನಡೆಸುತ್ತಿರುವವರ ಸಂಖ್ಯೆ ಹೆಚ್ಚಾದಂತೆ ವ್ಯಕ್ತಿಗಳ ವೈಯಕ್ತಿಕ ವೃತ್ತಿತೃಪ್ತಿ ಕಡಿಮೆ ಆಗುತ್ತ ಹೋಗುತ್ತದೆ.

೩) ವಯಸ್ಸು: ಇದು ವೃತ್ತಿತೃಪ್ತಿಯೊಡನೆ ಸ್ವಲ್ಪ ಮಟ್ಟಿಗೆ ಸಂಬಂಧ
ಹೊಂದಿರುವಂಥದು. ಎಲ್ಲ ವೃತ್ತಿ ಸನ್ನಿ
ಗಳಿಗೂ ಬಲು ಮುಖ್ಯವಾದ
ವಯಸ್ಸು. ಇದು ಹೆಚ್ಚಾದಂತೆ ವೃತ್ತಿತೃ
ಹೆಚ್ಚಾಗುವುದನ್ನು ಕೆಲವು ಸಮೂಹಗ
ಕಾಣಬಹುದಾದರೆ, ಇನ್ನೂ ಕೆ
ಸಮೂಹಗಳಲ್ಲಿನ ಪರಿಸ್ಥಿತಿ ಇದ
ವಿರುದ್ಧವೇ ಆಗಿದೆ ಹಾಗೂ ಉಳಿದವುಗ
ಯಾವ ತೆರನಾದ ಸಂಬಂಧವೂ ಕಂ
ಬಂದಿಲ್ಲ ಎಂಬ ವಿಚಾರವನ್ನು ಹಲವಾ
ಸಂಶೋಧನೆಗಳು ತಿಳಿಸಿವೆ. ವಯಸ
ಮತ್ತು ವೃತ್ತಿತೃಪ್ತಿಗಳ ನಡುವೆ ಇರ
ಸಂಬಂಧ ಸಾರ್ಥಕವಾಗಿದೆ ಎಂಬ ವಿಚ
ವನ್ನು ಪ್ರಾಥಮಿಕ ಶಾಲಾಶಿಕ್ಷಕರ
ಸಂಬಂಧಿಸಿದಂತೆ ೧೯೭೫ರಲ್ಲಿ ನಡೆಸಿ
ಅಧ್ಯಯನವೊಂದು ತಿಳಿಸಿದೆ.

**೪) ಕೆಲಸಕ್ಕೆ ನಿಗದಿ ಮಾಡಿರು
ಸಮಯ:** ಹೆಚ್ಚು ಸಮಯ ಕೆ
ಮಾಡಿದರೆ ಸಂಬಳ ಹೆಚ್ಚು ಸಿಗುತ್ತ
ಮತ್ತು ಇದರ ಸಲುವಾಗಿ ತೃಪ್ತಿಯ
ಹೆಚ್ಚುತ್ತದೆ ಎಂಬುದು ಕೆಲವರ
ಪ್ರಾಯವಾಗಿರಬಹುದು. ಆದರೆ ಮಾ
ಬೇಕಾಗಿರುವ ಕೆಲಸವನ್ನು ಮುಂದೂಡ
ಸಾಧ್ಯವಾದಷ್ಟು ಮಟ್ಟಿಗೆ ನಿಗ
ಸಮಯದ ಮಿತಿಯಲ್ಲೇ ಕೆಲಸ ಅಚ
ಕಟ್ಟಾಗಿ ಮಾಡಿದರೆ ತೃಪ್ತಿ ಲಭಿಸುವ
ಸಾಧ್ಯತೆ ಹೆಚ್ಚು.

೫) ಬುದ್ಧಿ ಸಾಮರ್ಥ್ಯ: ಇ
ವೃತ್ತಿತೃಪ್ತಿಯೊಡನೆ ಯುಕ್ತ ಸಂಬ
ಹೊಂದಿದೆ ಎನ್ನಬಹುದು. ಆದರೆ ಇ
ಹೆಚ್ಚು ಸಮಯ ನಿಲ್ಲುವಂಥದಲ್ಲ; ಅ
ವಾದುದು. ಈ ಬಗ್ಗೆ ಪಾಶ್ಚಾ

ದ್ವಾಂಸರು ನಡೆಸಿದ ಸಂಶೋಧನೆಯು
ಲಿತಾಂಶ ಹೀಗಿದೆ. ಕೆಲಸ ಸಿಕ್ಕದೆ ಎಂದು
ಂತೋಷಗೊಂಡು ಚಾಕಲೇಟ್ ಫ್ಯಾಕ್ಟರಿ
ುಲ್ಲಿ ಕೆಲಸಕ್ಕೆ ಸೇರಿದ, ಅಧಿಕ ಬುದ್ಧಿ
ಾಮರ್ಥ್ಯವಿರುವ ಹೆಣ್ಣು ಮಕ್ಕಳು ಸ್ವಲ್ಪ
ನಗಳಲ್ಲೇ ತಮ್ಮ ಕೆಲಸದಲ್ಲಿ ಬೇಸರ
ೊಂಡು ಆಸಕ್ತಿ ಕಳೆದುಕೊಂಡರು.
ುಂದಾಲೋಚನೆ ಮಾಡದೆ ನಿರ್ಣಯ
ಗೆದುಕೊಂಡರೆ ಇದೇ ಪರಿಸ್ಥಿತಿಯನ್ನು
ದುರಿಸಬೇಕಾಗುತ್ತದೆ. ಇದೇ ಎರಡು
ಂಶಗಳನ್ನು ಪರಿಗಣಿಸಿ–ಅಂದರೆ, ಬುದ್ಧಿ
ಾಮರ್ಥ್ಯ ಮತ್ತು ವೃತ್ತಿತೃಪ್ತಿ–ಇವುಗಳ
ಡುವೆ ಸಾರ್ಥಕ ಸಂಬಂಧ ಇಲ್ಲ ಎಂಬ
ಚಾರವನ್ನು ಪಾರ್ ಮತ್ತು
ರ್ನ್‌ಹೌಸರ್ ಅವರ ಸಂಶೋಧನೆ
ಿಸಿದೆ. ಇಲ್ಲಿ ಗಮನಿಸಬೇಕಾಗಿರುವ ಅಂಶ
ನೆಂದರೆ ಪಡೆದಿರುವ ಬುದ್ಧಿಸಾಮರ್ಥ್ಯ
ನ್ನು ಉಪಯೋಗಿಸಿ ಯೋಚನೆ ಮಾಡಿದ
ಳಿಕ ನಿರ್ಣಯ ತೆಗೆದುಕೊಳ್ಳಬೇಕು
ತ್ತು ಯಾವುದೇ ಕೆಲಸ ಆಗಿರಲಿ
ಾಡಲು ಆರಂಭಿಸಬೇಕು. ಹೀಗಾದಲ್ಲಿ
ಾತ್ರ ಮಾಡುವ ವೃತ್ತಿಯಿಂದ ತೃಪ್ತಿ
ನ್ನು ಪಡೆಯುವುದು ಸಾಧ್ಯ.

೬) ಶಿಕ್ಷಣ: ವ್ಯಕ್ತಿ ಪಡೆದ ಶಿಕ್ಷಣ
ತ್ತು ಅವನ ಕೈ ಹಿಡಿದ ವೃತ್ತಿಯಲ್ಲಿ
ಕ್ಯವಾಗುವ ನೆಮ್ಮದಿ ಇಲ್ಲದೆ ತೃಪ್ತಿಗಳ
ುವೆ ಇರುವ ಸಂಬಂಧವನ್ನು ದೃಢಪಡಿಸು
ತ ಹಲವಾರು ನಿದರ್ಶನಗಳಿವೆ. ಉದಾ:
ೌಢಹಂತದ ಬಳಿಕ ಉದ್ಯೋಗಕ್ಕೆ
ಿದ ವ್ಯಕ್ತಿಗಳು ಅಧಿಕ ತೃಪ್ತರು ಎಂಬು
ನ್ನು ಪೋರ್ಸ್ ಅವರು ತಮ್ಮ ಅಧ್ಯಯನ
ದಲ್ಲಿ ತಿಳಿಸಿದ್ದಾರೆ. ಈ ಎರಡೂ ಪರಿಕಲ್ಪನೆಗಳ ನಡುವೆ ಸಾರ್ಥಕ ಸಂಬಂಧವಿಲ್ಲ ಎಂಬ ವಿಚಾರವನ್ನು ಈ ಸಂಬಂಧದಲ್ಲಿನ ಇತರ ಅಧ್ಯಯನಗಳು ನಿರೂಪಿಸಿವೆ.

೭) ಮನೋಭಾವ: ಇದು ಮನುಷ್ಯ ಮಾಡಬೇಕಾಗಿರುವ ಹಾಗೂ ಮಾಡಿರುವ ಎಲ್ಲ ಕೆಲಸ ಕಾರ್ಯಗಳ ಮೇಲೆ ಪ್ರಭಾವ ಬೀರುವಂಥ ಅಂಶವಾಗಿದೆ. ಮನೋಭಾವ ಎನ್ನುವುದು ಉದ್ಯೋಗ ಕೊಡಿಸುವ ಇಲ್ಲವೆ ಕೊಟ್ಟಿರುವ ಸಂಸ್ಥೆ, ವ್ಯಕ್ತಿ, ಪರಿಸರ, ಮಾಡಬೇಕಾಗಿರುವ ಕೆಲಸ ಮುಂತಾದವುಗಳ ಬಗ್ಗೆ ವ್ಯಕ್ತಿ ತಳೆದಿರುವ ಅಭಿಪ್ರಾಯವನ್ನು ತಿಳಿಸುತ್ತದೆ. ಪಾತ್ರ ನಿರ್ವಹಣೆ, ಕರ್ತವ್ಯಗಳ ನಿರ್ವಹಣೆ, ಹೊಣೆಗಾರಿಕೆಯನ್ನು ಅರಿತುಕೊಳ್ಳುವಿಕೆ, ಅಧ್ಯಯನ ಹಾಗೂ ಇತರ ಕೆಲಸಗಳಿಗೆ ಕೈ ಹಾಕಿದಾಗ ವ್ಯಕ್ತಿಗೆ ನೆರವಾಗುವಂಥದು ಮನೋಭಾವ. ಆದ್ದರಿಂದ ವ್ಯಕ್ತಿಯು ಮನೋಭಾವಗಳು ಸದೃಢವಾಗಿದ್ದಲ್ಲಿ ವ್ಯಕ್ತಿತೃಪ್ತಿಯೂ ಚೆನ್ನಾಗಿರುತ್ತದೆ. ಆದರೆ ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿದ್ದರೆ ವ್ಯಕ್ತಿಗೆ ತೃಪ್ತಿ ಎನ್ನುವುದು ಶೂನ್ಯವೇ ಸರಿ.

೮) ಆಸಕ್ತಿ: ಒಂದು ಕ್ರಿಯೆ ಇಲ್ಲವೆ ಭಾವನೆಯ ಬಗ್ಗೆ ಬುದ್ಧಿ ಮತ್ತು ಭಾವಗಳು ಎರಡೂ ಕೂಡಿ ಪಾತ್ರ ವಹಿಸುವಾಗ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುವಂಥ ವಾಸ್ತವ ಸ್ಥಿತಿಯೇ ಆಸಕ್ತಿ. ಕೆಲಸವೊಂದನ್ನು ಒಪ್ಪಿಕೊಳ್ಳಲು ಇಲ್ಲವೆ ಮಾಡಲು ಹೊರಟಾಗ ವ್ಯಕ್ತಿ ತೋರಿಸುವ ಕುತೂಹಲ. ಇದು ತಾತ್ಕಾಲಿಕವೋ

ಶಾಶ್ವತವೋ ಆಗಿರಬಹುದು. ಹೊಸದಾದ ಆಸಕ್ತಿಗಳನ್ನು ವ್ಯಕ್ತಿ ಪ್ರಭಾವಯುತವಾಗಿ ಬೆಳೆಸಿಕೊಳ್ಳಬೇಕಾದರೆ ತನ್ನಲ್ಲಿ ಈಗಾಗಲೇ ಮನೆ ಮಾಡಿಕೊಂಡಿರುವ ಆಸಕ್ತಿಗಳ ಬಗ್ಗೆ ತಿಳಿಯುವುದು ಅನಿವಾರ್ಯ. ಏಕೆಂದರೆ ವಯಸ್ಸು, ಲಿಂಗ, ಭೌತಬೆಳವಣಿಗೆ, ಬುದ್ಧಿ ಸಾಮರ್ಥ್ಯ, ಕಲಿಯಬೇಕಾದ ಕೆಲಸ ಇಲ್ಲವೆ ವಿಷಯ, ಪರಿಸರ ಮುಂತಾದವುಗಳು ಆಸಕ್ತಿಯ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ ಎಂಬುದನ್ನು ವಿವಿಧ ತಜ್ಞರು ತಿಳಿಸಿದ್ದಾರೆ. ವ್ಯಕ್ತಿಯೊಬ್ಬರು ಒಂದೋ ಎರಡೋ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಆಸಕ್ತಿಯನ್ನು ಬೆಳೆಸಿಕೊಂಡರೆ ಮಾತ್ರ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿರಲು ಸಾಕಾಗುವುದಿಲ್ಲ. ಅಂದರೆ, ತಾನು ಮಾಡುವ ಕೆಲಸದಿಂದ ನಿಜವಾದ ತೃಪ್ತಿಯನ್ನು ಕಾಣ ಬಯಸುವ ವ್ಯಕ್ತಿ ನಾಲ್ಕಾರು ಕ್ಷೇತ್ರಗಳಲ್ಲಿ, ಕಡೆಯ ಪಕ್ಷ, ಆಸಕ್ತನಾಗಿದ್ದರೆ ಸಮಸ್ಯೆಗಳು ಉದ್ಭವಿಸಿದರೂ ಪರಿಹಾರ ಕಂಡುಕೊಳ್ಳಬಹುದು. ಇಲ್ಲದಿದ್ದರೆ ಅತೃಪ್ತಿಯ ಮಹಾಸಾಗರದಲ್ಲಿ ದಿಕ್ಕುತಪ್ಪಿದ ದೋಣಿಯಲ್ಲಿ ಕುಳಿತು ಪ್ರಯಾಣ ಮಾಡಿದಂತಾಗುತ್ತದೆ ಜೀವನ.

೯) **ಪಾತ್ರ ಗ್ರಹಿಕೆ:** ಯಾವುದೇ ವ್ಯಕ್ತಿ ಆಗಿರಲಿ ವಿವಿಧ ಪಾತ್ರಗಳನ್ನು ವಿವಿಧ ಸನ್ನಿವೇಶಗಳಲ್ಲಿ ನಿರ್ವಹಿಸಬೇಕಾಗುವುದು ಸಹಜವೇ. ಇದರಿಂದ ಸಹೋದ್ಯೋಗಿಗಳಲ್ಲಿ ಕೆಲವರಿಗೆ ಅಸಮಾಧಾನವಾಗಿ ಇದನ್ನು ಅನ್ಯ ರೀತಿಯಲ್ಲಿ ವ್ಯಕ್ತಪಡಿಸಿದರೆ ವ್ಯಕ್ತಿ ನಿರ್ವಹಿಸುವ ವೃತ್ತಿ ಸಂಬಂಧೀ ಕಾರ್ಯಗಳ ಮೇಲೆ ಇಲ್ಲವೆ ವೃತ್ತಿಯಿಂದ ಲಭ್ಯವಾಗುವ ತೃಪ್ತಿಯ ಮೇಲೆ ಹಿತ ಪರಿಣಾ
ಉಂಟಾಗುವ ಸಾಧ್ಯತೆಗಳಿವೆ. ನಿರ್ವಹಿಸು
ಪಾತ್ರಗಳನ್ನು ಯುಕ್ತ ರೀತಿಯಲ್ಲಿ ಗ್ರ
ಸಿದ್ದೇ ಆದರೆ ತೊಂದರೆ ಉಂಟಾಗದು.
ಬಗ್ಗೆ ೧೯೯೩ರಲ್ಲಿ ನಡೆದ ಒಂದು ಅಧ್ಯಯ
ನದ ಪ್ರಕಾರ ಅಧ್ಯಾಪಕರ ಹಾಗೂ ಪ್ರಶಿ
ಕರ ಪಾತ್ರಗ್ರಹಿಕೆಗಳು ಮತ್ತು ವೃ
ಮನೋಭಾವಗಳು ಜೊತೆಗೂಡಿ ಅ
ವೃತ್ತಿ ತೃಪ್ತಿಯ ಮೇಲೆ ಅನ್ಯೋ
ಕ್ರಿಯಾ ಪರಿಣಾಮ ಬೀರುತ್ತವೆ ಎಂಬು
ಸ್ಥಿರಪಟ್ಟಿದೆ. ಪ್ರಾಥಮಿಕ ಶಾಲಾ ಶಿಕ್ಷ
ಪಾತ್ರಗ್ರಹಿಕೆಗಳು ಅವರ ವೃತ್ತಿತೃ
ಯೊಡನೆ ಹೊಂದಿರುವ ಸಂಬಂಧ ಸಾರ್ಥ
ಯನ್ನು ಪಡೆದಿವೆ ಎಂಬ ವಿಚ
ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ
ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂ
ದಂತೆ ೧೯೯೫ರಲ್ಲಿ ನಡೆಸಿದ
ಅಧ್ಯಯನ ತಿಳಿಸಿದೆ.

(ಆ) **ಕೆಲಸಕ್ಕೆ ಸಂಬಂಧಿಸಿದ ಅಂಶ**

೧) **ಕೆಲಸದ ಸ್ವರೂಪ:** ಇದು
ಮುಖ್ಯವಾದ ಅಂಶ. ವೃತ್ತಿತೃಪ್ತಿ
ವ್ಯಕ್ತಿ ಮಾಡುವ ಕೆಲಸದ ಸ್ವರೂ
ಮೇಲೆ ಅವಲಂಬಿತವಾಗಿದೆ ಎಂಬು
ಹಾಪಕ್ ಎಂಬ ತಜ್ಞರು ತಿಳಿಸಿ
ಕೌಶಲ್ಯರಹಿತ ಕೆಲಸಗಳಲ್ಲಿ ಇರುವವ
ವೃತ್ತೀಯವಾಗಿ ತರಬೇತಿ ಪಡೆದು
ಗಳು ತಮ್ಮ ತಮ್ಮ ವೃತ್ತಿಗಳಲ್ಲಿ
ತೃಪ್ತರಾಗಿ ಇರುತ್ತಾರೆ ಎಂಬ
ಹಲವಾರು ಅಧ್ಯಯನಗಳಿಂದ ವ್ಯಕ್ತ
ಒಂದೇ ತೆರನ ಕೆಲಸದಲ್ಲಿ ತೊಡಗಿರು
ಬದಲಾಗಿ ಅನುಕೂಲವಿದ್ದಲ್ಲಿ

ಸಂಬಂಧಿಸಿದಂತೆಯೇ ಇತರ ವಿವಿಧ ಕೆಲಸಗಳನ್ನು ಮಾಡುವುದರಿಂದ ಅಧಿಕ ವೃತ್ತಿತೃಪ್ತಿ ಲಭಿಸುತ್ತದೆ ಎಂಬುದು ತಜ್ಞರ ಅಭಿಪ್ರಾಯ.

೨) ಅಗತ್ಯವಾದ ಕೌಶಲಗಳು: ಎಂ. ಫೇರ್‌ಜೈಲ್ಡ್ ಎಂಬವರು ಕೌಶಲ ಮತ್ತು ವೃತ್ತಿತೃಪ್ತಿಗಳ ನಡುವಣ ಸಂಬಂಧವನ್ನು ಕಂಡು ಹಿಡಿಯಲು ನಡೆಸಿದ ಅಧ್ಯಯನದಿಂದ ತಿಳಿದು ಬಂದ ಅಂಶಗಳು ಎಂದರೆ ಉಚಿತ ಪ್ರಮಾಣದಲ್ಲಿ ಕೌಶಲವೊಂದು ವ್ಯಕ್ತಿಯಲ್ಲಿ ಇದೆ ಎಂದರೆ ಅದು ಕೆಲಸಗಾರನ ತೃಪ್ತಿಯ ಮೂಲ ಆಕರವಾಗಿ ಪರಿಣಮಿಸುತ್ತದೆ. ಎಲ್ಲಿ ಕೌಶಲದಲ್ಲಿ ನ ತೃಪ್ತಿ ಭೌತಿಕವಾಗಿ ಕುಂಠಿತವಾಗುತ್ತದೋ ಅಲ್ಲಿ ಕೆಲಸದ ನಿಯಮಗಳು ಇಲ್ಲವೆ ಕೂಲಿಗಳಲ್ಲಿನ ತೃಪ್ತಿಯು ಮಾತ್ರ ಮೇಲುಗೈ ಯಾಗಿರುತ್ತದೆ.

೩) ವೃತ್ತಿಯ ಸ್ಥಾನಮಾನ: ವೃತ್ತಿಯೊಂದನ್ನು ಪಡೆಯುವುದರಿಂದ ವ್ಯಕ್ತಿಯ ಸ್ಥಾನಮಾನ ಹೇಗೆ ಬದಲಾಗುತ್ತದೋ ಅದೇ ರೀತಿ ವ್ಯಕ್ತಿಯೊಬ್ಬ ಕೆಲಸ ಮಾಡುತ್ತಿರುವ ಪರಿಯಿಂದಾಗಿ ಕೆಲಸದ ಸ್ಥಾನಮಾನವೂ ಬದಲಾಗುತ್ತದೆ ಎನ್ನಬಹುದು. ವೃತ್ತಿತೃಪ್ತಿಯು ವೃತ್ತಿಯ ಸ್ಥಾನಮಾನದೊಡನೆ ಸಂಬಂಧ ಹೊಂದಿದೆ ಎಂಬುದನ್ನು ಕೆಲವು ತಜ್ಞರು ತಿಳಿಸಿರುವರು. ಆದರೆ ವೃತ್ತಿಯ ಸ್ಥಾನಮಾನವು ವೃತ್ತಿತೃಪ್ತಿಗೆ ಸಮನಾದುದಲ್ಲ.

೪) ಕೆಲಸ ನೀಡುವ ಸಂಸ್ಥೆಯ ಸ್ವರೂಪ: ವೃತ್ತಿಯಲ್ಲಿರುವ ವ್ಯಕ್ತಿಗಳಿಗೆ ಅರ್ಥಾತ್ ಉದ್ಯೋಗಿಗಳಿಗೆ ಅವಶ್ಯವಾದ ಸೌಲಭ್ಯ, ಸಹಕಾರ, ಅವಕಾಶಗಳನ್ನು ಒದಗಿಸಿದ್ದೇ ಆದರೆ ವೃತ್ತಿತೃಪ್ತಿ ಭಾಗಶಃ ಲಭ್ಯವಾಗುವುದೆಂದು ಹೇಳಬಹುದು. ತಾತ್ಕಾಲಿಕ ವೃತ್ತಿಯ ಅವಕಾಶಗಳನ್ನು ಒದಗಿಸುವುದು, ವಿನಾಕಾರಣ ಉದ್ಯೋಗಿಗಳನ್ನು ಕೆಲಸದಿಂದ ತೆಗೆದುಹಾಕುವುದು, ಇಲ್ಲದ ಸಲ್ಲದ ಅಪವಾದ ಹೊರಸುವುದು, ಬೇರೆ ರೀತಿಯ ತೊಂದರೆಗಳನ್ನು ಕೊಡುವುದು ಮುಂತಾದವುಗಳು ಕೆಲಸ ಕೊಡುವ ಸಂಸ್ಥೆಯ ಲಕ್ಷಣಗಳಾದರೆ ಅಂಥಲ್ಲಿ ಕೆಲಸ ಮಾಡುವವರಿಗೆ ವೃತ್ತಿತೃಪ್ತಿ ಲಭ್ಯವಾಗುವುದು ಹೇಗೆತಾನೇ ಸಾಧ್ಯ?

೫) ಭದ್ರತೆ: ಹಿಂದಿನ ಸಂದರ್ಭದಲ್ಲಿ ಹೇಳಿರುವ ಸನ್ನಿವೇಶಗಳು ಇರುವೆಡೆ ಉದ್ಯೋಗಿಗಳಿಗೆ ಭದ್ರತೆ ಲಭ್ಯವಾಗುತ್ತದೆಯೇ? ಎಂಬ ಪ್ರಶ್ನೆಗೆ ಪೂರಕವಾಗಿ ಮತ್ತಷ್ಟು ಅಂಶಗಳ ಮೇಲೆ ಗಮನಹರಿಸಬೇಕಾಗಿದೆ. ಅವಾವುವೆಂದರೆ—ಆರ್ಥಿಕ ಭದ್ರತೆ, ವೃದ್ಧಾಪ್ಯಕ್ಕಾಗಿ ಭದ್ರತೆ, ಕುಟುಂಬದ ಭದ್ರತೆ, ಮುಂತಾದವು. ಒಬ್ಬ ವ್ಯಕ್ತಿ ಮಾಡುತ್ತಿರುವ ಕೆಲಸದಿಂದ ಅವನಿಗೆ ವೃತ್ತಿತೃಪ್ತಿ ದೊರಕಬೇಕಾದರೆ ಅಥವಾ ದೊರಕಿದೆ ಎಂದರೆ ಅಲ್ಲಿ ಭದ್ರತೆ ಇದೆ ಎಂಬುದು ಸುಸ್ಪಷ್ಟ. ಆದ್ದರಿಂದ ಭದ್ರತೆ ಎಂಬ ಅಂಶ ವೃತ್ತಿತೃಪ್ತಿಗೆ ಕೊಡುಗೆ ಕೊಡುವಂಥದು ಮಾತ್ರವಲ್ಲ ಬೆಂಬಲ ಕೊಡುವಂಥದೂ ಆಗಿದೆ ಎನ್ನುವುದೂ ಗಮನಾರ್ಹ.

೬) ಆದಾಯ: ಪೂರ್ಣ ವಿದ್ಯಾವಂತನಾಗಿರಲಿ ಒಂದಲ್ಲ ಒಂದು ಕೆಲಸಕ್ಕೆ ಸೇರಿ

ಕೊಳ್ಳುತ್ತಾನೆ. ಆದರೆ ತನ್ನ ಶೈಕ್ಷಣಿಕ ಅರ್ಹತೆಗೆ ತಕ್ಕ ಉದ್ಯೋಗ ದೊರೆತಿದ್ದು ಅಲ್ಲಿ ಆತನಿಗೆ ಯುಕ್ತವೇತನ ಲಭಿಸಿದ್ದರೆ ಅಂಥ ವ್ಯಕ್ತಿಗೆ ನಿಶ್ಚಯವಾಗಿ ವೃತ್ತಿತೃಪ್ತಿ ಸಿಗುವುದರಲ್ಲಿ ಸಂಶಯವಿಲ್ಲ. ಇದಕ್ಕೆ ವಿರುದ್ಧವಾದ ಪರಿಸ್ಥಿತಿಯಲ್ಲಿ ವ್ಯಕ್ತಿಯ ವೃತ್ತಿತೃಪ್ತಿಯು ನಿರಾಶಾದಾಯಕವಾಗುವ ಸನ್ನಿವೇಶವೇ ಅಧಿಕ. ಏಕೆಂದರೆ ಸಂಬಳ ಹೆಚ್ಚಾದಂತೆ ವೃತ್ತಿತೃಪ್ತಿ ಹೆಚ್ಚುತ್ತದೆ ಎಂಬ ಮನೋಭಾವವನ್ನು ಹೊಂದಿರುವ ಜನರೇ ನಮ್ಮ ಸಮಾಜದಲ್ಲಿ ಹೆಚ್ಚಾಗಿರುವವರು. ಸಂಬಳದಲ್ಲಿ ಏರಿಕೆ ಇಲ್ಲದಿದ್ದಾಗ ಇಲ್ಲವೆ ಸ್ಥಗಿತತೆ ಇರುವಾಗ ವೃತ್ತಿಯಲ್ಲಿನ ಆಸಕ್ತಿ ಕಡಿಮೆಯಾಗಿ ವೃತ್ತಿತೃಪ್ತಿ ಕ್ಷೀಣಿಸುತ್ತದೆ ಎಂಬುದನ್ನು ಹಲವಾರು ಸಂಶೋಧನೆಗಳು ತಿಳಿಸಿವೆ.

೭) **ಮುಂದುವರಿಯುವ ಅವಕಾಶಗಳು:** ಕೆಲಸದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ತಾನು ಮುಂದುವರಿಯುವ ಅವಕಾಶಗಳಿಗಾಗಿ ಕಾಯುತ್ತಿರುತ್ತಾನೆ ಎಂಬುದು ಸರ್ವವೇದ್ಯ. ಅದರಲ್ಲೂ ಹೊಸದಾಗಿ ಕೆಲಸಕ್ಕೆ ಸೇರಿರುವವರು ಹಾಗೂ ಕೌಶಲಯುಕ್ತ ಕೆಲಸಗಾರರುಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಇದು ಅತ್ಯಂತ ಮುಖ್ಯವಿಚಾರ. ವ್ಯಕ್ತಿಯಾರೇ ಆಗಿರಲಿ ವೃತ್ತಿ ಯಾವುದೇ ಆಗಿರಲಿ ತನ್ನ ಕೆಲಸದಲ್ಲಿನ ಬಡ್ತಿಗಾಗಿ ವ್ಯಕ್ತಿ ಪ್ರಯತ್ನಿಸುವುದು ಸಹಜ. ಇದಕ್ಕೆ ಉಪಯೋಗವಾಗುವಂಥ ಕೆಲಸಗಳನ್ನು ಮಾಡಲು ವಿವಿಧ ಮಾರ್ಗಗಳನ್ನು ಕಂಡುಕೊಳ್ಳುತ್ತಾನೆ. ಸಂಬಂಧಪಟ್ಟವರ ಮೆಚ್ಚುಗೆಯನ್ನು ಪಡೆಯು

ತ್ತಾನೆ. ಇಲ್ಲಿ ವೃತ್ತಿತೃಪ್ತಿ ಎನ್ನುವ
ವಾಸ್ತವವಾಗಿ ಮೂಡಿ ಬರುತ್ತದೆ.

೮) **ಕೆಲಸದ ಸ್ಥಿತಿಗತಿಗಳು:** ಕೆಲ
ಸಮಯ, ಕೆಲಸದ ಸ್ಥಳ, ಸನ್ನಿ
ಮತ್ತು ಗಾಳಿ, ಬೆಳಕು, ಯಂತ್ರ
ಚಾಲನೆ, ತೆಗೆದುಕೊಳ್ಳಬೇಕಾಗಿ
ಜವಾಬ್ದಾರಿ, ಮೇಲ್ವಿಚಾರಣೆ,
ಗಾರರ ಬಗ್ಗೆ ಮೇಲ್ವಿಚಾರಕರ ಮ
ಭಾವಗಳು, ಮುಂತಾದವನ್ನು
ಕೊಳ್ಳಬಹುದು. ಆದ್ದರಿಂದ ಈ ಅಂಶವ
ವೃತ್ತಿತೃಪ್ತಿಯ ಮಾಧ್ಯಮ ಎಂದು
ವುದಿದೆ. ಗಮನಿಸಬೇಕಾದ ಹಲವ
ಅಂಶಗಳ ಪೈಕಿ ಇದು ಬಲು ಮುಖ್ಯ
ಅಂಶ.

೯) **ಸಹೋದ್ಯೋಗಿಗ**
ಸೌಹಾರ್ದಯುತ ಪರಿಸರದಲ್ಲಿ
ಮಾಡುವುದರಿಂದ ವ್ಯಕ್ತಿ ಹೆಚ್ಚು
ಸಂತೋಷವಾಗಿರಲು ಸಾಧ್ಯ. ಅವರ ಸ
ದ್ಯೋಗಿಗಳೇ ದ್ವೇಷ ಮಾಡುವಂಥ
ಕೇಡು ಬಯಸುವವರೂ ಅವಲ್ಲಿ ಅ
ಜೀವನ ದುಃಖಕ್ಕೆ ಎಡೆ ಮಾಡಿಕ
ತ್ತದೆ. ಆದ್ದರಿಂದ ಈ ಅಂಶವೂ ತಕ್ಕ ಮ
ಮುಖ್ಯವಾದುದು ಎಂಬುದು ಗಮನ

ಇದುವರೆಗೆ ಹೇಳಿರುವ ಅಂ
ಪ್ರಧಾನವಾದಂಥವುಗಳು. ಕೆಲವೊಂದ
ಸರದಲ್ಲಿ ಈ ಅಂಶಗಳನ್ನು ಮಾತ್ರ
ಗಣಿಸುವುದರಿಂದ ಪೂರ್ಣ ತೃಪ್ತಿ
ಬಹುದು. ಅಂದರೆ, ಇನ್ನೂ ಹಲ
ಅಂಶಗಳು ವೃತ್ತಿತೃಪ್ತಿಯ ಮೇಲೆ ಪ್ರ
ಬೀರುವವು. ಆ ಅಂಶಗಳು ಎಂದರೆ
ಚಿತ್ತವಿಲ್ಲದಿರುವುದು, ಪ್ರತಿಯೊ

ವಿಶ್ಲೇಷಿಸುವ ಮನೋಭಾವ, ಅತಿಯಾಗಿ ತರ್ಕಿಸುವುದು, ಅತಿ ಸೂಕ್ಷ್ಮತೆ, ಕೆಲಸದ ಬಗ್ಗೆ ತಿಳಿದುಕೊಳ್ಳುವ ಮೊದಲೇ ಅದನ್ನು ಆರಂಭಿಸುವುದು, ಅಸಹನೆ, ಮೌನ ಹಾಗೂ ಗೋಪ್ಯವಾಗಿ ಕೆಲಸ ಮಾಡಲಾಗದಿರುವುದು, ಏಕಾಗ್ರತೆ ಇಲ್ಲದಿರುವುದು, ಗಮನ ಕಳೆದುಕೊಳ್ಳುವುದು, ಅತಿಯಾಗಿ ಮಾತನಾಡುವುದು, ಆಸಕ್ತಿ ಇಲ್ಲದ ಕೆಲಸಗಳಲ್ಲಿ ಅತಿಯಾಗಿ ತನ್ನನ್ನು ತೊಡಗಿಸಿಕೊಳ್ಳುವಿಕೆ, ಪರಿಸರವನ್ನು ಸಜ್ಜುಗೊಳಿಸದಿರುವಿಕೆ, ಸಾಮರ್ಥ್ಯಗಳ ಅಭಾವ, ಆತ್ಮವಿಶ್ವಾಸ ಇಲ್ಲದಿರುವಿಕೆ, ಮನೆಯಲ್ಲಿರುವ ಜನರ ಒತ್ತಡ, ಮನೆಯ ಪರಿಸರ, ಮಾಡಬೇಕಾಗಿರುವ ಕರ್ತವ್ಯಗಳು, ವ್ಯಕ್ತಿ ನಿರ್ವಹಿಸಬೇಕಾಗಿರುವ ಪಾತ್ರಗಳು, ಸ್ನೇಹಿತರ ಟೀಕೆಗಳು, ಸಹೋದ್ಯೋಗಿಗಳ ವಿಮರ್ಶೆ ಮುಂತಾದವುಗಳು ವ್ಯಕ್ತಿಯ ಮೇಲೆ ಪ್ರಭಾವ ಬೀರುವ ಸಾಧ್ಯತೆಗಳು ಉಂಟು. ಆದರೆ ಇವೆಲ್ಲವನ್ನೂ ಮೆಟ್ಟಿನಿಂತು "ಕೃಷಿತೋ ನಾಸ್ತಿದುರ್ಭಿಕ್ಷಂ" ಹಾಗೂ "ಧೈರ್ಯಂ ಸರ್ವತ್ರ ಸಾಧನಂ"ಎಂಬ ಸುಭಾಷಿತಗಳನ್ನು ಮನನ ಮಾಡುತ್ತ ಮುಂದೆ ಹೊರಟ ವ್ಯಕ್ತಿಗೆ ತಾನು ಮಾಡುವ ಕೆಲಸದಿಂದ ತೃಪ್ತಿ ಸಿಗುವುದರಲ್ಲಿ ಸಂದೇಹವೇ? ಅಥವಾ ಸಿಗಲಾರದೆನ್ನುವಿರಾ?

ವೃತ್ತಿತೃಪ್ತಿಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ?

ಈ ಮುಂದೆ ಸೂಚಿಸಿರುವ ಅಂಶಗಳನ್ನು ಅನುಸರಿಸುವುದರಿಂದ ಯಾವ ವ್ಯಕ್ತಿಯೇ ಆಗಿರಲಿ ವೃತ್ತಿತೃಪ್ತಿಯನ್ನು ಹೆಚ್ಚಿಸಿಕೊಳ್ಳಬಹುದು:

೧. ತಮ್ಮ ಅನಿಸಿಕೆ ಹಾಗೂ ಭಾವನೆಗಳನ್ನು ವ್ಯಕ್ತಪಡಿಸಲು ಕೆಲಸಗಾರರಿಗೆ ಉತ್ತೇಜನ.

೨. ಕೆಲಸಗಾರರ ಅಭಿಪ್ರಾಯಗಳನ್ನು ನಿರ್ವಾಹಕರು ಒಪ್ಪಿಕೊಳ್ಳುವುದು.

೩. ಸಾಧ್ಯವಾದಷ್ಟು ಮಟ್ಟಿಗೆ ಎಲ್ಲ ವ್ಯಕ್ತಿಗಳಿಗೂ ಅವರವರ ವೃತ್ತಿಯಲ್ಲಿ ಬೆಳೆಯಲು ಪ್ರೋತ್ಸಾಹ ನೀಡುವುದು.

೪. ತಮ್ಮ ಮನೋಭಾವ, ಆಸಕ್ತಿ, ಅಭಿರುಚಿಗಳನ್ನು ಹೆಚ್ಚಿಸಿಕೊಳ್ಳಲು ಕೆಲಸಗಾರರಿಗೆ ನಿರ್ದೇಶನ.

೫. ಮಾಡುತ್ತಿರುವ ಕೆಲಸದ ಪ್ರಾಮುಖ್ಯವನ್ನು ಒತ್ತಿಹೇಳುತ್ತ ಈ ಕೆಲಸ ವ್ಯಕ್ತಿಗೆ ಹೇಗೆ ಮತ್ತು ಎಷ್ಟರ ಮಟ್ಟಿಗೆ ಭದ್ರತೆ ನೀಡುತ್ತದೆ ಎಂಬುದನ್ನು ತಿಳಿಯಹೇಳುವುದು ಇಲ್ಲವೆ ನಿರೂಪಿಸುವುದು.

೬. ಅವಶ್ಯಕತೆ ಇದ್ದಲ್ಲಿ ಉದ್ಯೋಗಿಗಳು, ವೃತ್ತಿಗೆ ನೇರವಾಗಿ ಇಲ್ಲವೆ ಪರೋಕ್ಷವಾಗಿ ಸಂಬಂಧಪಟ್ಟ ಆಸಕ್ತಿಗಳನ್ನು ಇಮ್ಮಡಿಮಾಡಿಕೊಳ್ಳಲು, ವಿವಿಧ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ನಿರ್ದೇಶನ ಹಾಗೂ ಸಹಾಯ ನೀಡುವುದು.

೭. ಸಂಸ್ಥೆಯ ಮುಖ್ಯಸ್ಥರು ಅತಿಯಾದ ಬಿಗಿ, ಕಟ್ಟಳೆ, ಅಸಹಕಾರ, ನಿರುತ್ಸಾಹ, ಅಸಮಾಧಾನ ಮುಂತಾದವುಗಳಿಗೆ ಎಡೆಮಾಡಿಕೊಡದೆ ಲಭ್ಯಾಲಭ್ಯಗಳನ್ನು ನಿರ್ವಂಚನೆಯಿಂದ ಒದಗಿಸುವುದು.

೮. ಅಧಿಕ ಸೇವೆ ಸಲ್ಲಿಸಿರುವ ಹಾಗೂ

ಉತ್ತಮಮಟ್ಟದ ಉತ್ಸಾಹಶೀಲರಿಗೆ ಅಧಿಕಬಡ್ತಿ ಹಾಗೂ ಉನ್ನತ ವೇತನ ಶ್ರೇಣಿಗಳಿಗೆ ಶಿಫಾರಸ್ಸುಮಾಡುತ್ತಾ, ಇಂಥ ವ್ಯಕ್ತಿಗಳು ಸಂಸ್ಥೆಯ ಏಳಿಗೆಗೆ ಮತ್ತು ಸಂಸ್ಥೆಯ ಉತ್ತಮತೆಗೆ ಅಗತ್ಯ ಎಂಬುದನ್ನು ಅರಿಯಬೇಕು.

೯. ಮಾಡುವ ಕೆಲಸದಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುವಂತೆ ಹಾಗೂ ಉಳಿಸಿಕೊಳ್ಳುವಂತೆಮಾಡುವುದು.

೧೦. ಕೆಲಸಕ್ಕೆ ಸಂಬಂಧಿಸಿದ ವಿಚಾರಗಳನ್ನು ತಿಳಿಯಲು ಮತ್ತು ಕಲಿಯಲು ಅವಕಾಶವೀಯುವುದು.

೧೧. ಹೆಚ್ಚು ಪರಿಣಾಮಬೀರುವ ರೀತಿಯಲ್ಲಿ ಕರ್ತವ್ಯ ನಿರ್ವಹಣೆ.

೧೨. ಏಕಾಗ್ರಚಿತ್ತರಾಗಿ ಕೆಲಸ ಮ... ವುದು.

೧೩. ಸಹೋದ್ಯೋಗಿಗಳೊಡನೆ ಉತ್ತ... ರೀತಿಯ ಸಾಮಾಜಿಕ ಸಂಬಂಧ...

೧೪. ಕೆಲಸ ಕೊಡಿಸಿದವರಿಗೆ ಹ... ಕೊಟ್ಟವರಿಗೆ ಸ್ವಾಮಿನಿಷ್ಠೆ.

೧೫. ನಿಯಮಿತ ವಿಧಿಸಿದ ಕರ್ತವ... ಯುಕ್ತ ನಿರ್ವಹಣೆ.

೧೬. ಅಧಿಕಾರಿಗಳು ನೀಡಿದ ನಿರ್ದೇಶ... ಅನುಸರಣೆ.

೧೭. ಕೇಳಿದಾಗ ಮಾತ್ರ ಸಲಹೆಗಳ... ನೀಡುವುದು.

೧೮. ಕೆಲಸದ ಪರಿಸರವನ್ನು ಹಿತ... ವಾಗಿಸಿಕೊಳ್ಳುವುದು.

೧೯. ಸಕಾಲದಲ್ಲಿ ಯುಕ್ತ ಹಾಗೂ ... ಪಾತ್ರಗಳ ನಿರ್ವಹಣೆ.

"ಸದಾ ನಮ್ಮ ಮನೆಯಲ್ಲಿ ನಾವು ಜಗಳ ಆಡುವುದು, ಬಡಿದಾಡುವುದು, ಬೈದಾಡುವುದು ಇವೆಲ್ಲ ಪಕ್ಕದ ಮನೆಗೆ ಕೇಳಿಸುತ್ತೆ, ಚೆನ್ನಾಗಿಲ್ಲ" ಅಂತ ಹೇಳಿ ಮೈಲಾರಿ ಮಧ್ಯದ ಗೋಡೆಯಲ್ಲಿದ್ದ ಕಿಟಕಿಯನ್ನು ಇಟ್ಟಿಗೆ ಗಾರೆ ಹಾಕಿ ಮುಚ್ಚಿದ.

ಅವನ ಹೆಂಡತಿ "ಅದು ಸರಿ! ಪಕ್ಕದ ಮನೆಯಲ್ಲಾಗೋ ಜಗಳಾನ ಇನ್ನು ಮೇಲೆ ನಾವು ನೋಡಿ ಸಂತೋಷಪಡುವ ಹಾಗಿಲ್ಲವಲ್ಲ....ಪೂರ್ತಿ ಮುಚ್ಚಬೇಡಿ... ಅಂಗೈ ಅಗಲದಷ್ಟು ತೂತು ಇರಿಸಿ..." ಅಂದಳು.

(ಕಸ್ತೂರಿ ಅವರ 'ಹಾಸ್ಯದ ಚಟಾಕಿ' ಇಂದ)

ೀರು

ಜಿ. ಎಸ್. ಭಟ್ಟ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ೃಥ್ವಿ, ಅಗ್ನಿ, ಆಕಾಶ, ವಾಯು, ನೀರು
–ಇವು ಪಂಚಭೂತಗಳು. ಪ್ರಪಂಚ
ಡೆಯುವುದೇ ಈ ಪಂಚಭೂತಗಳಿಂದ
ಂಬುದು ಪ್ರಾಚೀನ ದಾರ್ಶನಿಕರ ಅಭಿ
್ರಾಯ. ನೀರು ನಮ್ಮ ಬದುಕಿನ
ವಿಭಾಜ್ಯ ಅಂಗ. ಆಹಾರವಿಲ್ಲದೆಯೂ
ಾವು ಕೆಲಕಾಲ ಬದುಕಬಹುದು. ಆದರೆ
ೀರಿಲ್ಲದೆ ಬದುಕಲಾರೆವು. ಸರ್ವಪ್ರಾಣಿ
ಳಿಗೂ ನೀರು ಅಗತ್ಯವಾಗಿದೆ. ಮೊತ್ತ
ೊದಲು ಜೀವಿ ಕಾಣಿಸಿಕೊಂಡಿದ್ದೇ
ಮುದ್ರದಲ್ಲಿ ಎಂಬುದು ವಿಜ್ಞಾನಿಗಳ
ಭಿಪ್ರಾಯ. ಪ್ರಪಂಚದ ಪ್ರಮುಖ
ಾಗರಿಕತೆಗಳೆಲ್ಲಾ ಬಾಳಿಬೆಳಗಿದ್ದು ನದೀ
ೀರದಲ್ಲಿ, ಟೈಗ್ರಿಸ್–ಯೂಪ್ರಟಿಸ್ ನದಿ
ಳ ಮಧ್ಯೆ ಅಸ್ಸೀರಿಯಾ ನಾಗರಿಕತೆ ತಲೆ
ತ್ತಿತ್ತು. ಜಗತ್ತಿನ ಪ್ರಾಚೀನ ನಾಗರಿಕತೆ
ಳಲ್ಲಿ ಒಂದಾದ ಈಜಿಪ್ಟ್ ನಾಗರಿಕತೆ
ುನ್ನು ನೈಲ್‌ನ ಕಾಣಿಕೆಯೆಂದೇ ಬಣ್ಣಿಸ
ಾಗಿದೆ. ಮೆಡಿಟರೇನಿಯನ್ ಸಮುದ್ರದ
ಂದು ಕವಲೇ ಈಜಿಯನ್ ಸಮುದ್ರ.
ದರ ಸುತ್ತಲೂ ಬೆಳೆದ ನಾಗರಿಕತೆ
ಜಿಯನ್ ನಾಗರಿಕತೆಯೆಂದೇ ಹೆಸ
ರಾಯಿತು. ಮೆಡಿಟರೇನಿಯನ್ ಮತ್ತು ಈಜಿಯನ್ ಮಧ್ಯೆ ಬೆಳೆದದ್ದು ಪಾಶ್ಚಾತ್ಯ ಸಂಸ್ಕೃತಿಯ ಉಗಮ ಸ್ಥಾನವೆಂದು ಪರಿಗಣಿಸಲಾಗಿರುವ ಗ್ರೀಕ್ ನಾಗರಿಕತೆ. ಹಲವು ನಾಗರಿಕತೆಗಳು ಹುಟ್ಟಿ ಬೆಳೆದು ಅವನತಿ ಹೊಂದಿದವು. ಆದರೆ ಚೀನಾದ ನಾಗರಿಕತೆ ನಿರಂತರವಾಗಿ ಮುಂದುವರೆಯಿತು. ಪ್ರಪಂಚದ ಇತರ ನಾಗರಿಕತೆಯಂತೆಯೇ ಚೀನಾದ ನಾಗರಿಕತೆಯಾದರೂ ಬೆಳೆದದ್ದು ಹೊವಾಂಗ್‌ಹೊ ಮತ್ತು ಯಾಂಗ್ ಗಟ್‌ಸಿ ದಂಡೆಯ ಮೇಲೆ. ಸಿಂಧೂಕಣಿವೆಯ ನಾಗರಿಕತೆ ಕೂಡ ಬಾಳಿ ಬೆಳಗಿದ್ದು ಸಿಂಧೂನದಿಯ ತಟದಲ್ಲಿ. ಹೀಗೆ ಎಲ್ಲಿ ನೀರಿದೆಯೋ ಅಲ್ಲಿ ನಾಗರಿಕತೆಯಿದೆ ಎಂಬುದು ಸ್ಪಷ್ಟ.

ಜೀವಿಯ ಉದ್ಭವಕ್ಕೆ ಕಾರಣವಾದ ನೀರೇ ಕಾಲಕ್ರಮದಲ್ಲಿ ಅವುಗಳ ವಿಕಸನಕ್ಕೂ ಹಾದಿ ಮಾಡಿಕೊಟ್ಟಿತು. ನಮ್ಮ ದೇಹದಲ್ಲಿ ನಡೆಯುವ ಪಚನ ಕ್ರಿಯೆ, ಪೋಷಕಗಳ ಸಾಗಣೆ ಇವೆಲ್ಲ ನಡೆಯುವುದು ನೀರಿನಿಂದಲೇ. ನಮಗೆ ಅಜೀರ್ಣವಾಗಿದೆಯೆಂದರೆ ವೈದ್ಯರು ನೀಡುವ ಸಲಹೆ

ಆಧಾರ: ಮೈಸೂರು 'ಆಕಾಶವಾಣಿ' ಚಿಂತನದಲ್ಲಿ ಪ್ರಸಾರವಾದುದು.

‘ಸಾಕಷ್ಟು ನೀರು ಕುಡಿಯಿರಿ’ ಎಂಬುದೇ ಆಗಿದೆ. ನೀರು ಒಂದು ದಿವ್ಯ ಔಷಧಿ. ಇಂದು ನಮಗೆ ಬೆಳಕು ನೀಡುತ್ತಿರುವ ವಿದ್ಯುತ್ತಿನ ಉತ್ಪಾದನೆಯು ಬಹುಭಾಗ ಆಗುತ್ತಿರುವುದು ಜಲಾಗಾರದಿಂದ. ನಮ್ಮ ವಿವಿಧ ಕೈಗಾರಿಕೆಗಳಿಗೆ ಕೂಡ ನೀರು ತೀರ ಅಗತ್ಯ. ನಮ್ಮ ಪರಿಸರ ನೈರ್ಮಲ್ಯ ಕಾಪಾಡಲು ಅಗತ್ಯವಾದ ಆಹಾರ ಪದಾರ್ಥಗಳನ್ನು ಬೆಳೆಯಲು ಕೂಡ ನೀರು ಅಗತ್ಯ. “ಆಕಾಶವು ಸೂರ್ಯಕಿರಣಗಳ ಮೂಲಕ ಸಮುದ್ರದ ನೀರನ್ನು ಹೀರಿಕೊಂಡು ಅದನ್ನು ತನ್ನ ಗರ್ಭದಲ್ಲಿರಿಸಿಕೊಂಡು ಅಂತಿಮವಾಗಿ ಇಮ್ಮಡಿ ಮುಮ್ಮಡಿಯಾಗಿ ಮಳೆ ಸುರಿಸುವುದು” ಎಂದು ರಾಮಾಯಣದಲ್ಲಿ ಉಲ್ಲೇಖಿಸಲಾಗಿದೆ. ಭಾರತೀಯರು ಪವಿತ್ರವೆಂದು ಪರಿಗಣಿಸಿರುವ ಗಂಗಾಜಲ ಬಹುಕಾಲ ಇಟ್ಟರೂ ಕೆಡುವುದಿಲ್ಲ. ಇದಕ್ಕೆ ಕಾರಣ ಅದರಲ್ಲಿರುವ ಔಷಧೀಯ ಗುಣ.

ಒಂದು ಕಾಲದಲ್ಲಿ ಶುದ್ಧ ನೀರನ್ನು ಒದಗಿಸುತ್ತಿದ್ದ ನಮ್ಮ ನದಿಗಳು ಇಂದು ಮಲಿನಗೊಂಡಿವೆ. ಬೆಳೆಯುತ್ತಿರುವ ಜನಸಂಖ್ಯೆ. ಕೈಗಾರಿಕೀಕರಣ, ನಗರಗಳ ಬೆಳವಣಿಗೆ ಇವುಗಳಿಂದಾಗಿ ಜಲಮಾಲಿನ್ಯ ಉಂಟಾಗಿದೆ. ಹೇಗೆ ಆರೋಗ್ಯಕ್ಕೆ ಶುದ್ಧ ನೀರು ಅಗತ್ಯವೋ ಹಾಗೆಯೇ ಅಶುದ್ಧ ನೀರಿನಿಂದ ವಿವಿಧ ಬಗೆಯ ಕಾಯಿಲೆಗಳು ಬರುತ್ತವೆ. ನಮ್ಮ ನಗರಗಳ ಹೊಲಸನ್ನು, ಕೊಳಕು ನೀರನ್ನು ನದಿ, ಸಮುದ್ರಗಳಿಗೆ ಬಿಡುತ್ತಿದ್ದೇವೆ. ಕೈಗಾರಿಕೆಗಳಿಂದ ಬಿಡುವ ಸಾವಯುವ ಮಲಿನಕಗಳು ಜಲಚರಪ್ರಾಣಿಗಳ ಇರುವಿಕೆಯ ಮೇಲೆಯೂ ಗಂಭೀರ ಪರಿಣಾಮವನ್ನುಂಟುಮಾಡುತ್ತಿವೆ. ಇದರಲ್ಲಿ ಬೆಳೆದ ಮೀನನ್ನು ಸೇವಿಸಿದ ಮನುಷ್ಯ ಅನಾರೋಗ್ಯಪೀಡಿತನಾಗುವನು. ಜಪಾನಿನ ನೀರಿನಲ್ಲಿ ಮರ್ಕ್ಯುರಿ ಪ್ರಮಾಣ ಹೆಚ್ಚಿದ್ದರಿಂದ ‘ಮಿನಾಮಾಟ’ ಎಂಬ ಕಾಯಿಲೆ ಕಾಣಿಸಿಕೊಂಡಿತೆಂದು ಹೇಳಲಾಗಿದೆ.

ಇಂದು ನೀರಿನ ಬಳಕೆಯ ಬಗ್ಗೆ ನಾವು ಎಚ್ಚರಿಕೆ ವಹಿಸುವುದು ಅನಿವಾರ್ಯವೆನಿಸಿದೆ. ಒಂದು ಕಾಲದಲ್ಲಿ ‘ಹಣವನ್ನು ನೀರಿನಂತೆ ವೆಚ್ಚಮಾಡಬೇಡಿ’ ಎಂದು ಹೇಳಲಾಗುತ್ತಿತ್ತು. ಆದರೆ ಈಗ ‘ನೀರನ್ನು ಹಣದಂತೆ ಹಿಡಿತದಲ್ಲಿಟ್ಟುಕೊಂಡು ಮಿತವಾಗಿ ಬಳಸಿರಿ’ ಎಂದು ಹೇಳುವ ಕಾಲ ಬಂದೊದಗಿದೆ. ಹಿಂದೆ ನಾವು ನೀರು ಪಡೆಯುತ್ತಿದ್ದುದು ಹೆಚ್ಚಾಗಿ ತೋಡು ಬಾವಿಗಳಿಂದ, ಕೆರೆಗಳಿಂದ. ಆದರೆ ಜನಸಂಖ್ಯೆಯ ಹೆಚ್ಚಳದಿಂದ ನೀರಿಗೆ ಬರ ಬಂದು ಕೊರೆಬಾವಿಗಳ ಮೂಲಕ ನೀರನ್ನು ಎತ್ತಿ ಉಪಯೋಗಿಸಲು ಆರಂಭಿಸಿದ್ದೇವೆ. ಕ್ರಮೇಣ ತೋಡುಬಾವಿಗಳು ಕೆರೆಗಳು ಬತ್ತಲಾರಂಭಿಸಿವೆ. ಇದಕ್ಕೆ ಕಾರಣ ಕಾಡುಗಳನ್ನು ನಾವು ನಿರಂತರವಾಗಿ ನಾಶಮಾಡಲು ಆರಂಭಿಸಿದ್ದು. ನಿಸರ್ಗದ ವೈವಿಧ್ಯಮಯ ಕಾಡು ನಾಶವಾದುದರ ಪರಿಣಾಮ ಸಕಾಲಕ್ಕೆ ಮಳೆಯಾಗದಿರುವುದು. ಇದರಿಂದ ನದಿ, ಕೆರೆಗಳು ತುಂಬುವುದಿಲ್ಲ. ಜಲಾಶಯಗಳಲ್ಲಿ ನೀರಿಲ್ಲದೆ ವಿದ್ಯುತ್ತಿನ ಕೊರತೆ ಅನುಭವಿಸುತ್ತಿದ್ದೇವೆ. ನಿಸರ್ಗ ತನ್ನ ಸಮತೋಲನ ಕಳೆದುಕೊಳ್ಳುತ್ತಿದೆ. ಜನಸಂಖ್ಯಾ ಹೆಚ್ಚಳ ಮತ್ತು ಕೈಗಾರಿಕೀಕರಣ ಇದೇ ರೀತಿ ಮುಂದುವರೆದಲ್ಲಿ ಮುಂದೊಂದು ದಿನ ನಾವು ಜಲಕ್ಷಾಮ ಎದುರಿಸುವುದು ಅನಿವಾರ್ಯವಾಗಬಹುದು. ಆದ್ದರಿಂದಲೇ

ನೀರನ್ನು ಆವಶ್ಯಕತೆಗೆ ತಕ್ಕಂತೆ ಬಳಸಬೇಕು. ಇಂದು ಹಲವು ಸಾರ್ವಜನಿಕ ನಲ್ಲಿಗಳಲ್ಲಿ ನೀರು ಸುರಿಯುತ್ತಲೇ ಇರುತ್ತದೆ. ಅದನ್ನು ನಾವು ನಿಲ್ಲಿಸುವ ಗೋಜಿಗೇ ಹೋಗುವುದಿಲ್ಲ. ನಮ್ಮ ಸ್ನಾನಕ್ಕೆಂದು ಆಗತ್ಯಕ್ಕಿಂತ ಹೆಚ್ಚಿನ ನೀರನ್ನು ಪೋಲು ಮಾಡುತ್ತೇವೆ. ಪಾತ್ರೆ ತೊಳೆಯುವಾಗ, ಬಟ್ಟೆ ಒಗೆಯುವಾಗ ಬಳಸುವ ನೀರಿನ ಮೇಲೆ ಮಿತಿಯಿರಲಿ. ಆ ನೀರನ್ನು ಗಿಡಗಳಿಗೆ ಉಪಯೋಗಿಸಿ. ನಿಮ್ಮ ಕೆಲಸವಾದ ಬಳಿಕ ನೀರು ನಿಲ್ಲಿಸುವುದನ್ನು ರೂಢಿಸಿಕೊಳ್ಳಿ. ಶರೀರದ ವೃದ್ಧಿಗೆ ಅಗತ್ಯವಾದ ನೀರನ್ನು ನಾವು ಪ್ರಜ್ಞಾವಂತರಾಗಿ ಬಳಸೋಣ.

ಪೇಪರೋದಲೆ ಷೇವು ಮಾಡಲೆ
ಸುಂನೆ ಕುರ್ಚಿಲಿ ಕೂಡಲೆ
ಮಾವನಿಗೊಂದು ಪತ್ರ ಬರೆಯಲೆ
ಹಿತ್ತಲನ್ನು ಗುಡಿಸಲೆ
ಬಟ್ಟೆ ಒಗೆಯಲೆ, ಎರೆದು ಕೊಳ್ಳಲೆ
ಮಾರ್ನಿಂಗ್ ಷೋವಿಗೆ ಹೋಗಲೆ
ಅಚ್ಚುಕಟ್ಟಾಗೂಟ ಮಾಡಲು
ಆಲುಗೆಡ್ಡೆಯು ಹಚ್ಚಲೇ
ಭೇದಿಮಾತ್ರೆಯು ನುಂಗಿ ಹೊಟ್ಟೆಯು
ಕ್ಲೀನು ದೂಡಲೆ ಮಲಗಲೆ
ಭಾನುವಾರವು ಹಾಳು ಬಂದರೆ
ಏನು ಮಾಡುವುದೆಂದು ತೋಚದು

ಕಸ್ತೂರಿ ಕಂಡಂತೆ ರವಿವಾರ 'ಕೊರವಂಜಿ'ಯಲ್ಲಿ

ಕಲ್ಪವೃಕ್ಷ-ತೆಂಗು

ಎಂ. ಎಸ್. ಲಕ್ಷ್ಮಣಾಚಾರ್
೨೫೪, ವಿಶ್ವರೂಪ (ಮಹಡಿ)
೫ನೇ ಮುಖ್ಯ ರಸ್ತೆ, ೧೪ನೇ ಅಡ್ಡರಸ್ತೆ
ಜಯನಗರ, ಮೈಸೂರು-೫೭೦೦೧೪

ತೆಂಗಿನ ಮರವನ್ನು ದೇವವೃಕ್ಷಗಳಲ್ಲಿ ಒಂದೆಂದು ಭಾವಿಸಿದೆ. ಇದನ್ನು ಕಲ್ಪವೃಕ್ಷವೆಂದೂ ಹೇಳುವುದುಂಟು. ಈ ಮರದ ಒಂದೊಂದು ಭಾಗವೂ ಒಂದಲ್ಲ ಒಂದು ಬಗೆಯಲ್ಲಿ ಮನುಷ್ಯನಿಗೆ ನಿತ್ಯೋಪಯೋಗಿ. ಇಂದು ಪ್ರಪಂಚದಲ್ಲಿ ತೆಂಗನ್ನು ಸುಮಾರು ೧೧ ಮಿಲಿಯನ್ ಹೆಕ್ಟೇರ್‌ಗಳಲ್ಲಿ ಬೆಳೆದು, ೫೧,೨೮೨ ದಶಲಕ್ಷ ಕಾಯಿಗಳನ್ನು ಉತ್ಪಾದಿಸಲಾಗುತ್ತಿದೆ. ತೆಂಗನ್ನು ಬಹು ಹೆಚ್ಚಾಗಿ ಬೆಳೆಯುತ್ತಿರುವ ರಾಷ್ಟ್ರಗಳೆಂದರೆ ಇಂಡೊನೇಷ್ಯಾ, ಫಿಲಿಪ್ಪೈನ್ಸ್, ಭಾರತ, ಶ್ರೀಲಂಕಾ, ಥಾಯ್‌ಲ್ಯಾಂಡ್, ಮಲೇಷ್ಯಗಳಾಗಿವೆ. ವಿಶ್ವದ ತೆಂಗಿನ ಉತ್ಪಾದನೆಯಲ್ಲಿ ಭಾರತಕ್ಕೆ ಮೂರನೆಯ ಸ್ಥಾನವಿದೆ. ಮೊದಲನೆಯ ಎರಡು ಸ್ಥಾನಗಳು ಕ್ರಮವಾಗಿ ಇಂಡೋನೇಷ್ಯ ಮತ್ತು ಫಿಲಿಪ್ಪೈನ್ಸ್‌ಗಳಿಗಾಗಿವೆ. ಇಂದು ಭಾರತದಲ್ಲಿ ತೆಂಗಿನ ಕೃಷಿಯು ಸುಮಾರು ೧೬೬೯ ಸಾವಿರ ಹೆಕ್ಟೇರ್ ಪ್ರದೇಶಗಳಲ್ಲಿ ವ್ಯಾಪಿಸಿದ್ದು, ಸುಮಾರು ೧೨,೧೯೬ ದಶಲಕ್ಷ ಕಾಯಿಗಳನ್ನು ಉತ್ಪಾದಿಸಲಾಗುತ್ತಿದೆ. ಮುಖ್ಯವಾಗಿ ತೆಂಗನ್ನು ಬೆಳೆಯುವ ರಾಜ್ಯಗಳೆಂದರೆ ಕೇರಳ, ತಮಿಳುನಾಡು, ಕರ್ನಾಟಕ ಮತ್ತು ಆಂಧ್ರಪ್ರದೇಶಗಳು. ಕೇರಳದಲ್ಲಿ, ಭಾರತದಲ್ಲಿ ತೆಂಗನ್ನು ಬೆಳೆಯುವ ಒಟ್ಟು ವಿಸ್ತೀರ್ಣದ ಶೇ. ೫೩ರಷ್ಟು ಪ್ರದೇಶವೂ, ಒಟ್ಟು ಉತ್ಪಾದನೆಯ ಶೇ. ೪೬ರಷ್ಟು ಕೇಂದ್ರೀಕೃತವಾಗಿದೆ. ಆದರೆ ಒಂದು ಎಕರೆ ಪ್ರದೇಶದ ಉತ್ಪಾದನಾಶಕ್ತಿ ಮಿಕ್ಕ ರಾಜ್ಯಗಳಿಗಿಂತ ಕಡಿಮೆ. ಆ ದೃಷ್ಟಿಯಲ್ಲಿ ತಮಿಳುನಾಡು ಬಹಳ ಮುಂದಿದೆ.

ತೆಂಗನ್ನು ಉಷ್ಣವಲಯದ ಪ್ರದೇಶಗಳಲ್ಲಿ ಹೆಚ್ಚಾಗಿ ಕೃಷಿ ಮಾಡುತ್ತಾರಾದರೂ ಈ ವೃಕ್ಷವು ಹಿತಕರವಾದ ವೈಪರೀತ್ಯಗಳಿಲ್ಲದ ವಾಯುಗುಣದಲ್ಲಿ ಬೆಳೆಯಲಾಗುತ್ತಿದೆ. ಇದರ ಬೆಳೆವಣಿಗೆಗೆ ಸಮುದ್ರ ತೀರದ ಸಮೀಪ ಬಹು ಯೋಗ್ಯ. ತೆಂಗಿನಕಾಯಿ ಮತ್ತು ಇದರ ಉತ್ಪನ್ನಗಳಾದ ಕೊಬ್ಬರಿ, ಎಣ್ಣೆ, ಹಿಂಡಿ, ತೇವಾಂಶರಹಿತ ಕಾಯಿ ಕರಟ ಇತ್ಯಾದಿಗಳನ್ನು ಪ್ರತಿ ವರ್ಷ ರಫ್ತು ಮಾಡಲಾಗುತ್ತಿದೆ. ೧೯೯೩-೯೪ ರಲ್ಲಿ ಇವುಗಳ ರಫ್ತಿನಿಂದ ಸುಮಾರು ೩೬೩ ಲಕ್ಷರೂ.ಗಳನ್ನು ವಿದೇಶೀ ವಿನಿಮಯಗಳಿಸಲು ಸಾಧ್ಯವಾಗಿದೆ.

ತೆಂಗಿನಮರದ ವಿವಿಧ ಭಾಗಗಳ ಉಪಯೋಗಗಳು:

೧. ತೆಂಗಿನ ಗರಿಗಳು ಮತ್ತು ಕಾಂಡ

ಎಳೆಯ ತೆಂಗಿನ ಗರಿಗಳನ್ನು ಉತ್ತರ ಕೇರಳದ ಹೆಸರಾಂತ ನೃತ್ಯ 'ತೆಯ್ಯಂ' ಅನ್ನು ಆಡುವವರು ಪೋಷಾಕಾಗಿ ಉಪಯೋಗಿಸುತ್ತಾರೆ. ಅಂತೆಯೇ ಕರ್ನಾಟಕದ ಯಕ್ಷಗಾನದಲ್ಲೂ ಕೆಲವು ಅದ್ಭುತ ಪಾತ್ರಗಳ ಅಲಂಕಾರದಲ್ಲಿ ಎಳೆಯ ತೆಂಗಿನ ಗರಿಗಳನ್ನು ಉಪಯೋಗಿಸುವುದುಂಟು. ತೆಂಗಿನ ಗರಿಗಳನ್ನು ಮದುವೆ ಮುಂಜಿ ಇತ್ಯಾದಿ ಸಮಾರಂಭಗಳಲ್ಲಿ ಚಪ್ಪರಕ್ಕೆ ಉಪಯೋಗಿಸುತ್ತಾರೆ. ಒಣಗಿದ ಗರಿಗಳನ್ನು ಛಾವಣಿಗೆ ಹೊದೆಸಲೂ ಮತ್ತು ಇಂಧನವಾಗಿಯೂ, ಕಡ್ಡಿಗಳನ್ನು ಪೊರಕೆ ಮಾಡಲೂ ಉಪಯೋಗಿಸುತ್ತಾರೆ. ಕಾಂಡವನ್ನು ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸುವುದುಂಟು. ಇದರ ದಿಮ್ಮಿಗಳನ್ನು ಮನೆಕಟ್ಟಲು ಬಳಸುತ್ತಾರೆ. ತೆಂಗಿನ ಬೇರು, ಬುಡಗಳನ್ನು ಸೌದೆಯಾಗಿ ಉಪಯೋಗಿಸುವುದುಂಟು.

೨. ಕಳ್ಳು ತೆಗೆಯುವುದು (ಹೆಂಡ)

ತೆಂಗಿನ ಅರಳದ ಹೊಂಬಾಳೆ (ಹೂಗೊಂಚಲು)ಯಿಂದ ಕಳ್ಳನ್ನು ಉತ್ಪಾದಿಸಬಹುದು. ಇದಕ್ಕಾಗಿ ಆಯ್ಕೆಮಾಡುವ ಹೊಂಬಾಳೆಯ ಅಡಿಭಾಗದಲ್ಲಿ ಒಳಗಡೆ ಬೆಳೆಯುತ್ತಿರುವ ಬಿಳಿ ಕಾಯಿಯಿಂದ ಉಂಟಾಗುವ ಬಾವುಗಳನ್ನು ಕಾಣಬಹುದು. ಹೊಂಬಾಳೆಯನ್ನು ಮೂರು ವಾರದವರೆಗೆ ಅಡಿಯಿಂದ ಮೇಲ್ಭಾಗದವರೆಗೆ ದಿನವೂ ಕೋಲಿನಿಂದ ಹೊಡೆದು ಹದಮಾಡಬೇಕು. ಹೀಗೆ ಮಾಡುವಾಗ ಹೊಂಬಾಳೆಯು ಕ್ರಮೇಣ ಬಾಗುತ್ತದೆ. ಹೊಂಬಾಳೆಯು ಅರಳದಿರಲು ಅದರ ಅಗ್ರಭಾಗವನ್ನು ಒಂದು ಹಗ್ಗದಿಂದ ಕಟ್ಟಿರಬೇಕು. ಕಳ್ಳಿನ ಉತ್ಪಾದನೆಯು ಆರಂಭವಾದಾಗ ೪-೫ಸೆಂ. ಮೀಟರ್ ಉದ್ದದಷ್ಟು ಹೊಂಬಾಳೆಯ ಅಗ್ರವನ್ನು ಕತ್ತರಿಸಿ ಒಂದು ಮಣ್ಣಿನ ಮಡಕೆಯನ್ನು ಅದರ ಮೇಲಿಡಲಾಗುತ್ತದೆ. ಹೊಂಬಾಳೆಯ ಅಗ್ರವನ್ನು ದಿನವೂ ತೆಳುವಾಗಿ ತುಂಡು ಮಾಡುವುದು, ಜಜ್ಜುವುದು ಹೀಗೆ ಮಾಡುವುದರಿಂದ ಕಳ್ಳು ಒಂದೇ ಸಮನೆ ಲಭ್ಯವಾಗುವುದು. ಒಂದು ತಿಂಗಳವರೆಗೂ ಒಂದು ಹೊಂಬಾಳೆಯಿಂದ ಒಂದೇ ಸಮನೆ ಕಳ್ಳನ್ನು ತೆಗೆಯಬಹುದು. ಒಂದು ಮರದಿಂದ ಆರು ತಿಂಗಳವರೆಗೆ ಈ ಕೆಲಸವನ್ನು ಮುಂದುವರಿಸಿ ಕಳ್ಳು ತೆಗೆಯಬಹುದು.

ತೆಂಗಿನ ಬೆಲ್ಲ (ತಾಟಿ ಬೆಲ್ಲ)

ಕಳ್ಳನ್ನು ತೆಗೆಯುವ ಸಮಯದಲ್ಲೇ ಅಥವಾ ತೆಗೆದ ಒಡನೆಯೇ ಅದರಲ್ಲಿ ಈಸ್ಟ್ ಸೇರಿದ ಸೂಕ್ಷ್ಮಾಣುಗಳನ್ನು ನಿರ್ಜೀವವಾಗಿಸಿ ಕುದಿಸಿ, ಗಟ್ಟಿಮಾಡಿ ತೆಗೆದರೆ ತೆಂಗಿನ ಬೆಲ್ಲ ದೊರಕುತ್ತದೆ. ಕಳ್ಳನ್ನು ಅದು ಸಾಂದ್ರೀಕೃತ ದ್ರಾವಣ ಆಗುವವರೆಗೂ ಕುದಿಸಬೇಕು. ಈ ದ್ರಾವಣವನ್ನು ಅಚ್ಚುಗಳಲ್ಲಿ ಸುರಿದು ಗಟ್ಟಿಮಾಡಿದಾಗ ತಾಟಿಬೆಲ್ಲವಾಗುತ್ತದೆ.

೩. ತೆಂಗಿನ ಕಾಯಿ

ತೆಂಗಿನಕಾಯಿಯ ಒಟ್ಟು ಉತ್ಪಾದನೆಯಲ್ಲಿ ಶೇಕಡಾ ೫ರಷ್ಟನ್ನು ಎಳನೀರಾಗಿ

ಕಡಿಯಲು ಉಪಯೋಗಿಸುತ್ತಾರೆ. ಬಲಿತ ಕಾಯಿಯಂತೆ ಇತರ ಆವಶ್ಯಕತೆಗಳಿಗೂ ಮತ್ತು ಧರ್ಮಾಚರಣೆಗಳಿಗೂ (ಶೇ. ೫೦.೫) ಮತ್ತು ತಿನ್ನುವ ಕೊಬ್ಬರಿ (ಶೇ. ೬ ಭಾಗ) ಗಾಣವಾಡಿಸುವ ಕೊಬ್ಬರಿ (ಶೇ. ೩೪) ಮತ್ತು ಶೋಷಿಸಿದ ತೆಂಗಿನ ಕಾಯಿಯನ್ನು (ಶೇ. ೧.೫೨) ಉತ್ಪಾದಿಸಲೂ ಉಪಯೋಗಿಸುತ್ತಾರೆ. ವಿಶ್ವ ಶೇಕಡಾ ೩ರಷ್ಟನ್ನು ತೆಂಗಿನ ಸಸಿ ಉತ್ಪಾದನೆಗೆ ಉಪಯೋಗಿಸುತ್ತಾರೆ.

ತೆಂಗಿನ ನೀರು

ತೆಂಗಿನಕಾಯಿ ಬಲಿತಂತೆ ಇದರೊಳಗೆ ರುಚಿಕರವಾದ ಪಾನೀಯ ಸಂಗ್ರಹವಾಗುತ್ತದೆ. ಎಂಟು ತಿಂಗಳುಗಳಿಗೂ ಕಡಿಮೆ ಬಲಿತಿರುವ ತೆಂಗಿನಕಾಯಿಯ ನೀರನ್ನು ಎಳನೀರೆಂದು ಕರೆಯುತ್ತಾರೆ.

ಎಳನೀರು ಮಧುರವಾಗಿದ್ದು, ದಾಹವನ್ನು ನೀಗಿಸಲು ಉತ್ತಮ. ಬಲಹೀನರಿಗೂ ರೋಗಿಗಳಿಗೂ ಒಳ್ಳೆಯದು. ಇದು ಗ್ಯಾಸ್ಟ್ರೋ ಎಂಟರೈಟಿಸ್ ರೋಗ ಚಿಕಿತ್ಸೆಗೂ ಮತ್ತು ಸಲೈನ್ ಗ್ಲೂಕೋಸ್‌ಗಳಿಗೆ ಬದಲಾಗಿಯೂ ಕೊಡಬಹುದೆಂದು ಶಿಫಾರಸ್ ಮಾಡಿರುವುದುಂಟು. ಅತಿಸಾರ, ಭೇದಿಯಿಂದಾಗಿ ಶರೀರದಲ್ಲಿನ ಜಲಾಂಶವು ನಷ್ಟವಾಗುವುದನ್ನು ಸರಿದೂಗಿಸಲು ಇದನ್ನು ಫಲಪ್ರದವಾಗಿ ಉಪಯೋಗಿಸಬಹುದು. ಎಳನೀರಿನಲ್ಲಿ ಕ್ಷಾರಾಂಶವು ಹೆಚ್ಚಿರುವುದರಿಂದ ಅದನ್ನು ಸಿಹಿ ಮೂತ್ರ ರೋಗಗಳಿಗೆ ಜ್ಞಾನ ತಪ್ಪಿದಾಗ ಕೊಟ್ಟರೆ ಅವರು ಬೇಗ ಚೇತರಿಸಿಕೊಳ್ಳುತ್ತಾರೆ. ಹೆಚ್ಚು ರಕ್ತದೊತ್ತಡ ಇರುವವರು ಉಪ್ಪು ಸೇವಿಸಕೂಡದೆಂದು ವೈದ್ಯರ ಸಲಹೆ, ಆದರೆ ಉಪ್ಪೇ ಸೇವಿಸದಿದ್ದರೆ ನಿಶ್ಶಕ್ತಿಯಾಗುತ್ತದೆ. ಆದ್ದರಿಂದ ಇಂತಹ ರೋಗಿಗಳಿಗೆ ಎಳನೀರು ಒಂದು ಅತ್ಯುತ್ತಮ ಸಾಧನ. ಅದರಲ್ಲಡಗಿರುವ. ಉಪ್ಪಿನ ಅಂಶವು ರೋಗಿಗೆ ಲವಲವಿಕೆಯನ್ನುಂಟು ಮಾಡುತ್ತದೆ. ಇದರಿಂದ ಸಾಧಾರಣವಾಗಿ ಉಪ್ಪು ಸೇವಿಸುವುದರಿಂದ ಉಂಟಾಗುವ ತೊಂದರೆ ಉಂಟಾಗುವುದಿಲ್ಲ. ಹೆಚ್ಚು ಮೂತ್ರ ವಿಸರ್ಜನೆಗೂ ಆಸ್ಪದವಿರುತ್ತದೆ.

ಕೊಬ್ಬರಿ ಮತ್ತು ತೇವಾಂಶ ಇಲ್ಲದ ತೆಂಗಿನಕಾಯಿಯ ತಯಾರಿಕೆಯಲ್ಲಿ ತೆಂಗಿನ ನೀರು ಬಹುವಾಗಿ ನಷ್ಟವಾಗುವುದುಂಟು. ಇದನ್ನು ಉಪಯೋಗಿಸುವ ಕೈಗಾರಿಕೆಯ ಕೆಲಸಗಳು ನಮ್ಮ ದೇಶದಲ್ಲಿ ಸಮರ್ಥವಾಗಿ ನಡೆದಿಲ್ಲ. ಫಿಲಿಪ್ಪೈನ್ಸ್‌ನಲ್ಲಿ 'ಟಾಟಾ-ಡಿ-ಕೋಕೋ' ಎಂಬ ಉತ್ಪನ್ನವನ್ನು ತಯಾರಿಸಿ ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ಇವನ್ನು ತಯಾರಿಸಲು ತೆಂಗಿನ ನೀರನ್ನು ಚೆನ್ನಾಗಿ ಶೋಧಿಸಿ, ಸಕ್ಕರೆ, ಅಸೆಟಿಕ್ ಆಮ್ಲ ಮತ್ತು ಅನಾನಸ್ ಉಪಯೋಗಿಸಿ ತಯಾರಿಸಿದ ಒಂದು ಬಲಪಡಿಸುವ ಪ್ರಾರಂಭ ಪದಾರ್ಥವನ್ನು ಸೇರಿಸುತ್ತಾರೆ. ಲಂಡನ್‌ನಲ್ಲಿರುವ ಟ್ರಾಪಿಕಲ್ ಪ್ರಾಡಕ್ಟ್ಸ್ ಎಂಬ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆಸಿದ ಸಂಶೋಧನೆಗಳಿಂದ ತೆಂಗಿನ ನೀರಿನಿಂದ ಈಸ್ಟ್ ತಯಾರಿಸಬಹುದೆಂದು ತಿಳಿದುಬಂದಿದೆ. ಇವಕ್ಕೆ ಒಂದು ಲೀಟರ್ ತೆಂಗಿನ ನೀರಿಗೆ ಒಂದುಗ್ರಾಂ ಯೂರಿಯಾ ಬೆರೆಸಿದರೆ ಸಾಕು. ಕೇರಳ ರಾಜ್ಯದ ತಿರುವನಂತಪುರಂನಲ್ಲಿರುವ ಪ್ರಾದೇಶಿಕ ಸಂಶೋಧನಾ ಪ್ರಯೋಗಾಲಯದಲ್ಲಿ ತೆಂಗಿನ

ನೀರನ್ನು ಸಂಸ್ಕರಿಸಿ ತಂಪಾದ ಒಂದು ಶೀತಲ ಪಾನೀಯವಾಗಿ ಮಾರಾಟ ಮಾಡಬಹುದೆಂದು ತಿಳಿಸಿದ್ದಾರೆ. ತೆಂಗಿನ ನೀರಿನಿಂದ ಉತ್ಪಾದಿಸಬಹುದಾದ ಇನ್ನೊಂದು ಉತ್ಪನ್ನವೆಂದರೆ ವಿನಿಗರ್. ಇದನ್ನು ಕುದಿಸಿ ಆರಿಸಿಟ್ಟ ತೆಂಗಿನ ನೀರಿಗೆ ಸಕ್ಕರೆ, ಈಸ್ಟ್‌ಗಳನ್ನು ತಕ್ಕ ಪ್ರಮಾಣದಲ್ಲಿ ಸೇರಿಸಿ ತಯಾರಿಸಲಾಗುತ್ತದೆ. ಲಾಭಕರವಾಗಿ ಮಾರಾಟ ಮಾಡಬಹುದಾದ ಇದರ ಇನ್ನೊಂದು ಉತ್ಪನ್ನವೆಂದರೆ ತೆಂಗಿನ ನೀರು, ಸಕ್ಕರೆ ಮತ್ತು ನಿಂಬೆ ಹಣ್ಣಿನ ರಸ ಸೇರಿಸಿ ತಯಾರಿಸಲಾಗುವ ತೆಂಗಿನ ಲೆಮನೇಡ್.

ತೆಂಗಿನ ತಿರುಳು

ತೆಂಗಿನಕಾಯಿಯು ಬಲಿತು ೨೨೦ ದಿವಸಗಳಾಗುವ ವೇಳೆಗೆ ತೆಂಗಿನ ನೀರಿನ ರುಚಿ ಮತ್ತು ಸ್ವಾದವು ತನ್ನ ಪರಮಾವಧಿಯನ್ನು ಮುಟ್ಟುತ್ತದೆ. ಅದೇ ಸಮಯದಲ್ಲಿ ಕರಟದೊಳಗೆ ರೂಪುಗೊಳ್ಳುತ್ತಿರುವ ತಿರುಳು ಬಲು ಮೃದುವಾಗಿದ್ದು, ರುಚಿಯಾಗಿರುತ್ತದೆ.

ತೆಂಗಿನ ತುರಿಯನ್ನು ಆಹಾರ ಪದಾರ್ಥಗಳಿಗೆ ಬಳಸುತ್ತಾರೆ. ತೆಂಗಿನ ತುರಿಗೆ ನೀರನ್ನು ಸೇರಿಸಿ ಒತ್ತಿಹಿಡಿದು, ಹಿಂಡಿ ತೆಗೆದಾಗ ಬರುವ ಕ್ರೀಂ ತರಹದ ದ್ರಾವಣವೇ ತೆಂಗಿನ ಹಾಲು. ಇದನ್ನು ರುಚಿರುಚಿಯಾದ ತಿಂಡಿಗಳನ್ನು, ವ್ಯಂಜನಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಈ ತೆಂಗಿನ ಹಾಲಿನಲ್ಲೂ ಹಸುವಿನ ಹಾಲಿನಲ್ಲಿರುವ ಪೋಷಕಾಂಶಗಳಿವೆ. ಫಿಲಿಫೈನ್ಸ್, ಥಾಯ್‌ಲ್ಯಾಂಡ್, ಇಂಡೋನೇಷ್ಯ ರಾಷ್ಟ್ರಗಳಲ್ಲಿ ಈ ತೆಂಗಿನ ಹಾಲನ್ನು ಸಂಸ್ಕರಿಸಿ ಮಾರಾಟಮಾಡುವ ಕೈಗಾರಿಕೆಗಳಿವೆ. ತೆಂಗಿನ ಹಾಲನ್ನು ಪಯೋಗಿಸಿ ಒಂದು ಬಗೆಯ ಸಿರಪ್ ಅನ್ನು ಇತ್ತೀಚೆಗೆ ಫಿಲಿಪ್ಪೈನ್ಸ್‌ನಲ್ಲಿ ತಯಾರಿಸಲಾಗುತ್ತಿದೆ.

ಶೋಷಿಸಿದ (ತೇವಾಂಶ ರಹಿತ) ತೆಂಗಿನ ಕಾಯಿ

ತೆಂಗಿನ ತಿರುಳನ್ನು ಹಸಿಯಾಗಿಯೇ ಪುಡಿಮಾಡಿ ಒಣಗಿಸಿದ ಉತ್ಪನ್ನವನ್ನು ಶೋಷಿಸಿದ ತೆಂಗಿನ ಕಾಯಿ ಎಂದು ಹೇಳುತ್ತಾರೆ. ಆಹಾರ ಪದಾರ್ಥಗಳ, ಸಿಹಿ ತಿಂಡಿಗಳ ತಯಾರಿಕೆಗೆ ಬೇಡಿಕೆ ಇರುವ ಒಂದು ಉತ್ಪನ್ನವೇ ಈ ಶೋಷಿಸಿದ ತೆಂಗಿನಕಾಯಿ. ಇದರ ಉತ್ಪಾದನೆಯಲ್ಲಿ ಶ್ರೀಲಂಕಾ ಮತ್ತು ಫಿಲಿಪ್ಪೈನ್ಸ್‌ಗಳ ಕೊಡುಗೆ ವಿಶೇಷವಾಗಿದೆ. ಈ ರಾಷ್ಟ್ರಗಳ ಉತ್ಪಾದನೆಯ ಮುಕ್ಕಾಲು ಭಾಗವು ಅಮೆರಿಕಾದ ಸಂಯುಕ್ತ ಸಂಸ್ಥಾನಗಳು ಪಶ್ಚಿಮ ಜರ್ಮನಿ, ಆಸ್ಟ್ರೇಲಿಯಾ, ಕೆನಡ, ನೆದರ್‌ಲ್ಯಾಂಡ್ಸ್, ಡೆನ್ಮಾರ್ಕ್, ದಕ್ಷಿಣ ಆಫ್ರಿಕಾ, ಸ್ವೀಡನ್, ಬೆಲ್ಜಿಯಂ, ನ್ಯೂಜಿಲೆಂಡ್‌ಗಳಿಗೆ ರಫ್ತಾಗುತ್ತಿದೆ. ಭಾರತದಲ್ಲಿ ಶೋಷಿಸಿದ ತೆಂಗಿನಕಾಯಿಯ ವಾರ್ಷಿಕ ಉತ್ಪಾದನೆಯು ಸುಮಾರು ೨೦,೦೦೦ ಟನ್. ಈ ಕೈಗಾರಿಕೆಯು ಬಹುಮಟ್ಟಿಗೆ ಕರ್ನಾಟಕದಲ್ಲಿದೆ. ಇದನ್ನು ನಮ್ಮ ದೇಶದಲ್ಲಿ ಮಿಠಾಯಿ ಮೊರಬ್ಬ ತಯಾರಿಕೆಯಲ್ಲೂ, ಸಿಹಿಖಾದ್ಯವಸ್ತುಗಳ ತಯಾರಿಕೆಯಲ್ಲೂ ಬಳಕೆಯಾಗುತ್ತದೆ.

೪. ಕೊಬ್ಬರಿ

ಭಾರತದಲ್ಲಿ ಪ್ರಸ್ತುತ ಕೊಬ್ಬರಿಯ ಉತ್ಪಾದನೆಯಲ್ಲಿ ಎರಡು ಬಗೆಗಳಿವೆ.

ಒಂದು ತಿನ್ನುವ ಕೊಬ್ಬರಿ, ಮತ್ತೊಂದು ಗಾಣವಾಡಿಸುವ ಕೊಬ್ಬರಿ. ಈ ಎರಡು ಬಗೆಯೂ ಸೇರಿದಂತೆ ಒಟ್ಟು ಉತ್ಪಾದನೆಯು ಹೆಚ್ಚು ಕಡಿಮೆ ೬,೦೦,೦೦೦ ಟನ್‌ಗಳೆಂದು ಅಂದಾಜು ಮಾಡಬಹುದು. ತಿನ್ನುವ ಕೊಬ್ಬರಿಯು ಉಂಡೆಯಾಗಿಯೂ ಬಟ್ಟಲಾಗಿಯೂ ದೊರಕುತ್ತದೆ. ಗಾಣವಾಡಿಸುವ ಕೊಬ್ಬರಿ ಬಟ್ಟಲು ಮತ್ತು ಚೂರುಚೂರುಗಳಾಗಿ ದೊರಕುತ್ತದೆ.

ತಿನ್ನುವ ಕೊಬ್ಬರಿ

ಚೆನ್ನಾಗಿ ಬಲಿತ ತೆಂಗಿನ ಕಾಯಿಗಳನ್ನೇ ಕೊಬ್ಬರಿ ಗಿಟುಕುಮಾಡಲು ಉಪಯೋಗಿಸಲಾಗುವುದು. ಸುಲಿಯದೆ ಹನ್ನೆರಡು ತಿಂಗಳವರೆಗೆ ಇಟ್ಟ ತೆಂಗಿನ ಕಾಯಿಯಲ್ಲಿ ನೀರು ಕ್ರಮೇಣ ಇಮರಿಹೋಗಿ ಒಳಗಿನ ತಿರುಳು ಒಣಗಿ ಕರಟದಿಂದ ಬೇರ್ಪಡುತ್ತದೆ. ತೆಂಗಿನಕಾಯಿಯನ್ನು ಅಲ್ಲಾಡಿಸಿದರೆ ಶಬ್ದ ಕೇಳಬಹುದು. ಆಗ ಸುಲಿದು ಒಳಗಿನ ತಿರುಳಿಗೆ ಏಟು ತಗಲದಂತೆ ತಿರುಳನ್ನು ತೆಗೆಯುತ್ತಾರೆ. ಇದು ಮೃದುವಾಗಿಯೂ ಸಿಹಿಯಾಗಿಯೂ, ಎಳೆಯ ಹಳದಿ ಬಣ್ಣದೊಂದಿಗೆ ಕೂಡಿರುತ್ತದೆ. ಚೆನ್ನಾಗಿ ಬಲಿತ ತೆಂಗಿನಕಾಯಿಯನ್ನು ಸುಲಿದು ಅದನ್ನು ಎರಡಾಗಿ ಒಡೆದು ಬಿಸಿಲಲ್ಲಿಟ್ಟು, ಒಣಗಿಸಿ ಆಹಾರ ಯೋಗ್ಯವಾದ ಕೊಬ್ಬರಿ ಬಟ್ಟಲನ್ನು ಉತ್ಪಾದಿಸುವುದೂ ಉಂಟು. ಈ ಉತ್ಪಾದನೆಯು ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಲಕ್ಷದ್ವೀಪ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಾಗಿರುತ್ತೆ. ಕರ್ನಾಟಕದ ತಿಪಟೂರು ಮತ್ತು ಕೇರಳದ ಬಡಗರ—ಗಳ ತಿನ್ನುವ 'ಉಂಡೆ ಕೊಬ್ಬರಿ' ಬಹು ಪ್ರಸಿದ್ಧವೆನಿಸಿಕೊಂಡಿದೆ.

ಗಾಣವಾಡಿಸುವ ಕೊಬ್ಬರಿ

೧೧–೧೨ ತಿಂಗಳ ತೆಂಗಿನ ಕಾಯಿಯನ್ನೇ ಗಾಣವಾಡಿಸುವ ಕೊಬ್ಬರಿ ತಯಾರಿಸಲು ಉಪಯೋಗಿಸುವುದು. ತೆಂಗಿನ ಕಾಯಿಯನ್ನು ಸುಲಿದು ಸಿಪ್ಪೆಯನ್ನು ಬೇರ್ಪಡಿಸಿದ ನಂತರ ಅದನ್ನು ಎರಡು ಭಾಗಗಳಾಗಿ ಒಡೆದು ಬಿಸಿಲಲ್ಲಿಯೋ ಕೃತಕ ಶಾಖದಲ್ಲೋ ಒಣಗಿಸಿ ಕೊಬ್ಬರಿಯನ್ನು ತಯಾರಿಸುತ್ತಾರೆ. ಇಂತಹ ಕೊಬ್ಬರಿಯ ಒಟ್ಟು ಉತ್ಪಾದನೆಯಲ್ಲಿ ಶೇಕಡ ೭೫ ರಷ್ಟು ಕೇರಳದ್ದೇ ಆಗಿದೆ. ಮಿಕ್ಕ ಉತ್ಪಾದನೆಯು ಲಕ್ಷದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಕರ್ನಾಟಕ, ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಿಂದ ಆಗಿದೆ.

೫. ಕೊಬ್ಬರಿ ಎಣ್ಣೆ ಮತ್ತು ಹಿಂಡಿ

ಕೊಬ್ಬರಿ ಎಣ್ಣೆ : ಭಾರತದಲ್ಲಿ ಇಂದು ಒಂದು ವರ್ಷದಲ್ಲಿ ಸುಮಾರು ೩.೨೫ ಲಕ್ಷ ಟನ್ ಕೊಬ್ಬರಿ ಎಣ್ಣೆಯನ್ನು ಉತ್ಪಾದಿಸಲಾಗುತ್ತಿದೆಯೆಂದು ಅಂದಾಜು. ಇದರಲ್ಲಿ ಅರ್ಧದಷ್ಟು ಕೇರಳದಿಂದಲೂ, ಮಿಕ್ಕ ಅರ್ಧ ಇತರ ರಾಜ್ಯಗಳಿಂದಲೂ ಲಭಿಸುತ್ತದೆ. ಗ್ರಾಮಾಂತರಗಳಲ್ಲಿ ಗಾಣವನ್ನುಪಯೋಗಿಸಿಯೇ ಮನೆಯ ಅವಶ್ಯಕತೆಗಳಿಗಾಗಿ ಎಣ್ಣೆ ತೆಗೆಯಲಾಗುತ್ತಿದೆ. ವಾಣಿಜ್ಯ ರೀತಿಯಲ್ಲಿ ಎಣ್ಣೆ ತೆಗೆಯಲು ರೋಟರಿಗಳು, ಎಕ್ಸ್‌ಪೆಲ್ಲರ್‌ಗಳು, ಹೈಡ್ರಾಲಿಕ್ ಪ್ರೆಸ್‌ಗಳನ್ನುಪಯೋಗಿಸಲಾಗುತ್ತಿದೆ. ರೋಟರಿಗಳಲ್ಲಿ ಶೇಕಡ ೬೩–೬೪ರಷ್ಟು, ಎಕ್ಸ್‌ಪೆಲ್ಲರ್‌ಗಳಲ್ಲಿ ಶೇಕಡ ೬೪–೬೫ರಷ್ಟು ಎಣ್ಣೆ ಲಭಿಸುತ್ತದೆ.

ಶುದ್ಧವಾದ ಕೊಬ್ಬರಿ ಎಣ್ಣೆಗೆ ಬಣ್ಣ ವಿರುವುದಿಲ್ಲ. ಇದು ನೀರಿನಲ್ಲಿ ಕರಗುವುದಿಲ್ಲ. ಇದರಲ್ಲಿ ಲಾರಿಕ್ ಮುಂತಾದ ಆಮ್ಲಗಳು ಪ್ರಧಾನವಾಗಿರುತ್ತವೆ.

ಶುಭ್ರಗೊಳಿಸಿದ ಕೊಬ್ಬರಿ ಎಣ್ಣೆಯಲ್ಲಿ ಹೆಚ್ಚಿನ ಜಲಾಂಶವೂ, ಸ್ವತಂತ್ರ ಮೇಧಾಮ್ಲಗಳೂ ಅಡಗಿರುವುದಾದಲ್ಲಿ ಅದು ಬೇಗ ಕೊಳೆತು ನಾರುತ್ತದೆ. ಸಾಧಾರಣ ವಾಗಿ ಎಕ್ಸ್‌ಪೆಲ್ಲರ್ ಮಿಲ್‌ಗಳಲ್ಲಿ ಆಡಿಸಿ ಫಿಲ್ಟರ್‌ಪ್ರೆಸ್‌ನಲ್ಲಿ ಶೋಧಿಸಿದ ಎಣ್ಣೆ ಯನ್ನು ಶುದ್ಧವೆಂದು, ರೋಟರಿಗಳಿಂದ ಶೋಧಿಸಿ ತೆಗೆದ ಎಣ್ಣೆಯನ್ನು ಅಶುದ್ಧ ವೆಂದೂ ಹೇಳುತ್ತಾರೆ. ಕೊಬ್ಬರಿ ಎಣ್ಣೆಯು ಬೆಣ್ಣೆಯಂತಹ ಇನ್ನಿತರ ಕೊಬ್ಬುಗಳಿಗಿಂತ ಶೀಘ್ರವಾಗಿ ಜೀರ್ಣವಾಗುತ್ತದೆ. ಆದ್ದ ರಿಂದ ಬೆಣ್ಣೆಗೆ ಬದಲಾಗಿ ಕೊಬ್ಬರಿ ಎಣ್ಣೆ ಯನ್ನು ಖಾದ್ಯವಸ್ತುಗಳಲ್ಲಿ ಉಪಯೋಗಿಸ ಬಹುದು. ವನಸ್ಪತಿ ತಯಾರಿಕೆಯಲ್ಲಿ ಕೊಬ್ಬರಿ ಎಣ್ಣೆಯು ಒಂದು ಉಪಯುಕ್ತ ವಾದ ಘಟಕ. ಕೊಬ್ಬರಿ ಎಣ್ಣೆಯ ಇತರ ಮುಖ್ಯ ಉಪಯೋಗಗಳೆಂದರೆ ಇದನ್ನು ಬೇಕರಿ ತಿಂಡಿಗಳು, ಮಿಠಾಯಿ ಮುಂತಾದು ವುಗಳ ಉತ್ಪಾದನೆಗಳಲ್ಲಿ ಬಳಸುವುದು. ಕೊಬ್ಬರಿ ಎಣ್ಣೆಯನ್ನು ಸೋಪು, ಸುಗಂಧ ಲೇಪನಗಳು ಮತ್ತು ಕೇಶತೈಲಗಳ ತಯಾ ರಿಕೆಯಲ್ಲೂ ಉಪಯೋಗಿಸುತ್ತಾರೆ. ಕೊಬ್ಬರಿ ಎಣ್ಣೆಯನ್ನು ಆಹಾರ ತಯಾರಿಕೆಯಲ್ಲಿ ಉಪಯೋಗಿಸಿದರೆ ಹೃದ್ರೋಗ ಉಂಟಾಗು ತ್ತೆಂಬ ಒಂದು ನಂಬಿಕೆ ಇತ್ತೀಚೆಗೆ ಬಂದಿದೆ. ಇದು ಆಧಾರರಹಿತ ಎಂದು ಸಂಶೋಧನೆ ಗಳಿಂದ ವ್ಯಕ್ತವಾಗಿದೆ. ಮನುಷ್ಯನ ಆಹಾರ ರೀತಿಗಿಂತ ಆಧುನಿಕ ಜೀವನಕ್ರಮ ಇದ ರಿಂದುಂಟಾಗುವ ಮಾನಸಿಕ ಸ್ಥಿತಿಗತಿಗಳೂ ವ್ಯಾಯಾಮದ ಅಭಾವವೂ ಹೃದ್ರೋಗ ವನ್ನು ಆಹ್ವಾನಿಸುತ್ತಷ್ಟೆ.

ಹಿಂಡಿ

ಕೊಬ್ಬರಿಯನ್ನು ಆಡಿಸಿದಾಗ ಅದರ ಶೇಕಡ ೩೦-೪೦ರಷ್ಟು ಭಾಗವು ಹಿಂಡಿ ಯಾಗಿ ಲಭಿಸುತ್ತದೆ. ಇದರಲ್ಲಿ ಶೇ|| ೬-೧೫ ರಷ್ಟು ಕೊಬ್ಬರಿ ಎಣ್ಣೆ ಇನ್ನೂ ಉಳಿದಿರು ತ್ತದೆ. ಹಿಂಡಿಯು ದನದ ಮೇವೆನಿಸುತ್ತದೆ. ತೆಂಗಿನ ಹಿಂಡಿಯಲ್ಲಿ ನೀರು, ಪ್ರೋಟೀನ್, ಕೊಬ್ಬು, ಸಾರವಸ್ತು, ನಾರು ಮತ್ತು ಬೂದಿ ಅಡಗಿರುತ್ತದೆ. ತೆಂಗಿನ ಹಿಂಡಿ ಯನ್ನು ಒಂದು ಜೈವಿಕ ಗೊಬ್ಬರ ವಾಗಿಯೂ ಉಪಯೋಗಿಸಲಾಗುತ್ತದೆ.

೬. ತೆಂಗಿನ ಸಿಪ್ಪೆ ಮತ್ತು ಕರಟ

ತೆಂಗಿನಸಿಪ್ಪೆ

ತೆಂಗಿನ ಸಿಪ್ಪೆಯು ಕೈಗಾರಿಕೆಯಲ್ಲಿ ಬಳಸುವ ಪ್ರಮುಖ ವಸ್ತು. ಇದರಿಂದ ದೊರಕುವ ಒಂದು ಉತ್ಪನ್ನವೆಂದರೆ ಹಣ್ಣು ಅಥವಾ ತೆಂಗಿನನಾರು (ಜುಂಗು) ಪ್ರಪಂಚದ ಒಟ್ಟು ತೆಂಗಿನ ನಾರಿನ ಉತ್ಪಾದನೆಯಲ್ಲಿ ಸುಮಾರು ೩ ಲಕ್ಷ ಟನ್ ಗಳಷ್ಟೆಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಭಾರತ ಮತ್ತು ಶ್ರೀಲಂಕಾದ ಕೊಡುಗೆ ಕ್ರಮವಾಗಿ ಶೇಕಡಾ ೬೦ ಮತ್ತು ೩೦ರಷ್ಟಿದೆ. ತೆಂಗಿನಕಾಯಿ ಬಲಿತಂತೆ ಅದರ ಸಿಪ್ಪೆಯ ತೂಕವು ಕಡಿಮೆಯಾಗುತ್ತದೆ. ಇದಕ್ಕೆ ಸಿಪ್ಪೆಯಲ್ಲಿನ ತೇವವು ಕಾಯಿಬಲಿತು ಹಣ್ಣಾದಂತೆ ಹೆಚ್ಚು ಹೆಚ್ಚು ನಷ್ಟವಾಗು ವುದೇ ಕಾರಣ.

ತೆಂಗಿನ ನಾರಿನಲ್ಲಿ ಸಾಧಾರಣವಾಗಿ ಎರಡು ಬಗೆಗಳಿವೆ. ಒಂದು ಬಿಳಿಯನಾರು. ಮತ್ತೊಂದು ತವುಡು ಬಣ್ಣದ್ದು. ಬಿಳಿಯ ನಾರು ಉತ್ತಮವಾದದ್ದು. ಇದು ಉದ್ದವಾಗಿರುತ್ತದೆ. ಇದನ್ನು ಹಗ್ಗದಚಾಪೆ, ರತ್ನಗಂಬಳಿ ಮುಂತಾದ ಉತ್ತಮಬಗೆಯ ಉತ್ಪನ್ನಗಳ ನಿರ್ಮಾಣಕ್ಕೆ ಉಪಯೋಗಿಸುತ್ತಾರೆ. ತವುಡುಬಣ್ಣದ ನಾರನ್ನು ಸಾಮಾನ್ಯವಾಗಿ ಬ್ರಷ್ ತಯಾರಿಕೆಯಲ್ಲಿ ಅಪ್ ಹೋಲ್‌ಸ್ಟ್ರಿ, ಕುಶನ್ ಮುಂತಾದವುಗಳಲ್ಲಿ ತುಂಬಲೂ ಉಪಯೋಗಿಸುತ್ತಾರೆ. ಸಿಪ್ಪೆಯಲ್ಲಿ ತೆಂಗಿನಹುಡಿ ಅಥವಾ ನಾರಿನ ಹುಡಿ ಉಪಯೋಗವಿಲ್ಲದ ಒಂದು ವಸ್ತುವಾದರೂ ಅದನ್ನು ಗೊಬ್ಬರವಾಗಿಯೂ ಉಪಯೋಗಿಸುವುದುಂಟು.

ಕರಟ

ತೆಂಗಿನ ಕರಟವನ್ನು ಕೈಗಾರಿಕೆಯಲ್ಲಿ ಉಪಯೋಗಿಸಲಾಗುವುದು. ಇದನ್ನು ಸಾಧಾರಣವಾಗಿ ಒಲೆಗೆ ಉಪಯೋಗಿಸುತ್ತಾರೆ. ವಿಶೇಷವಾಗಿ ರತ್ನಾಭರಣ ವ್ಯಾಪಾರಿಗಳೂ, ಇಸ್ತ್ರಿ ಮಾಡುವವರೂ ಇದನ್ನು ಇದ್ದಿಲಾಗಿ ಉಪಯೋಗಿಸುತ್ತಾರೆ. ಗೃಹಕೃತ್ಯಕ್ಕೆ ಅವಶ್ಯವಿರುವ ಸಣ್ಣ ಪುಟ್ಟ ಪಾತ್ರೆಗಳನ್ನು ತಯಾರಿಸಲು ಇದನ್ನು ಉಪಯೋಗಿಸುತ್ತಾರೆ. ಹುಕ್ಕ, ಕೌತುಕ ವಸ್ತುಗಳನ್ನು ಇದರಿಂದ ತಯಾರಿಸುವುದುಂಟು. ತೆಂಗಿನ ಕರಟದ ಇದ್ದಿಲು, ಉತ್ತೇಜಿಸಲ್ಪಟ್ಟ ಕಾರ್ಬನ್, ಕರಟದ ಪುಡಿ ಇತ್ಯಾದಿ ಉತ್ಪನ್ನಗಳನ್ನು ವ್ಯಾವಹಾರಿಕವಾಗಿ ಉತ್ಪಾದಿಸಲೂ ಈಗ ಕರಟವನ್ನು ಉಪಯೋಗಿಸುವುದುಂಟು.

ಆಫೀಸ್: ಮನೆ ತಾಪತ್ರಯಗಳನ್ನೆಲ್ಲ ಮರೆತು ನೌಕರರು ನಿದ್ರೆ ಮಾಡುವ ಸ್ಥಳ.

ಗುಮಾಸ್ತ: ಸಂಬಳದಲ್ಲಿ ಬಿದ್ದು ಒದ್ದಾಡುವ ನೊಣ.

ಅಳತೆ: ವ್ಯಾಪಾರಗಾರರು ಕಲಿತಿರುವ ಒಂದು ಬಗೆಯ ಇಂದ್ರಜಾಲ.

ಓಟು: ೫ ವರ್ಷಕ್ಕೊಮ್ಮೆ ಘನವಾಗುವ ವಸ್ತು.

ಚಾಡಿ: ಖಾಲಿ ಬುರುಡೆಗಳಿಗೆ ಕಿವಿಗಳ ಮೂಲಕ ತುಂಬಬಹುದಾದ ವಿಷ..

ನಾಪಿತ: ತಂದೆ ಇಲ್ಲದವನು.

ನಾ. ಕ. ಅವರ ಅನರ್ಥಕೋಶದಿಂದ

ಪುಸ್ತಕ ಪರಿಚಯ

ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ—ಪ್ರಕಟಣೆ ನವಕರ್ನಾಟಕ ಪಬ್ಲಿಕೇಶ್, ಬೆಂಗಳೂರು.

೧೯೬೮ರಲ್ಲಿ ಆಕಾಶವಾಣಿ ಅವರು ಏರ್ಪಡಿಸಿದ್ದ ವಿಚಾರಗೋಷ್ಠಿಯೊಂದರಲ್ಲಿ ಮಂಡಿಸಿದ್ದವೆನ್ನಲಾದ ಮೂರು ಲೇಖನಗಳನ್ನು ಕನ್ನಡದಲ್ಲಿ ಪ್ರಸ್ತುತಪಡಿಸಿದ್ದಾರೆ ಶ್ರೀ ಕೆ. ಎಲ್. ಗೋಪಾಲಕೃಷ್ಣರಾವ್. ಇಪ್ಪತ್ತೇಳು ವರ್ಷಗಳ ನಂತರವೂ ಪ್ರಸ್ತುತ ಎನಿಸುವ ಲೇಖನಗಳು ಮಹತ್ವದ ಪ್ರಶ್ನೆಗಳನ್ನು ಮುಂದಿಡುತ್ತವೆ.

ಕೋಮಲ ಥಾಪರ ‘ಕೋಮುವಾದ ಹಾಗೂ ಪುರಾತನ ಭಾರತೀಯ ಇತಿಹಾಸ ಲೇಖನ’, ಹರ್ಬನ್ಸ್ ಮುಖಿಯರವರ ‘ಮಧ್ಯಯುಗದ ಭಾರತೀಯ ಇತಿಹಾಸ ಹಾಗೂ ಕೋಮುವಾರು ದೃಷ್ಟಿಕೋನ’ ಮತ್ತು ಬಿಪಿನ್‌ಚಂದ್ರರ ‘ಆಧುನಿಕ ಭಾರತೀಯ ಇತಿಹಾಸಕಾರರು ಹಾಗೂ ಕೋಮುವಾದ’—ಲೇಖನಗಳು ಮೂಲಭೂತವಾಗಿ ಎತ್ತುವ ಸಂಗತಿಯೆಂದರೆ, ಇತಿಹಾಸಕಾರರು ಇತಿಹಾಸವೆಂದರೆ ಕೇವಲ ತಮ್ಮ ಮನಸ್ಸಿಗೆ ಹತ್ತಿದ ಘಟನೆಗಳ ನಿರೂಪಣೆ ಎಂದಷ್ಟೇ ಭಾವಿಸಿದ್ದು ಹಾಗೂ ತಮಗೊದಗಿದ ಸಂಗತಿಗಳನ್ನು ಒರೆಹಚ್ಚಿ ನೋಡದೆ, ತಮ್ಮ ಮನಸ್ಸಿಗೊಪ್ಪಿದ ಸಂಗತಿಗಳನ್ನಷ್ಟೇ ದಾಖಲುಮಾಡುವುದೇ ಇತಿಹಾಸ ಎಂದುಕೊಂಡಿದ್ದು.

ಇತಿಹಾಸ ಎಂದರೆ ಘಟನೆಗಳ ನಿರೂಪಣೆ, ತಮಗಾಶ್ರಯ ಕೊಟ್ಟ ಧಣಿಯ ಮತ್ತವನ ಕುಟುಂಬದ ಚರಿತ್ರೆ ಮಾತ್ರವೇ ಎಂಬ ಇತಿಹಾಸಕಾರರ ನಿಲುವುಗಳಿಂದ ಚರಿತ್ರೆಯನ್ನು ಅನುಮಾನಿಸುವ ಪರಿಸ್ಥಿತಿ ದಿಟ ಎನಿಸುವಹಾಗೆಯೇ ಪ್ರಾಚೀನ ಶೋಧನ ಸಾಕ್ಷ್ಯಾಧಾರಗಳ ಬೆಳಕಿನಲ್ಲಿ ಇತಿಹಾಸವನ್ನು ಒರೆಹಚ್ಚಬೇಕೆನ್ನುವ ಲೇಖಕರ ಆಶಯ ಅಗತ್ಯವೂ ಹೌದು.

ಭಾರತೀಯ ಇತಿಹಾಸವೆಂದರೆ ಕೋಮುವಾದ ಬೆಳೆದ ಬಗ್ಗೆ ಚರ್ಚಿಸುವುದು ಎಂಬಂತಾಗಿರುವುದು ಇತಿಹಾಸದ ದುರಂತ (ಪ್ರಸ್ತುತ ಲೇಖನಗಳೂ ಇದಕ್ಕೆ ಅಪವಾದವಾಗಿಲ್ಲ.) ಭಾರತೀಯ ಇತಿಹಾಸ ಎಂದರೆ ಧರ್ಮಗಳ ಸಂಘರ್ಷ ಎಂಬ ಭಾವನೆಯನ್ನು ಇತಿಹಾಸಕಾರರು ಹುಟ್ಟುಹಾಕಿದ್ದೇ ದುರದೃಷ್ಟಕರವಾದದ್ದು. ಭಾರತೀಯ ಇತಿಹಾಸದುದ್ದಕ್ಕೂ ನಮ್ಮಲ್ಲಿ ಯಾವುದೇ ಧರ್ಮದ ನಿಲುವುಗಳ ಸಮರ್ಥನೆ ಅಥವಾ ವಿರೋಧ ಕೇವಲ ಆಡಳಿತಗಾರರು ಮತ್ತು

ವರ ಕೂಟಗಳ ನಡುವೆಯಷ್ಟೇ ನಡೆದಿರುವುದು ಇತಿಹಾಸದ ಸತ್ಯ. ಹಾಗೆಯೇ ಒಂದು ಚಿಕ್ಕಗುಂಪು ತೆಗೆದುಕೊಂಡ ಒಳ್ಳೆಯ ಅಥವಾ ಕೆಟ್ಟ ನಿಲುವು ಇಡೀ ಸಮುದಾಯವನ್ನು ಒಳಗೊಂಡ ಘಟನೆಗಳಾಗಿ ನಿರೂಪಣೆಯಾಗುತ್ತಿರುವುದು ಇತಿಹಾಸದ ವ್ಯಂಗ್ಯ. ಯಾವುದೇ ಧಾರ್ಮಿಕ ಸಂಘರ್ಷ ಇಡೀ ಜನ ಸಮುದಾಯವನ್ನು ಒಳಗೊಂಡು ಜನಾಂಗೀಯ ಘರ್ಷಣೆಗೆ, ಸಂಸ್ಕೃತಿ ನಾಶಕ್ಕೆ ಎಂದಿಗೂ ಕಾರಣವಾಗಿಲ್ಲ. ಭಾರತೀಯ ಸಂದರ್ಭವನ್ನು ಹಿಟ್ಲರನ ದೃಷ್ಟಿಗೆ ಹೋಲಿಸುವುದು, ರಾಷ್ಟ್ರೀಯವಾದವು ದುರ್ಬಲವಾಗಿತ್ತೆನ್ನುವುದು ಸದಭಿಪ್ರಾಯವಾಗಲಾರದು. ಅನಕ್ಷರಸ್ಥರ, ಬಡತನದಲ್ಲಿ ಬೇಯುತ್ತಿದ್ದವರ ಸಂಖ್ಯೆ ಅಪಾರವಿದ್ದ ಕಾಲದಲ್ಲಿ ರಾಷ್ಟ್ರೀಯವಾದಿಗಳ ಮಿತಿ ಏನಿತ್ತು ಎನ್ನುವುದನ್ನು ಗಮನಿಸಬೇಕು.

ಬ್ರಿಟಿಷ್ ಆಡಳಿತ ಕಾಲದಲ್ಲಿ ತಿರುಚಿದ ಇತಿಹಾಸವನ್ನೇ ಇಂದೂ ಬೋಧಿಸುತ್ತಿರುವ ವಿಪರ್ಯಾಸಕ್ಕೆ ಈಗಲಾದರೂ ಕೊನೆ ಹಾಡಬೇಕಿದೆ. ಇತಿಹಾಸವನ್ನು ನಿಜದ ಒರೆಗಲ್ಲಿಗೆ ಹಚ್ಚಿ, ಸಂಗತಿಗಳ ಮೂಲ, ಪ್ರಸ್ತುತತೆ, ಪ್ರಾಚೀನ ಶೋಧನ ಸಾಕ್ಷ್ಯಾಧಾರಗಳ ನೆಲೆಗಟ್ಟಿನಲ್ಲಿ ಪುನರ್ರಚಿಸುವ ಅಗತ್ಯವಿದೆ ಎಂಬ ಲೇಖಕರ ಪ್ರತಿಪಾದನೆ ಸ್ವಾಗತಾರ್ಹ ನಿಲುವು.

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಸಣ್ಣ ಸಂಗತಿಗಳನ್ನು ರಾಜಕೀಯ ದೃಷ್ಟಿಯಿಂದ ದೊಡ್ಡದುಮಾಡಿದ್ದೇ ಇಂದೂ, ಎಂದೂ ಒಟ್ಟಾಗಿರುವ ಅನಿವಾರ್ಯತೆಯನ್ನು ಕಂಡುಕೊಂಡಿರುವ ಅಂಥಾ ಸಹನ ಶೀಲತೆಯಿಂದಷ್ಟೇ ಬಲಿಷ್ಠವಾಗಿ ಪರಸ್ಪರ ಬೆಳೆದಿರುವ ಧರ್ಮಗಳ ಒಬ್ಬರನ್ನೊಬ್ಬರು ಅನುಮಾನಿಸುವಂಥಾಗಿದೆ. ರಾಜಕೀಯ ಲಾಭಕ್ಕಾಗಿ ಒಂದುಕಡೆ ಆಕ್ರಮಣಕಾರಿ ಸ್ವಭಾವಬಿತ್ತುತ್ತ ಮತ್ತೊಂದು ಕಡೆ ಅಸ್ತಿತ್ವದ ಸಂಚಕಾರದ ಭಯಹುಟ್ಟಿಸುತ್ತಾ ನಡೆದಿರುವ ಅಸಹ್ಯ ಬೆಳವಣಿಗೆ ಆತಂಕಕಾರಿ.

ಉತ್ತಮ ಆರೋಗ್ಯಪೂರ್ಣ ಚರ್ಚೆಗೆ ಆಹ್ವಾನಿಸುವ ಲೇಖನ ಗುಚ್ಛದ ಶೀರ್ಷಿಕೆ 'ಭಾರತೀಯ ಇತಿಹಾಸದ ಪುನರ್ರಚನೆಯ ಅಗತ್ಯ' ಎಂದಿದ್ದರೆ, ಬೆಂಕಿಕಾರುವ ಮುಖಪುಟವಿಲ್ಲದಿದ್ದರೆ ಲೇಖಕರ ನಿಲುವು ಎಲ್ಲೋ ಒಮ್ಮುಖ ಎಂದು ಸಂಶಯಿಸಬೇಕಿರಲಿಲ್ಲ.

ಡಂಕಲ್ ಪ್ರಸ್ತಾವನೆ–ಪತ್ರಿಕಾ ರಂಗಕ್ಕೆ ಲಗ್ಗೆ—ಲೇಖಕರು : ಜಿ.ಎನ್. ಮೋಹನ್ ನವಕರ್ನಾಟಕ ಪ್ರಕಾಶನ, ಬೆಂಗಳೂರು

ಡಂಕೆಲ್ ಪ್ರಸ್ತಾವನೆಗೆ ನಮ್ಮ ದೇಶ ತಲೆದೂಗಿರುವ ಈ ಸಂದರ್ಭದಲ್ಲಿ, ನಮ್ಮ ಆರ್ಥಿಕ ಚಟುವಟಿಕೆಗಳೆಲ್ಲಕ್ಕೂ ಮೂಗು ತೂರಿಸುವ ಸಂದರ್ಭ ಹೊಂಚಿಕೊಂಡಿರುವ ವಿದೇಶಿ ಶಕ್ತಿಗಳು, ನಮ್ಮ ಸಂಪತ್ತಿನಷ್ಟೇ ಅಲ್ಲದೆ ನಮ್ಮ ಸಂಸ್ಕೃತಿಯನ್ನೂ ಸರಕಾಗಿಸಿ ವ್ಯವಹಾರ ಗಿಟ್ಟಿಸಿಕೊಳ್ಳುವ ಅಪಾಯದ ಬಗೆಗೆ ಪ್ರಸ್ತಾಪಿಸುವ ಶ್ರೀ ಜಿ. ಎನ್. ಮೋಹನ್, ವಿದೇಶೀ ಮಾಧ್ಯಮಗಳು ನಮ್ಮ ಪ್ರಜಾಪ್ರಭುತ್ವದ ನಾಲ್ಕನೇ

ಆಧಾರ ಸ್ತಂಭವಾದ ಪತ್ರಿಕಾ ರಂಗಕ್ಕೆ ಲಗ್ಗೆ ಹಾಕುವ ಸನ್ನಾಹ ನಡೆಸಿರುವುದನ್ನು ಸುದೀರ್ಘವಾಗಿ ಹಾಗೂ ಪರಿಣಾಮಕಾರಿಯಾಗಿ ಚರ್ಚಿಸಿದ್ದಾರೆ.

ಭಾರತೀಯ ಪತ್ರಿಕಾ ಮಾಧ್ಯಮ, ಪ್ರಾದೇಶಿಕ ಪತ್ರಿಕಾ ರಂಗವನ್ನೊಳಗೊಂಡಂತೆ ಇನ್ನೂ ಬಲಿಷ್ಠವಾಗಿ ಬೆಳೆಯುದಿರುವ ಪರಿಸ್ಥಿತಿಯಲ್ಲಿ ವಿದೇಶೀಯರ ಬಗ್ಗೆ ಅಪೇಕ್ಷಣೀಯವೇ? ೧೯೫೩ ರಿಂದಲೂ ಸುದ್ದಿ ಮಾಧ್ಯಮಗಳ ಬಗ್ಗೆ ನಡೆದಿರುವ ಚರ್ಚೆ, ಸರ್ಕಾರದ ನಿಲುವಿನಲ್ಲಿ ಆಗುತ್ತಿರುವ ಬದಲಾವಣೆಗಳು, ಭಾರತೀಯ ಸುದ್ದಿ ಸಂಸ್ಥೆಗಳಿಗೆ ಬಿದ್ದಿರುವ ಹೊಡೆತ, ಪತ್ರಿಕಾ ಮಂಡಳಿಯ ಬಗ್ಗೆ ಸರ್ಕಾರದ ಅಸಡ್ಡೆ ಕೆಲವರ ಹಿತಾಸಕ್ತಿಗಾಗಿಯೇ ಪತ್ರಿಕೆಗಳನ್ನು ಬೆಳೆಸುತ್ತಿರುವುದು ಇಲ್ಲವೇ ಬಗ್ಗು ಬಡಿಯುತ್ತಿರುವುದು—ಹೀಗೆಲ್ಲಾ ಇದ್ದು ಪರಕೀಯರ ಬಗ್ಗೆ ನಮ್ಮ ಪತ್ರಿಕಾ ರಂಗದ ಆರೋಗ್ಯಕ್ಕೆ ಎಂಥಾ ಹಾನಿ ತರಬಹುದು ಎಂಬ ಬಗ್ಗೆ ಅರ್ಥಪೂರ್ಣವಾಗಿ ಚರ್ಚಿಸುವ ಮೋಹನರ ಕಾಳಜಿ, ಕಳವಳ ಹಾಗೂ ಕಳಕಳಿಯ ಎಚ್ಚರ ಗಮನಾರ್ಹ.

ಪತ್ರಿಕೆ ಎಂದರೆ ಕೇವಲ ಪತ್ರಿಕೆಯಷ್ಟೇ ಅಲ್ಲ. ಕೇವಲ ಸರಕೂ ಅಲ್ಲ. ಅದು ಓದುಗನದೇ ಒಂದು ಭಾಗ. ಒಂದು ರೀತಿಯ ಗೀಳು, ಮನಸ್ಸಿಗೆ ಹತ್ತಿದ ಚಟ. ಅದನ್ನು ಅಡಲ್‌ಟರೇಟ್ ಮಾಡುವುದು ಎಂದರೆ ಓದುಗನನ್ನು, ಇಡೀ ಓದುಗ ಸಮುದಾಯವನ್ನು ಸಂಸ್ಕೃತಿಯನ್ನು ಸಮಾಜವನ್ನು ಹಾಳುಗೆಡಹುದು. ರೂಪರ್ಟ್ ಮುರ್ಡೋಕ್ ಎಂಬ ಮಾಧ್ಯಮ ದೊರೆಯಾಗಿ ಮೆರೆಯುತ್ತಿರುವ ಮಹಾಶಯ ಕೇವಲ ಲಾಭಬಡುಕ ಯಂತ್ರವಲ್ಲ. ಅತ ಒಂದು ಭಯಾನಕ ವೈರಸ್. ಸಂಸ್ಕೃತಿ ಕ್ಷಯಕಾರಕ. ವೈರಸ್. ಇಂಥಾ ವೈರಸ್‌ನ ದಾಳಿಗೆ ಮುಂಚೆಯೇ ಎಚ್ಚತ್ತುಕೊಳ್ಳುವುದು ನಮ್ಮತನದ ಉಳಿವಿನ ಹಾಗೂ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಈ ಬಗೆಗಿನ ಮೋಹನರ ಎಚ್ಚರಿಕೆ ಸಮಯಕಾಲಿಕ ಮತ್ತು ಅರ್ಥಪೂರ್ಣ. ಮುರ್ಡೋಕ್ ಬರುವಿಗೆ ಮುನ್ನ ನಮ್ಮಲ್ಲಿಯೇ ಮುರ್ಡೋಕಿಸಂ ಕೆಲಸ ಮಾಡುತ್ತಿರುವುದರ ಬಗ್ಗೆಯೂ ಇನ್ನಷ್ಟು ಬೆಳಕು ಹಾಯಿಸಬೇಕಿತ್ತು.

‘ಕಳೆದುಹೋದದ್ದು’—(ಕಥಾಸಂಕಲನ)—ಲೇಖಕರು : ಪರಂಜ್ಯೋತಿ ; ಪ್ರಕಾಶಕರು : ಇಂಚರ ಪ್ರಕಾಶನ, ಬೆಂಗಳೂರು.

ಎರಡೂವರೆ ದಶಕಗಳಿಗೂ ಹಿಂದೆ ನಾಡಿನ ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟಗೊಂಡ 'ಪರಂಜ್ಯೋತಿ'ಯವರ ಹತ್ತು ಸಣ್ಣ ಕತೆಗಳ ಸಂಕಲನ ಕಳೆದುಹೋದದ್ದು.'

ಆ ಕಾಲದಲ್ಲಿ, ಬದಲಾಗುತ್ತಿದ್ದ ಕನ್ನಡ ಸಾಹಿತ್ಯ ಸಂದರ್ಭದ ಅಬ್ಬರದಲ್ಲಿ ಪ್ರಕಟಗೊಂಡಿದ್ದರೆ ಚೆನ್ನಿತ್ತೇನೋ ಎನ್ನಿಸುವ ಕತೆಗಳು, ಬದಲಾದ ಸಂದರ್ಭ ಮತ್ತು

ಮೌಲ್ಯಮಾಗಳು ಬೆಳೆಯುತ್ತಿರುವ ವೇಗದ ಗಾಳಿಯಲ್ಲಿ ಮಸುಕಾಗಿ ಕಾಣಿಸುವುದು ಸಹಜ.

ಆ ಕಾಲಕ್ಕೆ ಸುಂದರಿಯಾಗಿದ್ದಳು ಎನ್ನಿಸುವ ಕತೆಗಳು ಈಗ ಜಾಣತನದ ರಚನೆಗಳು, ಬುದ್ಧಿವಂತಿಕೆಯ ಪದ-ಕಸರತ್ತು ಎನಿಸಬಹುದಾದರೂ ಬದುಕು ಬಗ್ಗೆ ತಿಳಿದುಕೊಳ್ಳುವ, ತಿಳಿಗೊಳ್ಳುವ ನಿರಂತರ ಕ್ರಿಯೆಗೆ ಚಡಪಡಿಸುವ ಮನಸ್ಸೊಂದು ಸ್ಪಂದಿಸಿದ ಬಗೆ ಎಂದೂ ಅನಿಸುವುದು ಗಮನಾರ್ಹ.

ಇದ್ದುದೆಲ್ಲವ ಬಿಟ್ಟು ಇರದುದರ ಬಗ್ಗೆ ತುಡಿವ 'ಜೀವಣ್ಣ'ನ 'ಶೂನ್ಯ', ಮೊದಲೇ ನಿರ್ಧರಿಸಿದಂತೆ ಸಾಗುವ 'ಹೇಳಬಾರದಿತ್ತು', 'ಪಂಜರ' 'ಭೂಮಿ', ಹುಡುಕಾಟದ ಹುಡುಗಾಟದ 'ಕಳೆದುಹೋದದ್ದು', 'ಅಮೂರ್ತ' 'ಬದುಕು'—ಬುದ್ಧಿಪೂರ್ವಕವಾಗಿ ನೇರ ರಚನೆಗಳು ಅನ್ನಿಸಿದರೆ, ಗಮನ ಸೆಳೆವ 'ಚಿನ್ನದ ಸಿಲುಬೆ'ಯ ನಡುವೆ ಕಾಲಾತೀತವಾಗಿ ನಿಲ್ಲುವವಳು 'ಬೀದಿ'ಯ 'ಪೊನ್ನಮ್ಮ.'

ಗಮನ ಸೆಳೆವ ಕತೆಗಾರ "ಪರಂಜ್ಯೋತಿ"ಯವರು – ಇಂಥವರೊಬ್ಬರು ಚೊಕ್ಕಾಡಿಯವರು ಹೇಳುವಂತೆ ಆ ಕಾಲದಲ್ಲೇ ಬೇಕಿದ್ದ ಪ್ರಮಾಣದಲ್ಲಿ ಪ್ರಕಟಗೊಳ್ಳಬೇಕಿತ್ತು.

ಎಂ. ಎಸ್. ವಿಜಯರಾಜ್
೧೧೮೩-೨೦-ಎ, ೩ನೇ ಮುಖ್ಯ ರಸ್ತೆ
ಸಾರ್ವಜನಿಕ ಹಾಸ್ಟಲ್ ರಸ್ತೆ
ಮೈಸೂರು-೫೭೦ ೦೦೪

* * * * *

ನಮ್ಮ ಸಂಸತ್ತು—ಲೇಖಕರು: ಸುಭಾಷ್ ಸಿ. ಕಶ್ಯಪ್. ಅನುವಾದ: ಆರ್. ಎಲ್. ಅನಂತರಾಮಯ್ಯ. ಪ್ರಕಾಶನ: ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಎ-೫, ಗ್ರೀನ್ ಪಾರ್ಕ್, ಹೊಸ ದೆಹಲಿ—೧೧೦ ೦೧೬. ಮೊದಲ ಮುದ್ರಣ—೧೯೯೫. ಪುಟ—೨೮೩. ಬೆಲೆ: ರೂ. ೪೯-೦೦.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಂಸತ್ತಿನ ಪಾತ್ರ ಹಿರಿದು. ಸಂಸತ್ತು ಜನತೆಯ ಪರಮೋನ್ನತ ಸಂಸ್ಥೆ. ಸಾಂಸದಿಕ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ನಿಜವಾದ ಪ್ರಭುಗಳು. ಜಗತ್ತಿನಲ್ಲಿಯೇ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯುಳ್ಳ ಭಾರತದಂತಹ ರಾಷ್ಟ್ರದಲ್ಲಿ ಪ್ರಜೆಗಳೆ ನೇರವಾಗಿ ಪ್ರಭುಗಳಾಗಲು ಸಾಧ್ಯವಾಗದೇ ಇರುವುದರಿಂದ; ಪ್ರಜೆಗಳ ಪ್ರತಿನಿಧಿಗಳು ಪೌರರ ಆಶೋತ್ತರಗಳನ್ನು ಪ್ರತಿನಿಧಿಸುತ್ತಾರೆ. ಲೋಕಕಲ್ಯಾಣದ ಗುರಿಯಿರಿಸಿಕೊಂಡಿರುವ ಆಧುನಿಕ ಸಮಾಜದಲ್ಲಿ ಜನಸಮುದಾಯದ ಮನಸ್ಸುಗಳನ್ನರಿತು ನಡೆಯುವ ಜವಾಬ್ದಾರಿಯುತ ಪ್ರತಿನಿಧಿಗಳಿರಬೇಕಾಗುತ್ತದೆ. ಅವರಿಗೆ ಶಾಸಕಾಂಗದ ಗಂಭೀರ ಪರಿಚಯವಿರಬೇಕಾದದ್ದೂ ಅಷ್ಟೆ ಅವಶ್ಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆ ಮತ್ತು ಪ್ರತಿನಿಧಿಗಳು ಪರಸ್ಪರ

ಪೂರಕರಾದ್ದರಿಂದ ಪ್ರತಿಯೊಬ್ಬ ಪ್ರಜೆಗೂ ತಾನಿರುವ ವ್ಯವಸ್ಥೆಯ ಅರಿವಿರಬೇಕಾದ್ದೂ ಕೂಡ ಅಷ್ಟೆ ಮುಖ್ಯ. ಇಂಥ ಅಗತ್ಯವನ್ನು ಪೂರೈಸುವ ಕೃತಿಯಾಗಿ "ನಮ್ಮ ಸಂಸತ್ತು" ಬಂದಿದೆ.

ಈ ಕೃತಿಯನ್ನು ೧೯೫೩ರಿಂದ ೧೯೯೦ರ ವರೆಗೆ ಭಾರತದ ಸಂಸತ್ತಿನ ವಿವಿಧ ಹುದ್ದೆಗಳಲ್ಲಿ ತಮ್ಮ ಸೇವೆ ಸಲ್ಲಿಸಿ ಕೊನೆಯ ಆರು ವರ್ಷಗಳ ಅವಧಿಯಲ್ಲಿ ಲೋಕಸಭೆಯ ಸೆಕ್ರೆಟರಿ ಜನರಲ್ ಆಗಿ ಕಾರ್ಯನಿರ್ವಹಿಸಿರುವ ಡಾ|| ಸುಭಾಶ್, ಸಿ. ಕಶ್ಯಪ್ (೧೯೨೯) ಅವರು ಬರೆದಿದ್ದಾರೆ. ಪ್ರಸಿದ್ಧ ರಾಜ್ಯ ನೀತಿ ಶಾಸ್ತ್ರಜ್ಞರಾಗಿರುವ ಲೇಖಕರು ಪ್ರಜಾಪ್ರಭುತ್ವ ವ್ಯವಸ್ಥೆಯುಳ್ಳ ಅನ್ಯ ದೇಶಗಳ ಸಂಸತ್ತಿನ ಕಾರ್ಯಕಲಾಪಗಳನ್ನು ಅರಿತವರು. ಅಲ್ಲದೆ ಭಾರತದ ಸಂಸತ್ತಿನ ಕಾರ್ಯವಿಧಾನವನ್ನು, ನಡಾವಳಿಗಳನ್ನೂ ಅಂದರೆ ಮಸೂದೆಗಳ ಮಂಡನೆ, ಚರ್ಚೆ, ಮತ ನೀಡಿಕೆ, ಅಂಗೀಕಾರ....ಇತ್ಯಾದಿಗಳನ್ನು ಸಮಕ್ಷಮದಲ್ಲಿ ಅನುಭವಿಸಿದವರು. ಇಂಥ ಗಟ್ಟಿಯಾದ ಹಿನ್ನೆಲೆಯಲ್ಲಿ ಮತ್ತು ಲೇಖಕರ ಅನುಭವದ ಪಾತಳಿಯಲ್ಲಿ ಇದು ರೂಪಗೊಂಡಿರುವುದರಿಂದ ಈ ಕೃತಿಗೆ ವಿಶಿಷ್ಟತೆ ಪ್ರಾಪ್ತವಾಗಿದೆ. ಆದ್ದರಿಂದಲೇ ಅನೇಕ ವಿಷಯ ತಜ್ಞರು ಮತ್ತು ಕಾಲೇಜು ಅಧ್ಯಾಪಕರು ಸಂಸತ್ತನ್ನು ಕುರಿತ ಸಿದ್ಧಾಂತ ಮಾದರಿಯ ಅನೇಕ ಕೃತಿಗಳನ್ನು ಇದುವರೆವಿಗೆ ಬರೆದಿದ್ದರೂ, ಈ ಕೃತಿ ಇತರ ರಾಜ್ಯಶಾಸ್ತ್ರಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ.

"ನಮ್ಮ ಸಂಸತ್ತು" ಭಾರತದ ಸಂಸತ್ತಿನ ವ್ಯವಸ್ಥೆ ಅದರ ಕಾರ್ಯವಿಧಾನಗಳನ್ನು ಕುರಿತ ವಿವರಗಳನ್ನೊಳಗೊಂಡಿದೆ. ಸಂಸತ್ತಿನ ಇತಿಹಾಸವನ್ನು ಕ್ರಿ.ಪೂ. ಮೂರು ಸಾವಿರ ವರ್ಷಗಳ ವೈದಿಕಯುಗದಷ್ಟು ಪ್ರಾಚೀನತೆಗೆ ಕೊಂಡೊಯ್ಯುವ ಲೇಖಕರು, ಕಾಲ-ಕಾಲಕ್ಕೆ ಆದ ರಾಜಕೀಯ, ಸಾಮಾಜಿಕ ಸ್ಥಿತ್ಯಂತರವನ್ನು ಬದಲಾದ ನಿಯಮಾವಳಿಗಳನ್ನು ನಿರೂಪಿಸುವುದರೊಂದಿಗೆ ಅವರ ಪ್ರಸ್ತುತತೆಯನ್ನು ವಿವರಣಾತ್ಮಕವಾಗಿ ಹೇಳುತ್ತಾರೆ. ರಾಜ್ಯಾಡಳಿತ ವ್ಯವಸ್ಥೆ, ಸಂಸತ್ತಿನ ಕರ್ತವ್ಯಗಳು, ಚುನಾವಣಾ ವ್ಯವಸ್ಥೆ, ಅಧಿವೇಶನ, ಸಭಾಪತಿಯ ಕಾರ್ಯವಿಧಾನ, ಪ್ರಶ್ನೋತ್ತರ ವೇಳೆ, ವಿಷಯಮಂಡನೆ, ಮುಂಗಡ ಪತ್ರ, ನಿಯಮಗಳ ರಚನೆ ಸಂಸತ್ತಿನ ಸಮಿತಿಗಳು, ಸಂಸತ್ತಿನ ಸೇವೆ, ಸಾಂಸದಿಕ ನಡವಳಿಗಳು, ಹಕ್ಕುಗಳು ಹಾಗೂ ಅಂತರ ಪಾರ್ಲಿಮೆಂಟರಿ ಸಂಬಂಧಗಳು—ಹೀಗೆ ಹದಿನೈದು ಅಧ್ಯಾಯಗಳಲ್ಲಿ ರಾಜಕಾರಣ ಶೋಧನ ಕಾರ್ಯವನ್ನು ನಡೆಸುತ್ತಾ ಸಂಸತ್ತಿನ ಪೂರ್ಣ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಒಟ್ಟಾರೆಯಾಗಿ ಸಂಸತ್ತಿನ ಚಟುವಟಿಕೆಗಳ ಎಲ್ಲ ಕ್ಷೇತ್ರಗಳನ್ನು ಈ ಕೃತಿಯಲ್ಲಿ ಪರಿಶೀಲಿಸಲಾಗಿದೆ. ಉಭಯಸದನಗಳ ಕಾರ್ಯನಿರ್ವಹಣೆ ಸದಸ್ಯರ ಕಾರ್ಯವ್ಯಾಪ್ತಿ ಮತ್ತು ಸಂಸತ್ತಿನ ಸಮಿತಿಗಳನ್ನು ಕುರಿತ ಇವರ ಅಧ್ಯಯನ ಬೆಲೆಯುಳ್ಳದ್ದಾಗಿದೆ. ಕೃತಿಯ ಆವರಣದಲ್ಲಿ ಗಮನ ಸೆಳೆಯುವ ಮತ್ತೊಂದು ಅಂಶವೆಂದರೆ—ಸಂಸದೀಯ ಕಾರ್ಯ ಜರುಗುವ ಪಾರ್ಲಿಮೆಂಟು, ಸೆಂಟ್ರಲ್ ಹಾಲ್, ರಾಜ್ಯಸಭೆ, ಲೋಕಸಭೆ. ಕಮಿಟಿ ರೂಮಿನ ಒಳನೋಟಗಳನ್ನು ಕಾಣಿಸುವ ಉತ್ತಮ ಚಿತ್ರಗಳನ್ನು ಮುದ್ರಿಸಿರುವುದು.

'ನಮ್ಮ ಸಂಸತ್ತು'- ಭಾರತದ ಸಂಸತ್ತನ್ನು ತಿಳಿಯುವ ಕೈಪಿಡಿಯಾಗಿದೆ. ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ, ಸಂಸತ್ತಿನ ಬಗ್ಗೆ ಆಸಕ್ತಿಯುಳ್ಳವರಿಗೆ, ಕೆ.ಎ.ಎಸ್–ಐ.ಎ.ಎಸ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆ ಗೆಲ್ಲಲು ಅಧ್ಯಯನ ಮಾಡುವವರಿಗೆ ಈ ಕೃತಿ ಪ್ರಯೋಜನಕ್ಕೆ ಬರುತ್ತದೆ. ಸಂಸತ್ತಿನ ಸದಸ್ಯರು, ವಿಧಾನಸಭೆ, ವಿಧಾನಪರಿಷತ್ತುಗಳ ಸದಸ್ಯರು, ಹೊಸದಾಗಿ ಆಯ್ಕೆಯಾಗಿ ಬರುವ ಶಾಸಕರು ಪ್ರಥಮಬಾರಿಗೆ ಸದನಗಳ ಕಾರ್ಯದರ್ಶಿಗಳಾಗಿ ನೇಮಕಗೊಳ್ಳುವವರಿಗೆ ಮಾತ್ರವಲ್ಲದೆ ಸಾಮಾನ್ಯ ಓದುಗರಿಗೂ ಇದು ಉಪಯುಕ್ತ ಮಾರ್ಗದರ್ಶನ ನೀಡಬಲ್ಲ ರಾಜ್ಯ ನೀತಿಶಾಸ್ತ್ರವಾಗಿದೆ.

ಇಂಥ ಮಹತ್ವದ ಕೃತಿಯನ್ನು ಕನ್ನಡ ಭಾಷೆಯ ನಡಿಗೆಗೆ ಒಗ್ಗಿಸಿ ಸುಸಂಗತವಾಗಿ ಅನುವಾದಿಸಿಕೊಟ್ಟಿರುವ ಆರ್. ಎಲ್. ಅನಂತರಾಮಯ್ಯನವರು ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಹಾಲತಿ ಸೋಮಶೇಖರ್
'ಮೌನ' ಎಲ್–೧೯
ಎರಡನೇ ಹಂತ, ಕುವೆಂಪುನಗರ
ಮೈಸೂರು–೫೭೦೦೨೩

* * * * *

ಆರ್ಯರಿಗಾಗಿ ಹುಡುಕಾಟ—ಲೇಖಕರು: ಆರ್. ಎಸ್. ಶರ್ಮಾ, ಅನುವಾದಕರು: ಎಸ್. ಗುರುದತ್; ನವಕರ್ನಾಟಕ ಪ್ರಕಾಶನ; ಮೊದಲ ಮುದ್ರಣ ೧೯೯೬; ಪುಟ: ೯೬; ಬೆಲೆ: ೨೫ ರೂ.

ಈ ಮೊದಲು ಬ್ರಿಟಿಷರ ಆಡಳಿತಶಾಹಿ ಧೋರಣೆಯ ಹಿನ್ನೆಲೆಯಲ್ಲಿ ಭಾರತದ ಇತಿಹಾಸವನ್ನು ಅರ್ಥೈಸುವ ಪರಂಪರೆಯನ್ನು ಸೃಷ್ಟಿಸಲಾಗಿತ್ತು. ಸಂಶೋಧನೆಯ ಶಿಸ್ತಿನಲ್ಲೂ ಸ್ಥಳೀಯ ಆಕರಗಳನ್ನು ಕಡೆಗಣಿಸಲಾಗಿತ್ತು. ಆದರೆ ಸ್ಥಳೀಯ ಪುರಾಣ, ಜನಪದ, ಸ್ಮೃತಿಗಳನ್ನು ಗಮನಿಸಿ ಭಾರತೀಯ ಇತಿಹಾಸವನ್ನು ಗುರುತಿಸುವ ಕೆಲಸವನ್ನು ಕೋಮಿಲಾ ಥಾಪರ್, ಸುಮಿತ್ ಸರ್ಕಾರರಂಥ ವಿದ್ವಾಂಸರು ಮಾಡಿ ಭಾರತೀಯ ಇತಿಹಾಸಕ್ಕೆ ಹೊಸ ಆಯಾಮವನ್ನು ನೀಡಿದರು. ಭಾರತದ ಪ್ರಾಚೀನ ಐತಿಹಾಸಿಕ ಸಮಸ್ಯೆಗಳಿಗೆ ಉತ್ತರ ಹುಡುಕುವ ಪ್ರಯತ್ನವೂ ಆರಂಭವಾಯಿತು. ಇತಿಹಾಸದ ಹಲವಾರು ಸಂಕೀರ್ಣ ಸಮಸ್ಯೆಗಳಲ್ಲಿ 'ಆರ್ಯರು ಯಾರು?' ಎಂಬುದು ಪ್ರಮುಖವಾದದ್ದು.

ವಾಸ್ತವವಾಗಿ ಆರ್ಯರು ಯಾರೆಂಬುದು ಭಾರತೀಯರ ಸಮಸ್ಯೆ ಮಾತ್ರವಲ್ಲ; ಅದೊಂದು ಜಾಗತಿಕ ಸಮಸ್ಯೆ. ಆರ್ಯ ಜನಾಂಗದ ಕಲ್ಪನೆ ಭಾರತೀಯ ಮೂಲದ್ದು ಅಲ್ಲ. ಒಬ್ಬ ಗೌರವಸ್ಥ, ಮರ್ಯಾದಾ ಮನುಷ್ಯ ಅಥವಾ ಮ್ಲೇಚ್ಛ ಇಲ್ಲವೆ ಅನಾರ್ಯರಿಂದ ಬೇರೆಯಾದವನು ಎಂಬು

ದಷ್ಟೆ 'ಆರ್ಯ' ಎಂಬುದಕ್ಕೆ ಪ್ರಾಚೀನ ಸಾಹಿತ್ಯದ ಅರ್ಥಗಳು. ಆರ್ಯಾವರ್ತವು ಮುಖ್ಯವಾಗಿ ಗಂಗಾ-ಯಮುನಾ ದೋಅಬ್ ಮತ್ತು ಅದರ ಅಂಚಿನ ಪ್ರದೇಶಗಳೆಂದು ಹೇಳಲಾಗುತ್ತದೆ. ಪ್ರಸ್ತುತ ಕೃತಿಯಲ್ಲಿ ಆರ್ಯರ ಉಗಮವನ್ನು ಕುರಿತಂತೆ ಡಜನ್ ಗಟ್ಟಲೆ ಸಿದ್ಧಾಂತಗಳು ಬಗೆಬಗೆಯ ವಿವರಣೆಗಳಿಂದ ಹುಟ್ಟಿದವು ಎಂದು ಲೇಖಕರ ಮುನ್ನುಡಿಯಲ್ಲಿ ಹೇಳುತ್ತಾರೆ. ಈ ಯಾವ ಸಿದ್ಧಾಂತಗಳಿಗೂ ಲೇಖಕರು ಕೈ ಹಾಕದೆ ಆರ್ಯರೆಂದರೆ ಒಂದು ಪ್ರತ್ಯೇಕ ಜನಾಂಗವಲ್ಲ, ಬದಲಿಗೆ ಒಂದು ಆದಿ ಇಂಡೋ ಯೂರೋಪಿಯನ್ ಭಾಷೆಯನ್ನಾಡುತ್ತಿದ್ದ ಜನರ ಗುಂಪು ಎಂಬ ಅಂಶವನ್ನು ಸ್ವೀಕರಿಸುತ್ತಾರೆ. ಉಳಿದಂತೆ ಋಗ್ವೇದ, ಜೆಂಡ್ ಅವೆಸ್ತ, ಹೋಮರನ ಕೃತಿಗಳು ಹಾಗೂ ಪ್ರಾಚೀನ ಉಲ್ಲೇಖಗಳ ಪೂರ್ವ ಪಾಠಗಳು—ಅವುಗಳ ಸಾಮ್ಯತೆ, ಜ್ಞಾತಿ ಪದಗಳ ಅರ್ಥ ಇತ್ಯಾದಿಗಳಿಂದ ಆರ್ಯರನ್ನು ಹುಡುಕಲು ತೊಡಗುತ್ತಾರೆ.

ಮಾಕ್ಸ್ ಮುಲ್ಲರ್‌ರಂಥ ಆರಂಭಿಕ ಭಾಷಾಶಾಸ್ತ್ರಜ್ಞರು ಭಾಷೆಯನ್ನು ನಿರ್ದಿಷ್ಟ ಪಂಗಡಗಳಿಗೆ ಗಂಟುಹಾಕಿದರು. ಇದರಿಂದ ಸಂಸ್ಕೃತ, ಗ್ರೀಕ್, ಲ್ಯಾಟಿನ್, ಕೆಲ್ಟಿಕ್, ಟ್ಯುಟಾನಿಕ್, ಟೋಚಾರಿಯನ್, ಇರಾನಿಯನ್ ಮುಂತಾದ ಇಂಡೋ ಯೂರೋಪಿಯನ್ ಭಾಷೆಗಳನ್ನು ಮಾತಾಡುತ್ತಿದ್ದವರು ಆರ್ಯಪಂಗಡದವರು ಎಂಬ ಗ್ರಹಿಕೆಗೆ ಕಾರಣವಾಯಿತು. ಆರ್ಯರ ಸಮಸ್ಯೆ ಸಂಕೀರ್ಣಗೊಳ್ಳಲು ಇದೂ ಒಂದು ಕಾರಣ. ಈ ಹಿನ್ನೆಲೆಯಲ್ಲಿ ಆರ್. ಎಸ್. ಶರ್ಮರ 'ಆರ್ಯರಿಗಾಗಿ ಹುಡುಕಾಟ' ವಸ್ತುನಿಷ್ಠ ಮಾಹಿತಿಯನ್ನು ಮಂಡಿಸುತ್ತ ಹೋಗುತ್ತದೆ. ಅನಗತ್ಯವಿವರಗಳು ತಪ್ಪಿಯೂ ಸುಳಿಯುವುದಿಲ್ಲ. ತಮ್ಮ ಕೃತಿಯ ಉದ್ದೇಶವನ್ನು ಆರಂಭದಲ್ಲೇ ಸ್ಪಷ್ಟಪಡಿಸಿದ್ದಾರೆ. "ಆದಿಯ ಇಂಡೋ-ಯೂರೋಪಿಯನ್ ಗುಂಪುಗಳ ಕಾಲ, ನೆಲೆಗಳನ್ನು ಗುರುತಿಸುವ ಈ ಪರಿಶೋಧನೆಯಲ್ಲಿ ನಾವು ಈ ಸಮುದಾಯಗಳಲ್ಲಿ ಪ್ರಚಲಿತವಿದ್ದ ಪ್ರಾಚೀನ ಪುರಾಣ ಕತೆಗಳನ್ನಾಗಲಿ, ಜಾನಪದ ಸಾಹಿತ್ಯವನ್ನಾಗಲಿ ಗಣನೆಗೆ ತೆಗೆದುಕೊಂಡಿಲ್ಲ. ಜ್ಞಾತಿ ಪದಗಳು ಹಾಗೂ ಇಂಡೊ-ಯೂರೋಪಿಯನ್ ಭಾಷೆಯ ಪ್ರಾಚೀನ ಪಾಠಗಳಿಂದ ಪತ್ತೆಯಾಗುವ ವಿಶೇಷ ಸಾಂಸ್ಕೃತಿಕ ಲಕ್ಷಣಗಳನ್ನು ಪುರಾತತ್ತ್ವ ಪುರಾವೆಯು ಸಮರ್ಥಿಸುತ್ತದೆಯೇ ಎಂಬುದನ್ನು ನಾವು ಇಲ್ಲಿ ಮುಖ್ಯವಾಗಿ ಪರಿಶೀಲಿಸುತ್ತೇವೆ"—ಎಂಬ ಲೇಖಕರ ಮಾತು ಕೃತಿಯ ಚೌಕಟ್ಟನ್ನು ಹಾಗೂ ವಿಧಿಯನ್ನೂ ಹೇಳಿದೆ. ವಾಸ್ತವವಾಗಿ ಈ ಕೃತಿ ಉಪನ್ಯಾಸವೊಂದರ ವಿಸ್ತೃತ ಆವೃತ್ತಿ. ಕೆಲವೆಡೆ ಬರಹದಲ್ಲಿ ಉಪನ್ಯಾಸದ ಶೈಲಿಯೆ ಉಳಿದುಬಿಟ್ಟಿದೆ. ಉತ್ತಮ ಅನುವಾದವನ್ನು ಗುರುದತ್ ನೀಡಿದ್ದಾರೆ. ಅಗತ್ಯವಿರುವ ಕಡೆ ಮೂಲದಲ್ಲಿಲ್ಲದ ಅಡಿಟಿಪ್ಪಣಿಗಳನ್ನು ಸೇರಿಸಿ ಚಿಕ್ಕಕೃತಿ ಪೂರ್ಣತೆಯನ್ನು ಪಡೆಯುವಂತೆ ಪ್ರಯತ್ನಿಸಿದ್ದಾರೆ. ಐದು ಮುಖ್ಯ ಅಧ್ಯಾಯಗಳಲ್ಲಿ ಈ ಕೃತಿ ಹರಡಿಕೊಂಡಿದೆ. ಕಡೆಯಲ್ಲಿ ಕೊಡಲಾದ ಅಧ್ಯಾಯವಾರು ಆಕರಗಳ ಮತ್ತು ಟಿಪ್ಪಣಿಗಳು ವಿಶೇಷ ಆಸಕ್ತರಿಗೆ ತುಂಬ ಸಹಕಾರಿಯಾಗಿವೆ. ಕೃತಿಯ ಆರಂಭದಲ್ಲೆ ನೀಡಿದ

ನಕ್ಷೆಗಳು ಆರ್ಯರ ಭೌಗೋಳಿಕ ಪರಿಸರದ ಪರಿಕಲ್ಪನೆಯನ್ನು ಹಾಗೂ ರಾಜಕೀಯ ಗಡಿಗಳನ್ನು ತಿಳಿಸಿಕೊಡಲು ಉಪಯುಕ್ತವಾಗಿವೆ.

ಒಟ್ಟಾರೆಯಾಗಿ ಇತಿಹಾಸದ ಬಗ್ಗೆ ಕಿಂಚಿತ್ ಆಸಕ್ತಿಯುಳ್ಳ ಓದುಗರು ಓದಲೇಬೇಕಾದ ಕೃತಿ ಇದು. ಗಂಭೀರ ವಿಷಯಗಳನ್ನು ಹೇಳುವುದಕ್ಕೆ ಭಾರೀಗಾತ್ರದ ಸಂಪುಟಗಳೇ ಬೇಕಿಲ್ಲ ಎಂಬುದನ್ನು ಈ ಕಿರುಕೃತಿ ಮನಗಾಣಿಸುತ್ತದೆ. ಪುಸ್ತಕದ ಮುದ್ರಣದ ಬಗ್ಗೆ ಎರಡು ಮಾತಿಲ್ಲ. ಗಮನಸೆಳೆಯುವ ಮುಖಪುಟ ಇಲ್ಲದಿದ್ದರೂ ಓದಿಗಾಗಲಿ, ಜೇಬಿಗಾಗಲಿ ಈ ಕೃತಿ ಭಾರವೆಂದೇನೂ ಅನಿಸುವುದಿಲ್ಲ.

ಕನ್ನಡ ಪುಸ್ತಕಗಳ ಪ್ರಕಟಣೆ ದುಃಸ್ಥಿತಿಯನ್ನು ತಲುಪಿದೆ ಎಂಬ ಕೂಗು ಎಲ್ಲಿಂದಲೋ ಬರುತ್ತಿದೆ. ಇದು ನವಕರ್ನಾಟಕದ ೭೮೫ನೆಯ ಪ್ರಕಟಣೆ! ಬಹುತೇಕ ವಿಶ್ವವಿದ್ಯಾನಿಲಯಗಳು, ಪ್ರಸಿದ್ಧವಾಗಿದ್ದ ಸಂಸ್ಥೆಗಳು ಕನ್ನಡ ಪ್ರಕಟಣೆಯನ್ನು ಮರೆತು ಕೂತಿರುವಾಗ ಕನ್ನಡ ಗ್ರಂಥ ಪ್ರಕಟಣೆಯ ಕ್ಷೇತ್ರದಲ್ಲಿ ನವಕರ್ನಾಟಕ ಹೊಸ ಭರವಸೆಯನ್ನು ನೀಡಿದೆ. ಕನ್ನಡಕ್ಕೆ ಹೊಸ ವಿಷಯಗಳನ್ನು, ಚಿಂತನೆಗಳನ್ನು ಹೊರಗಿನಿಂದ ತರುವ, ಕನ್ನಡಕ್ಕೆ ಮೌಲಿಕ ಕೊಡುಗೆಗಳನ್ನು ನೀಡುತ್ತಿರುವ ನವಕರ್ನಾಟಕದ ಕಾರ್ಯ ಸ್ತುತ್ಯವಾದುದು.

ಶ್ರೀಪಾದ ಭಟ್
ಸಂಖ್ಯೆ ೩೦, ದೇವೀರಮ್ಮಣ್ಣಿ ಅಗ್ರಹಾರ
ಚಿಕ್ಕ ಮೊಹಲ್ಲ, ಮೈಸೂರು-೫೭೦೦೦೪

ಉತ್ತರಕ್ರಿಯೆ : ಪರೀಕ್ಷೆಗಳಲ್ಲಿ ಉತ್ತರ ಬರೆಯುವ ಕ್ರಿಯೆ.

ಗಾಯಕ : ಗಾಯ ಪಡಿಸುವವನು.

ಅಶ್ವಶಕ್ತಿ : ಎರಡೂವರೆ ಸೇರು ಹುರುಳಿ.

ಅಂಚೆ : ದಮಯಂತಿ ಪ್ರಾರಂಭಿಸಿದ 'ಡಾಕ್' ಪದ್ಧತಿ

ಐಸ್ : ಆಧುನಿಕ ಕವನಗಳನ್ನು ಓದುವಾಗ ತಲೆಯ ಮೇಲಿಡಬೇಕಾದ ಪಟ್ಟಿ.

ಪತಿ : ದಂಪತಿಗಳಲ್ಲಿ ದಂ ಕಳೆದುಕೊಂಡವನು.

(ನಾ. ಕಸ್ತೂರಿಯವರ ಅನರ್ಥಕೋಶದಿಂದ)

ಓದುಗರ ಅನಿಸಿಕೆಗಳು

ಮಾನ್ಯರೆ,

ಜನವರಿ ೯೭ರ ಪುಸ್ತಕ ಪ್ರಪಂಚದ ಮುಖಪುಟ ಮತ್ತು ಹಿಂಭಾಗದ ರಕ್ಷಾಪುಟ (ಹಸು ಕರು ಮತ್ತು ಸುಗ್ಗಿಯ ಸಂಭ್ರಮ) ನೋಡಿದ ಕೂಡಲೇ ಇದು ಸಂಕ್ರಾಂತಿಯ ಸಂಚಿಕೆ ಎಂದು ಮನದಟ್ಟಾಯಿತು. ಆದರೆ ಈ ಸಂಚಿಕೆಯಲ್ಲಿ ಸಂಕ್ರಾಂತಿಯನ್ನು ಕುರಿತ ಲೇಖನ ಇಲ್ಲದಿರುವುದು ಒಂದು ಕೊರತೆಯಾಗಿ ಕಂಡು ಬಂತು. ಎಲ್ಲ ವಿಶಿಷ್ಟ ಸಂದರ್ಭಗಳಲ್ಲಿಯೂ ಆ ಬಗ್ಗೆ ವಿಶೇಷ ಲೇಖನಗಳನ್ನು ಪ್ರಕಟಿಸುತ್ತಿದ್ದ ಪುಸ್ತಕ ಪ್ರಪಂಚ ಏಕೆ ಸಂಕ್ರಾಂತಿ ಬಗ್ಗೆ ಲೇಖನ ಪ್ರಕಟಿಸಲಿಲ್ಲ ತಿಳಿಯದು.

ನಾರಾಯಣಸ್ವಾಮಿ
ದಾಸನೂರು

* * * * *

ಸಂಪಾದಕರಿಗೆ,

ಶ್ರೀ ಎ. ಪಿ. ಚಂದ್ರಶೇಖರ್ ಅವರ 'ಕೃಷಿಕರ ಪರವಾಗಿ ಸರಕಾರ ಏನು ಮಾಡಬೇಕು' (ಪುಸ್ತಕ ಪ್ರಪಂಚ ಜನವರಿ ೯೭) ಎಂಬ ಲೇಖನ ಚಿಕ್ಕದಾದರೂ ಚೊಕ್ಕವಾಗಿದೆ. ದೇಶದ ಕಣಜ ತುಂಬುವ ರೈತನ ಬಗ್ಗೆ ಸಂಕ್ರಾಂತಿಯ ಸಂದರ್ಭದಲ್ಲಿ ಈ ಲೇಖನ ಪ್ರಕಟವಾಗಿರುವುದು ಉಚಿತವಾಗಿದೆ.

ನಾನಿರುವುದೇ ಸೌಲಭ್ಯ ಪಡೆಯಲು ಏನಕೇನ ಪ್ರಕಾರೇಣ ಸಾಲ ದೊರೆತರಾಯಿತು. ಹಿಂದಿರುಗಿಸುವುದನ್ನು ಮರೆತಾಯಿತು ಎಂಬುದನ್ನು ಕೃಷಿಕರು ಬಿಡಬೇಕು. ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವುದು ತಪ್ಪಲ್ಲ. ಆದರೆ ಅದನ್ನು ಸದ್ವಿನಿಯೋಗ ಪಡಿಸಿಕೊಂಡು ಸಕಾಲದಲ್ಲಿ ವಾಪಸ್ ಮಾಡದಿರುವುದು ತಪ್ಪು.

ರೈತನು ಸರ್ಕಾರದ ಸೌಲಭ್ಯಗಳನ್ನು ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ಪಡೆಯುವುದು, ಸೌಲಭ್ಯಕ್ಕೆ ತನಗಿಂತ ಹೆಚ್ಚು ಅರ್ಹ ಫಲಾನುಭವಿ ಇದ್ದಲ್ಲಿ ಅವನಿಗೆ ಅವಕಾಶ ಕಲ್ಪಿಸಿ ಕೊಡುವುದು, ಒಂದೊಮ್ಮೆ ತನಗೆ ದೊರೆತ ಸೌಲಭ್ಯವನ್ನು ಆ ಉದ್ದೇಶಕ್ಕಾಗಿಯೇ ಬಳಸಿಕೊಂಡು, ಅದನ್ನು ಸಕಾಲದಲ್ಲಿ ಹಿಂದಿರುಗಿಸುವ ಛಲವನ್ನು ರೂಢಿಸಿಕೊಳ್ಳಬೇಕು. ಆಗ ಮಾತ್ರ ರೈತನೂ ಮುಂದುವರಿಯುತ್ತಾನೆ. ಯೋಜನೆಗಳೂ ಯಶಸ್ವಿಯಾಗುತ್ತವೆ. ದೇಶವೂ ಅಭಿವೃದ್ಧಿಯಾಗುತ್ತದೆ. ನಾನೊಬ್ಬ ರೈತನಾಗಿ ಈ ವಿಷಯವನ್ನು ತಿಳಿಸಲು ಬಯಸುತ್ತೇನೆ.

ಬಿ. ಸುಂಕಾಪೂರ
ಅಥಣಿ

ಮಾನ್ಯರೆ,

ಜನವರಿ ಪುಸ್ತಕ ಪ್ರಪಂಚದಲ್ಲಿ ಪ್ರಕಟವಾಗಿರುವ 'ಗುಟಕಾನಂಟು ಸಾವಿಗೆ ಗಂಟು' ಬರೆದಿರುವವರು ಡಾ॥ ಕರವೀರಪ್ರಭು ಕ್ಯಾಲಕೊಂಡ ಅವರು. ಈ ಲೇಖನ ಓದಿದಾಗ ನನಗೆ ನೈನಡುಕ ಉಂಟಾಯಿತು. ಏಕೆ ಗೊತ್ತಾಯಿತೆ? ನಾನು ಈ ಗುಟಕಾದ ದಾಸಾನುದಾಸ. ಯಾವುದೋ ಸಂದರ್ಭದಲ್ಲಿ ಇದರ ಚಟ ಹತ್ತಿತು. ಬಿಡಬೇಕೆಂದು ಪ್ರಯತ್ನಿಸಿದ್ದುಂಟು. ಆದರೆ ಬಿಡಲಾರದೆ ಮುಂದುವರಿಸಿದ್ದೆ. ಇದರಿಂದ ಉಂಟಾಗಿರುವ ಕೆಲವು ಪರಿಣಾಮಗಳನ್ನು ಈಗಾಗಲೇ ಅನುಭವಿಸುತ್ತಿದ್ದೇನೆ. ಈ ಲೇಖನ ಓದಿದ ನಂತರ ಇನ್ನು ಮುಂದೆ ನಾನು ಖಂಡಿ
ಗುಟಕಾ ಸೇವಿಸುವುದಿಲ್ಲ ಎಂದು ಪ್ರತಿಜ್ಞೆ
ಮಾಡಿದ್ದೇನೆ. ಇದರಿಂದ ಆಗುವ ಅನಾಹ
ತಕ್ಕೆ ನಾನೇ ಉದಾಹರಣೆಯಾಗಿದೆ(ನ
ಆಗಿ ಹೋದುದಕ್ಕೆ ಪಶ್ಚಾತ್ತಾಪಪಟ್ಟು
ಮುಂದೆ ಆಗದಂತೆ ಎಚ್ಚರ ವಹಿಸಿದ್ದೇನೆ
ನನ್ನ ಊರು ಮತ್ತು ಹೆಸರು ಯಾವುದ
ಬೇಡ.

ಈ ಲೇಖನ ಪ್ರಕಟಿಸಿದ ನಿಮಗ
ಇದನ್ನು ಬರೆದ ಡಾ॥ ಕರವೀರಪ್ರಭ
ಕ್ಯಾಲಕೊಂಡ ಅವರಿಗೂ ನನ್ನ ವಂದ
ಗಳು.

ಹೆಸರು ಮತ್ತು ಊರು ಇ

* * * * *

ಮಾನ್ಯರೆ,

ಜನವರಿ ಸಂಚಿಕೆಯಲ್ಲಿ ಪ್ರಕಟವಾದ ರಂಗಧಾಮಯ್ಯನವರ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ವಿಜೇತ ಡಾ॥ ವಿ. ಪ್ರಕಾಶ್ ಎಂಬ ಲೇಖನ ಚೆನ್ನಾಗಿದೆ. ಅದರಲ್ಲಿ ಸಂಪಾದಕರ ಟಿಪ್ಪಣಿಯು ಪರಿಣಾಮಕಾರಿಯಾಗಿದೆ. ಕನ್ನಡಿಗರೊಬ್ಬರು ಅದೂ ಮೈಸೂರಿನವರೇ ಆದ ಡಾ॥ ವಿ. ಪ್ರಕಾಶ್ ಅವರು ಸಿ.ಎಫ್.ಟಿ.ಆರ್.ಐ ನಂತಹ ಬೃಹತ್ ಸಂಸ್ಥೆಯ ನಿರ್ದೇಶಕ ಸ್ಥಾನದಲ್ಲಿ ಕುಳಿತು ಈ ಕೇಂದ್ರ ಸರ್ಕಾರದ ಒಡೆತನದ ಸಂಸ್ಥೆಯಲ್ಲಿ ಕನ್ನಡದ ವಾತಾವರಣ ನಿರ್ಮಾಣ ಮಾಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

ಕನ್ನಡ ನಾಡಿನ ಎಲ್ಲ ಸಂಪತ್ತನ್ನು ಹ
ಬೆಳೆದು ನಿಂತಿರುವ ಈ ಕೇಂದ್ರ ಸ್ವಾಮ್ಯ
ಸಂಸ್ಥೆಗಳಿಗೆ ಪ್ರವೇಶಿಸಿದರೆ ಕನ್ನಡಿಗ
ಅನಾಥ ಪ್ರಜ್ಞೆ ಆವರಿಸುವುದು ಸಾಮಾ
ಆದರೆ ಈ ಲೇಖನ ಓದಿದಾಗ ಮೈಸೂ
ಸಿ.ಎಫ್.ಟಿ.ಆರ್.ಐನಲ್ಲಿ ಕನ್ನಡಿಗರು
ಪರಕೀಯತೆಯಿಂದ ಸಂಪೂರ್ಣ ಮುಕ್ತ
ಎಂಬುದು ವೇದ್ಯವಾಗುತ್ತದೆ. ಶ್ರೇ
ವಿಜ್ಞಾನಿ, ದಕ್ಷ ಆಡಳಿತಗಾರ, ಮ
ವೀಯತೆ ಮೈಗೂಡಿಸಿಕೊಂಡ ಉ
ಅಧಿಕಾರಿ, ಕ್ರಿಯಾಶೀಲ ಕನ್ನಡಿಗ
ಎಲ್ಲವೂ ಆಗಿರುವ ಡಾ॥ ವಿ. ಪ್ರಕಾ
ಅವರನ್ನು ಪರಿಚಯಿಸಿದ ಪುಸ್
ಪ್ರಪಂಚಕ್ಕೆ ನನ್ನ ಅಭಿನಂದನೆಗಳು.


ವಸುಮ
ಮೈಸೂರ

Reg. No. KRNN.29 / WPP 6

LICENCE No. 21
LICENCED TO POST WITH PAYMENT

'ಕುವೆಂಪು' ಅವರ

"ಜನಪ್ರಿಯ ವಾಲ್ಮೀಕಿ ರಾಮಾಯಣ"



ಒಂಬತ್ತನೆಯ ಮುದ್ರಣದಲ್ಲಿ ಸಮಿತಿ ಪ್ರಕಟಿಸಿರುವ ಜನಪ್ರಿಯ ಕೃತಿ. ಸರಳ ಗದ್ಯದ ಅಂದವಾದ ಮುದ್ರಣದಲ್ಲಿ ೪೨೬ ಪುಟಗಳ ಸಮಗ್ರ ರಾಮಾಯಣ ಕೇವಲ ೫೪ ರೂ.ಗಳಿಗೆ ದೊರೆಯುತ್ತದೆ. (ಅಂಚೆ ವೆಚ್ಚ ೧ ಪ್ರತಿಗೆ ೧೬ ರೂ. ಪ್ರತ್ಯೇಕ.)

ಹೆಚ್ಚಿನ ವಿವರಗಳಿಗೆ: ಪ್ರಧಾನ ಸಂಪಾದಕ

ಪ್ರಕಟಣ ಶಾಖೆ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಮೈಸೂರು

Edited by Chandrashekhararadhya, Printed by M. Krishnappa Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.

Phone : 512485